ಶನಿವಾರ, ನವೆಂಬರ್ 22, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ

ಮೈಸೂರಿನ ಹಳೆ ಡಿಸಿ ಕಚೇರಿ ಬಳಿ ಶುಕ್ರವಾರ ವಿದ್ಯಾರ್ಥಿನಿಯೊಬ್ಬರು ಕೆಪಿಎಸ್ ಮ್ಯಾಗ್ನೆಟ್ ಸ್ಕೂಲ್ಸ್ ಹೆಸರಿನಲ್ಲಿ ಸರ್ಕಾರಿ ಶಾಲೆ ಮುಚ್ಚಲಾಗುತ್ತಿದೆ ಎಂದು ದೂರಿ ಪ್ರತಿಭಟಿಸಿದರು

ಯಕ್ಷೋತ್ಸವ

ಮಂಗಳೂರಿನಲ್ಲಿ ನಡೆದ ವಿದ್ಯಾರ್ಥಿಗಳ ಯಕ್ಷಗಾನ ಸ್ಪರ್ಧೆ ‘ಯಕ್ಷೋತ್ಸವ’ದಲ್ಲಿ ವೇಷಧಾರಿ ಒಬ್ಬರು ಗಮನ ಸೆಳೆದರು

SRI SIDDHARTHA ACADEMY OF HIGHER EDUCATION
Reach the Unreached
TUMKUR

ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್

ಯುಜಿಸಿ ಕಾಯ್ದೆ 1956 ಸೆಕ್ಷನ್ 3ರ ಅನ್ವಯ ಸ್ವಾಯತ್ತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ.
ಅಗಳಕೋಟೆ, ತುಮಕೂರು, ಕರ್ನಾಟಕ.

ಡಾ. ಎಚ್ ಎಂ ಗಂಗಾಧರಯ್ಯ
ಸ್ಥಾಪಕರು, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ

ಡಾ. ಜಿ ಶಿವಪ್ರಸಾದ್
ಸ್ಥಾಪಕ ಕುಲಾಧಿಪತಿಗಳು, ಸಾಹೆ, ತುಮಕೂರು

14ನೇ ವಾರ್ಷಿಕ ಘಟಿಕೋತ್ಸವ

22ನೇ ನವೆಂಬರ್ 2025 ರಂದು
ಸಮಯ: ಬೆಳಗ್ಗೆ 10.30
ಸ್ಥಳ: ಡಾ. ಎಚ್ ಎಂ ಗಂಗಾಧರಯ್ಯ ಸ್ಮಾರಕ ಭವನ
ಎಸ್‌ಎಸ್‌ಎಂಸಿ ಕ್ಯಾಂಪಸ್, ತುಮಕೂರು

SRI SIDDHARTHA ACADEMY OF HIGHER EDUCATION
Reach the Unreached
TUMKUR
Team SSAHE

Sri Siddhartha Medical College & Hospital
Tumakuru.

Sri Siddhartha Institute of Medical Sciences & Research Centre
T.Begur, Nelamangala, Bengaluru.

Sri Siddhartha Dental College & Hospital
Tumakuru.

Sri Siddhartha Institute of Technology
Tumakuru.

ಘನ ಉಪಸ್ಥಿತಿ


ಡಾ.ಜಿ.ಪರಮೇಶ್ವರ
ಗೌರವಾನ್ವಿತ ಕುಲಾಧಿಪತಿಗಳು, ಸಾಹೇ, ತುಮಕೂರು
ಗೌರವಾನ್ವಿತ ಗೃಹ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿ

ಶ್ರೀ ಜೈರಾಮ್ ರಮೇಶ್
ಮಾಜಿ ಕೇಂದ್ರ ಸಚಿವರು, ಭಾರತ ಸರ್ಕಾರ
ಸಂಸತ್ತು ಸದಸ್ಯರು (ಸಂಸದರು), ರಾಜ್ಯಸಭೆ, ಕರ್ನಾಟಕ

ಗೌರವ ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತರು

ಡಾ. ಕೆ.ಪಿ.ಜೆ. ರೆಡ್ಡಿ
ನಿವೃತ್ತ ಪ್ರಾಧ್ಯಾಪಕರು, ಏರೋಸ್ಪೇಸ್ ಎಂಜಿನಿಯರಿಂಗ್
ಭಾರತೀಯ ವಿಜ್ಞಾನ ಸಂಸ್ಥೆ , ಬೆಂಗಳೂರು.

ಶ್ರೀ ಸ್ವಾಮಿ ಜಪಾನಂದ ಜಿ ಮಹಾರಾಜ್
ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ಥಾಪಕರು
ಪಾವಗಡ, ತುಮಕೂರು

ಗೌರವಾನ್ವಿತ ಅತಿಥಿಗಳು

ಶ್ರೀಮತಿ ಕನ್ನಿಕಾ ಪರಮೇಶ್ವರಿ
ಮ್ಯಾನೇಜ್‌ಮೆಂಟ್ ಟ್ರಸ್ಟಿ , ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ

ಡಾ. ಜಿ.ಎಸ್. ಆನಂದ್
ಮ್ಯಾನೇಜ್‌ಮೆಂಟ್ ಟ್ರಸ್ಟಿ , ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ

ಡಾ.ಲಿಂಗೇಗೌಡ ಕೆ.ಬಿ.
ಗೌರವಾನ್ವಿತ ಉಪಕುಲಪತಿಗಳು

ಡಾ.ಅಶೋಕ್ ಮೆಹತಾ
ಕುಲಸಚಿವರು

ಡಾ.ಗುರುಶಂಕರ್ ಜಿ.
ಪರೀಕ್ಷಾಂಗ ನಿಯಂತ್ರಕರು

Accredited A+ by NAAC
National Assessment and Accreditation Council

6000+ Doctors / 30000+ Engineers / 1500+ Dentists / Alumni network across the 100+ countries

ಸಿದ್ಧಸೂತ್ರಗಳಿಂದ ಹೊರಬರದ 'ಮಾರುತ'

ದಿನದಿಂದ ದಿನಕ್ಕೆ ಚಿತ್ರರಂಗ ಅಪ್‌ಡೇಟ್ ಆಗುತ್ತಿದೆ. ಹೊಸ ಬಗೆಯ ಕಥೆಗಳಿಗೆ ಸಿನಿಜಗತ್ತು ತೆರೆದುಕೊಳ್ಳುತ್ತಿದೆ. ಆದರೆ ಹಳೆ ತಲೆಮಾರಿನ ಕೆಲ ನಿರ್ದೇಶಕರು ಮಾತ್ರ ಆ ಬದಲಾವಣೆಗೆ ಇನ್ನೂ ತೆರೆದುಕೊಂಡಿಲ್ಲ ಎಂಬುದಕ್ಕೆ ಮತ್ತೊಂದು ನಿದರ್ಶನದಂತಿದೆ ಎಸ್.ನಾರಾಯಣ್ ನಿರ್ದೇಶನದ 'ಮಾರುತ'. ಸೋಷಿಯಲ್ ಮೀಡಿಯಾಗಳ ಬಳಕೆಯಲ್ಲಿ ಎಚ್ಚರ ತಪ್ಪಿದರೆ ಏನೆಲ್ಲ ಅನಾಹುತಗಳಾಗಬಹುದು ಎಂಬುದು ಚಿತ್ರದ ಒಂದೆಳೆ ಕಥೆ. ಕಥಾವಸ್ತು ಇವತ್ತಿನ ಕಾಲಘಟ್ಟದ್ದು. ಆದರೆ ಅದರ ವಿಸ್ತರಣೆಯಲ್ಲಿ ನಿರ್ದೇಶಕರು ಹತ್ತು–ಹದಿನೈದು ವರ್ಷಗಳ ಹಿಂದಿನ ಸಿದ್ಧಸೂತ್ರಗಳಿಂದ ಆಚೆ ಬಂದಿಲ್ಲ. ಹೀಗಾಗಿ ಸಿನಿಮಾ ಮೊದಲಾರ್ಧ ಪೂರ್ತಿ ತಾಳ್ಮೆ ಪರೀಕ್ಷಿಸುತ್ತದೆ.

ಕಥಾನಾಯಕ ಈಶ ಎಂಜಿನಿಯರಿಂಗ್ ಓದುತ್ತಿರುವ ಮಲೆನಾಡಿನ ಹುಡುಗ. ಮಗನನ್ನು ಎಂಜಿನಿಯರ್ ಮಾಡಬೇಕೆಂದು ಹಳ್ಳಿಯಲ್ಲಿ ಅಪ್ಪ, ಅಮ್ಮ ಕಷ್ಟಪಡುತ್ತಿರುತ್ತಾರೆ. ಆದರೆ ಮಗನಿಗೆ ಅದರ ಪರಿವೇ ಇಲ್ಲ. ಮೋಜು, ಮಸ್ತಿ ಮಾಡಿಕೊಂಡು, ಸಿನಿಮಾ ನಿರ್ದೇಶಕನಾಗಬೇಕೆಂದು ಕನಸು ಕಾಣುತ್ತಿರುತ್ತಾನೆ. ಆತನ ಕಾಲೇಜು, ಹಾಸ್ಟೆಲ್‌ನಲ್ಲಿ ಒಂದಷ್ಟು ಸನ್ನಿವೇಶಗಳು ನಡೆಯುತ್ತವೆ. ಈಶನಾಗಿ ಶ್ರೇಯಸ್ ಮಂಜು ಕಾಣಿಸಿಕೊಂಡಿದ್ದಾರೆ. ಅವರನ್ನು ಮಾಸ್ ಹೀರೊ ಆಗಿ ಬಿಂಬಿಸಲು ಬೇಕಾದ ಹಾಡು, ಫೈಟ್, ಹಾಸ್ಯ ಎಲ್ಲವೂ ಇವೆ. ಆದರೆ ಮುಖ್ಯಕಥೆಗೂ ಈ ಸನ್ನಿವೇಶಗಳಿಗೂ ಏನು ಸಂಬಂಧ ಎಂಬುದು ಕೊನೆ ತನಕ ಅರ್ಥವಾಗುವುದಿಲ್ಲ!

ಈಶನ ಮಾವನಾಗಿ ಸಾಧು ಕೋಕಿಲ ಕಾಣಿಸಿಕೊಂಡಿದ್ದಾರೆ. ನಗಿಸಲಿಕ್ಕಾಗಿಯೇ ಸೃಷ್ಟಿಯಾದ ಪಾತ್ರವಿದು. ಇಲ್ಲಿನ ಅನವಶ್ಯ ಹಾಸ್ಯ ಸನ್ನಿವೇಶಗಳು ನಗುವಿಗಿಂತ ಕಿರಿಕಿರಿ ಮೂಡಿಸುವುದೇ ಹೆಚ್ಚು. ಈಶನ ಮನೆ, ಊರು, ಪ್ರೀತಿ, ನಿರ್ದೇಶಕನಾಗುವ ಕನಸಿನ ನಡುವೆ ನಗರದಲ್ಲಿ ಹುಡುಗಿಯರು ಕಾಣೆಯಾಗುತ್ತಿದ್ದಾರೆ ಎಂಬ ಉಪಕಥೆಯೊಂದು ಪ್ರಾರಂಭದಲ್ಲಿಯೇ ತೆರೆದುಕೊಳ್ಳುತ್ತದೆ. ಆ ಜಾಲವನ್ನು ಬೆನ್ನತ್ತುವುದು ಪೊಲೀಸ್ ಅಧಿಕಾರಿಯಾಗಿರುವ ದುನಿಯ ವಿಜಯ್. ಅವರ ಪಯಣವೇ 'ಮಾರುತ' ಎಂಬಂತೆ ಬಿಂಬಿಸಲಾಗಿದೆ.

ಈಶನ ಊರಿನದ್ದೇ ಹುಡುಗಿ ಅನನ್ಯ ಆತನ ಬದುಕಿನಲ್ಲಿ ಬರುತ್ತಾಳೆ. ಯಾಕೆ ಬಂದಳು?, ಅದರಿಂದ ಏನೆಲ್ಲ ಆಗುತ್ತದೆ?, ಅದಕ್ಕೆ ಸೋಷಿಯಲ್ ಮೀಡಿಯಾ ಹೇಗೆ ಕಾರಣ ಎಂಬ ಹುಡುಕಾಟವೇ ಚಿತ್ರದ ದ್ವಿತೀಯಾರ್ಧ. ಮೊದಲಾರ್ಧಕ್ಕೆ ಹೋಲಿಸಿದರೆ ದ್ವಿತೀಯಾರ್ಧ ವೇಗವಾಗಿದೆ. ಸಿನಿಮಾ ಮುಗಿಯುವ ಹೊತ್ತಿಗೆ ನಲವತ್ತು ನಿಮಿಷಗಳಲ್ಲಿ ಮುಗಿಸಬಹುದಾದ ಕಥೆಯನ್ನು ನಿರ್ದೇಶಕರು ನೂರೈವತ್ತು ನಿಮಿಷಗಳಿಗೆ ಎಳೆದಂತೆ ಭಾಸವಾಗಿರುತ್ತದೆ.

ದುನಿಯ ವಿಜಯ್ ತಮ್ಮ ಖಡಕ್ ಅಭಿನಯದಿಂದ ಇಷ್ಟವಾಗುತ್ತಾರೆ. ಆದಾಗ್ಯೂ ಅವರ ಪಾತ್ರ ಪೋಷಣೆಯಲ್ಲಿ ಇನ್ನಷ್ಟು ಗಟ್ಟಿತನವಿರಬೇಕಿತ್ತು. ಆ್ಯಕ್ಷನ್ ಹೀರೊ ಆಗಿ ಶ್ರೇಯಸ್ ಮಂಜು ಅವರ ನಟನೆಯನ್ನು ಸಾಕಷ್ಟು ಕಡೆ ಸಹಿಸಿಕೊಳ್ಳಬೇಕು. ಅನನ್ಯಳಾಗಿ ಬೃಂದಾ ಆಚಾರ್ಯ ನಟನೆಗೂ ಅಷ್ಟೇನು ಪ್ರಾಮುಖ್ಯವಿಲ್ಲ. ಸಾಧು ಕೋಕಿಲ ದಶಕಗಳಷ್ಟು ಹಳೆದಾದ ಹಾಸ್ಯಗಳನ್ನಿಟ್ಟುಕೊಂಡು ನಗಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ. ತಾರಾ, ಶರತ್ ಲೋಹಿತಾಶ್ವ ನಾಯಕನ ಅಪ್ಪ, ಅಮ್ಮನಾಗಿ ಇಷ್ಟವಾಗುತ್ತಾರೆ. ಕಥೆಯೇ ಹಳಿ ತಪ್ಪಿ ಸಂಗೀತ, ಛಾಯಾಚಿತ್ರಗ್ರಹಣ ಯಾವುದೂ ಹೊಸತು ಅನ್ನಿಸುವುದಿಲ್ಲ.

ವಿನಾಯಕ ಕೆ.ಎಸ್.

ನಾವು ನೋಡಿದ ಸಿನಿಮಾ

ಮಾರುತ
- ನಿರ್ಮಾಣ: ರಮೇಶ್ ಯಾದವ್, ಕೆ.ಮಂಜು
- ನಿರ್ದೇಶನ: ಎಸ್.ನಾರಾಯಣ್
- ತಾರಾಗಣ: ದುನಿಯ ವಿಜಯ್, ಶ್ರೇಯಸ್ ಮಂಜು, ಬೃಂದಾ ಆಚಾರ್ಯ ಮತ್ತಿತರರು



ತಾರಾ, ಶಶಿಕುಮಾರ್

ರುದ್ರ ಅವತಾರ ತಾಳಿದ ಶಶಿಕುಮಾರ್

ಶಶಿಕುಮಾರ್, ತಾರಾ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ 'ರುದ್ರ ಅವತಾರ' ಚಿತ್ರದ ಪಾತ್ರಗಳನ್ನು ಪರಿಚಯಿಸುವ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪೋಷಕರ ಕುರಿತಾದ ಕಥೆ ಹೊಂದಿರುವ ಚಿತ್ರಕ್ಕೆ ಸವಾದ್ ಮಂಗಳೂರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಪ್ರೇಮ್ ಜಿ ಪ್ರೊಡಕ್ಷನ್ಸ್ ಮೂಲಕ ಉದ್ಯಮಿ ಪ್ರೇಮಾನಂದ್ ವಿ. ಗವಸ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

'ರುದ್ರ ಅವತಾರ' ಶಿವನ ಮತ್ತೊಂದು ರೂಪ. ಮಧ್ಯಮ ವರ್ಗದವರು ತಮ್ಮ ಮಕ್ಕಳ ರಕ್ಷಣೆಗೋಸ್ಕರ ಯಾವ ರೀತಿ ಹೋರಾಡುತ್ತಾರೆ?, ಹೇಗೆ ರುದ್ರ ಅವತಾರ ತಾಳುತ್ತಾರೆ? ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಮಕ್ಕಳ ಕನಸುಗಳನ್ನು ಈಡೇರಿಸುವ ಸಲುವಾಗಿ ಪೋಷಕರು ತಮ್ಮ ಕನಸು, ಆಸೆಗಳನ್ನು ಕಟ್ಟಿಟ್ಟು ಜೀವನ ನಡೆಸುತ್ತಾರೆ. ಈ ಕಥೆಯಲ್ಲಿ ಪ್ರಮುಖವಾಗಿ ಮೂರು ಪಾತ್ರಗಳನ್ನು ಶಿವನ ರುದ್ರ ಅವತಾರದಲ್ಲಿ ನೋಡಬಹುದು. ಅವರಲ್ಲಿ ಮುಖ್ಯವಾಗಿ ಬರುವವರೇ ಶಶಿಕುಮಾರ್. ನವೆಂಬರ್ 24ರಿಂದ ಚಿತ್ರೀಕರಣ ಆರಂಭಿಸಲಿದ್ದೇವೆ' ಎಂದು ನಿರ್ದೇಶಕರು ತಿಳಿಸಿದರು.

'ಇದು ನಾಯಕ, ನಾಯಕಿ ಕಥೆಯಲ್ಲ. ಇಲ್ಲಿ ಕಥೆಯೇ ನಾಯಕ. ಈ ಚಿತ್ರದಲ್ಲಿ ನಾನೊಬ್ಬ ಆಟೊ ಡ್ರೈವರ್. ಹೆಣ್ಣುಮಗಳ ತಂದೆಯಾಗಿ ನಟಿಸುತ್ತಿದ್ದೇನೆ. ಸಂಗೀತಾ ನನ್ನ ಪತ್ನಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಮಗಳಿಗಾಗಿ ಹೋರಾಡುವ ತಂದೆಯ ಪಾತ್ರ ನನ್ನದು' ಎಂದರು ಶಶಿಕುಮಾರ್.

ಯಶ್ ಶೆಟ್ಟಿ, ವರ್ಧನ್ ತೀರ್ಥಹಳ್ಳಿ, ಅಂಕಿತಾ ಜಯರಾಮ್, ಸಾಧನಾ ಮುಂತಾದವರು ಚಿತ್ರದಲ್ಲಿದ್ದಾರೆ. ಅಲನ್ ಭರತ್ ಛಾಯಾಚಿತ್ರಗ್ರಹಣ, ಪಾಲ್ ಅಲೆಕ್ಸ್ ಸಂಗೀತ ಸಂಯೋಜನೆ, ಶ್ರೀಕಾಂತ್ ಸಂಕಲನ ಈ ಚಿತ್ರಕ್ಕಿದೆ.

ಹೊರಬಂತು ಭಾರತಿ ಟೀಚರ್ ಟ್ರೇಲರ್

ಶಿಕ್ಷಣ ವ್ಯವಸ್ಥೆಯ ಕುರಿತಾದ ಕಥೆಯನ್ನು ಹೊಂದಿರುವ 'ಭಾರತಿ ಟೀಚರ್' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಸಚಿವ ಮಧು ಬಂಗಾರಪ್ಪ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಎಂ.ಎಲ್.ಪ್ರಸನ್ನ ನಿರ್ದೇಶನದ ಚಿತ್ರಕ್ಕೆ ರಾಘವೇಂದ್ರ ರೆಡ್ಡಿ ಬಂಡವಾಳ ಹೂಡಿದ್ದಾರೆ.

'ಭಾರತಿ ಎನ್ನುವ ಏಳನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಶಿಕ್ಷಕಿಯಾಗುವ ಕನಸನ್ನು ಹೇಗೆ ನನಸು ಮಾಡಿಕೊಳ್ಳುತ್ತಾಳೆ ಎಂಬುದೇ ಚಿತ್ರದ ಒಟ್ಟಾರೆ ಕಥೆ. ಕರ್ನಾಟಕದಲ್ಲಿ ಕನ್ನಡದಲ್ಲಿ ಶಿಕ್ಷಣ ಎಷ್ಟು ಮುಖ್ಯ ಎಂಬುದನ್ನು ಹೇಳಿದ್ದೇವೆ. ಕನ್ನಡ ಕಲಿಕೆಗೆ ಚಿತ್ರದಲ್ಲಿ ಒತ್ತು ನೀಡಲಾಗಿದೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಗೂ ನಟ ಆದಿತ್ಯ ಕೂಡ ವಿಶೇಷ ಪಾತ್ರದಲ್ಲಿ ಅಭಿನಯಿಸಲಿದ್ದಾರೆ. ಚಿತ್ರೀಕರಣ ಮುಕ್ತಾಯದ ಹಂತದಲ್ಲಿದೆ' ಎಂದರು ನಿರ್ದೇಶಕ.

ರೋಹಿತ್ ರಾಘವೇಂದ್ರ ನಾಯಕ. ಶಿಕ್ಷಕರಾಗಿ ಸಿಹಿಕಹಿ ಚಂದ್ರು ಕಾಣಿಸಿಕೊಂಡಿದ್ದಾರೆ. ಕು.ಯಶಿಕಾ, 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಗೋವಿಂದೇಗೌಡ, ಅಶ್ವಿನ್ ಹಾಸನ್, ದಿವ್ಯಾ ಅಂಚನ್ ಮುಂತಾದವರು ನಟಿಸಿದ್ದಾರೆ. ಎಂ.ಬಿ.ಹಳ್ಳಿಕಟ್ಟಿ ಛಾಯಾಚಿತ್ರಗ್ರಹಣ, ಸುಜಿತ್ ನಾಯಕ್ ಸಂಕಲನವಿದೆ.

ಆಂಧ್ರಪ್ರದೇಶದ 55 ಮಂದಿ ರಕ್ಷಣೆ

ಅಮರಾವತಿ (ಪಿಟಿಐ): ಮ್ಯಾನ್ಮಾರ್‌ನಲ್ಲಿ ರಕ್ಷಿಸಿದ ಆಂಧ್ರಪ್ರದೇಶದ 55 ಮಂದಿಯನ್ನು ದೆಹಲಿಯ ಆಂಧ್ರಪ್ರದೇಶ ಭವನಕ್ಕೆ ಕರೆತರಲಾಗಿದೆ.

ಮ್ಯಾನ್ಮಾರ್‌ನಿಂದ ರಕ್ಷಿಸಿದ 370 ಮಂದಿಯನ್ನು ಹೊತ್ತ ಮೂರು ವಿಮಾನಗಳು ದೆಹಲಿಗೆ ಬಂದಿಳಿದಿವೆ. ಇದರಲ್ಲಿ 55 ಮಂದಿ ವಿಜಯವಾಡ ಮತ್ತು ವಿಶಾಖಪಟ್ಟಣಕ್ಕೆ ಸೇರಿದ್ದಾರೆ.

ಉದ್ಯೋಗಾವಕಾಶ ಕಲ್ಪಿಸುವುದಾಗಿ ವಾಟ್ಸ್ಆ್ಯಪ್ ಮತ್ತು ಟೆಲಿಗ್ರಾಮ್‌ಗಳಲ್ಲಿ ಬಂದ ನಕಲಿ ಲಿಂಕ್‌ಗಳನ್ನು ನಂಬಿ ಇವರು ಮೋಸ ಹೋಗಿದ್ದರು. ಇದು ಅವರನ್ನು ಸೈಬರ್ ಅಪರಾಧ ಜಾಲದೊಳಗೆ ಸಿಲುಕುವಂತೆ ಮಾಡಿತ್ತು.

ತಿಮ್ಮಪ್ಪನ ದರ್ಶನ ಪಡೆದ ರಾಷ್ಟ್ರಪತಿ

ತಿರುಪತಿ (ಪಿಟಿಐ): ಆಂಧ್ರಪ್ರದೇಶದ ತಿರುಮಲಕ್ಕೆ ಶುಕ್ರವಾರ ಭೇಟಿ ನೀಡಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವೆಂಕಟೇಶ್ವರ ಸ್ವಾಮಿಯ(ತಿಮ್ಮಪ್ಪ) ದರ್ಶನ ಪಡೆದು, ಪೂಜೆ ಸಲ್ಲಿಸಿದರು.

ತಿರುಮಲ ದೇಗುಲದ ಮಹಾದ್ವಾರ ಪ್ರವೇಶಕ್ಕೂ ಮುನ್ನ ಮುರ್ಮು ಅವರು, ವರಾಹ ಸ್ವಾಮಿ ದೇಗುಲಕ್ಕೆ ಭೇಟಿ ನೀಡಿದ್ದರು. ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್‌ನ (ಟಿಟಿಡಿ) ಮುಖ್ಯಸ್ಥ ಬಿ.ಆರ್.ನಾಯ್ಡು ಅವರು ರಾಷ್ಟ್ರಪತಿಯವರನ್ನು ಸ್ವಾಗತಿಸಿದರು.

'ಕುಟುಂಬ ಸಮೇತ ಆಗಮಿಸಿದ್ದ ರಾಷ್ಟ್ರಪತಿಯವರು ವೆಂಕಟೇಶ್ವರ ಸ್ವಾಮಿ ಸೇರಿದಂತೆ ಬೆಟ್ಟದಲ್ಲಿರುವ ಎಲ್ಲ ದೇಗುಲಗಳಿಗೂ ತೆರಳಿ ದರ್ಶನ ಪಡೆದರು. ಆಂಧ್ರಪ್ರದೇಶದ ಧಾರ್ಮಿಕ ದತ್ತಿ ಸಚಿವ ಎ.ರಾಮನಾರಾಯಣ ರೆಡ್ಡಿ ಜೊತೆಯಲ್ಲಿದ್ದರು' ಎಂದು ಟಿಟಿಡಿ ಪ್ರಕಟಣೆಯಲ್ಲಿ ತಿಳಿಸಿದೆ.

ತಿಮ್ಮಪ್ಪನಿಗೆ ಶೇಷ ವಸ್ತ್ರ ಅರ್ಪಿಸಿದ ರಾಷ್ಟ್ರಪತಿಗೆ ರಂಗನಾಯಕಲು ಮಂಟಪದಲ್ಲಿ ವೇದಾಶೀರ್ವಚನ ನೀಡಲಾಯಿತು. ಆನಂತರ ಅವರು ತೀರ್ಥಪ್ರಸಾದ ಸ್ವೀಕರಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಕ್ರವಾರ ತಿರುಪತಿಯಲ್ಲಿ ವೆಂಕಟೇಶ್ವರಸ್ವಾಮಿಯ ದರ್ಶನ ಪಡೆದರು – ಪಿಟಿಐ ಚಿತ್ರ

ಮೆಕ್ಯಾನಿಕ್ ಹುಡುಕಿ ಬರುವ ಕಾಡುಹಂದಿ

ಕುದುರೆಮುಖದಲ್ಲಿ ಪ್ರಾಣಿಗಳಿಗಾಗಿ ಜೀವನ ಮುಡಿಪಾಗಿಟ್ಟ ರೂಬೆನ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕುದುರೆಮುಖ ಕಾಡಂಚಿನಲ್ಲಿ ಇಡೀ ಜೀವನವನ್ನು ಪ್ರಾಣಿಗಳಿಗಾಗಿ ಮೀಸಲಿಟ್ಟಿರುವ ಮೆಕ್ಯಾನಿಕ್ ಒಬ್ಬರು, ಸದ್ದಿಲ್ಲದೆ ಅವುಗಳೊಂದಿಗೆ ಸಹಜೀವನ ನಡೆಸುತ್ತಿದ್ದಾರೆ. ಇವರ ಪ್ರೀತಿ ಅರಸಿ ಕಾಡುಹಂದಿಯೂ ನಿತ್ಯ ಬರುವುದು ವಿಶೇಷ.

ಕುದುರೆಮುಖ ಎಂದರೆ ಥಟ್ಟನೆ ನೆನಪಿಗೆ ಬರುವುದು ಪಶ್ಚಿಮಘಟ್ಟಗಳ ಪರ್ವತಶ್ರೇಣಿ, ಅಲ್ಲಿದ್ದ ಅದಿರು ಕಂಪನಿ, ರಾಷ್ಟ್ರೀಯ ಉದ್ಯಾನ, ಗುಡ್ಡಗಳ ನಡುವೆ ಪ್ರಶಾಂತವಾಗಿ ಹರಿಯುವ ನದಿಗಳು. ಅದಿರು ಕಂಪನಿ ಸ್ಥಗಿತಗೊಂಡ ಬಳಿಕ ಪಾಳುಬಿದ್ದಿರುವ ಕೇಂದ್ರೀಯ ವಿದ್ಯಾಲಯ, ಆಸ್ಪತ್ರೆ ಕಟ್ಟಡ, ನೆಹರೂ ಪ್ರತಿಮೆಗಳು, ಟೌನ್‌ಶಿಪ್ ಇದ್ದ ವೈಭವದ ಕುರುಹುಗಳನ್ನು ಹೇಳುತ್ತವೆ. ಅಳಿದುಳಿದಿರುವ ಈಗಿನ ಕುದುರೆಮುಖದಲ್ಲಿ ರೂಬೆನ್ ಎಂಬ ವ್ಯಕ್ತಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದಾರೆ.

ಆಗೊಮ್ಮೆ ಈಗೊಮ್ಮೆ ರಿಪೇರಿಗೆ ಬರುವ ಬೈಕ್‌ಗಳು ರೂಬೆನ್‌ಗೆ ಜೀವನಾಧಾರ. ತನ್ನ ದುಡಿಮೆಯಲ್ಲಿ ತನ್ನ ಹೊಟ್ಟೆಯನ್ನಷ್ಟೇ ಅಲ್ಲದೆ, ಅಲ್ಲಿರುವ ಪ್ರಾಣಿಗಳಿಗೂ ಇವರು ಆಶ್ರಯದಾತರು. ರೂಬೆನ್ ಮನೆಯಲ್ಲಿರುವ ನಾಯಿ ಮತ್ತು ಬೆಕ್ಕುಗಳಿಗೆ ಲೆಕ್ಕವಿಲ್ಲ. ಇವರ ಪ್ರಾಣಿಪ್ರೀತಿ ಎಷ್ಟಿದೆ ಎಂದರೆ ಕಾಡಿನಿಂದ ಪ್ರಾಣಿಗಳು ಇವರನ್ನು ಹುಡುಕಿಕೊಂಡು ಬರುತ್ತವೆ. ಊಟದ ಸಮಯಕ್ಕೆ ಸರಿಯಾಗಿ ಬರುವ ಕಾಡು ಹಂದಿಯೊಂದು ರೂಬೆನ್ ಅವರ ಮನೆಯ ಮಗನಂತಾಗಿದೆ.

ಕುದುರೆಮುಖ ಅದಿರು ಕಂಪನಿ ಕಾರ್ಯನಿರ್ವಹಿಸುತ್ತಿದ್ದ ವೇಳೆ ರೂಬೆನ್ ಅವರ ಸಂಬಂಧಿಯೊಬ್ಬರು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮುಂಬೈನಲ್ಲಿ ಮೆಕ್ಯಾನಿಕ್ ಆಗಿದ್ದ ರೂಬೆನ್ 1979ರಲ್ಲಿ ಕುದುರೆಮುಖಕ್ಕೆ ಬಂದು, ಇಲ್ಲಿ ಮೆಕ್ಯಾನಿಕ್ ಕೆಲಸ ಮುಂದುವರಿಸಿದರು. ದುಡಿದ ಹಣದಲ್ಲಿ ತಮ್ಮ ಜೀವನದ ಜತೆಗೆ ಬೀದಿ ನಾಯಿಗಳು, ಬೆಕ್ಕುಗಳಿಗೆ ಅನ್ನ ಹಾಕುವುದನ್ನು ಅಭ್ಯಾಸ ಮಾಡಿಕೊಂಡರು. ಅಂದಿನಿಂದ ಇಂದಿನವರೆಗೆ ಆ ಕೆಲಸ ಮುಂದುವರಿಸಿದ್ದಾರೆ. ತಾನು ಸಸ್ಯಹಾರಿಯಾದರೂ ಬೆಕ್ಕು ಮತ್ತು ನಾಯಿಗಳಿಗಾಗಿ ಮೀನು ಮತ್ತು ಮಾಂಸ ತರಿಸಿ ಉಣಬಡಿಸುತ್ತಾರೆ.

ಕಂಪನಿ ಮುಚ್ಚಿದ ನಂತರ ಕಾರ್ಮಿಕರ ಕ್ಯಾಂಪ್‌ಗಳು ಕಾಡಾಗಿ ಪರಿವರ್ತನೆಗೊಂಡವು. ರಸ್ತೆ ಬದಿಯ ಒಂದು ಕ್ಯಾಂಪ್ ಇದ್ದ ಜಾಗದಲ್ಲಿ ರೂಬೆನ್ ಶೆಡ್ ನಿರ್ಮಿಸಿಕೊಂಡಿದ್ದಾರೆ. ಇದರಲ್ಲಿ ರೂಬೆನ್ ಜತೆಗೆ ನಾಯಿ, ಬೆಕ್ಕುಗಳೂ ವಾಸಿಸುತ್ತಿವೆ. ನಾಯಿ ಬೆಕ್ಕುಗಳು ತಿಂದು ಉಳಿಸಿದ ಮೂಳೆ ಆಸೆಗೆ ಬರಲಾರಂಭಿಸಿದ ಕಾಡು ಹಂದಿಯೊಂದು, ನಂತರ ಅವರ ಮೇಲೆ ನಂಬಿಕೆ ಬೆಳೆದು ನಿತ್ಯ ಬರಲಾರಂಭಿಸಿದೆ.

11 ವರ್ಷಗಳಿಂದ ನಿತ್ಯ ಬರುವ ಈ ಹಂದಿ, ಈಗ ಅವರ ಮೆಚ್ಚಿನ 'ಚಿನ್ನಿಪುಟ್ಟಿ'. ಕಾಡಿನಲ್ಲಿ ಅಲೆದಾಡುವ ಈ ಹಂದಿ, ಸಂಜೆ 5ರ ಸುಮಾರಿಗೆ ಎಲ್ಲಿದ್ದರೂ ಶೆಡ್ ಬಳಿಗೆ ಬಂದು ನಿಲ್ಲುತ್ತದೆ. ಅಷ್ಟರಲ್ಲಿ ಅನ್ನ ಸಿದ್ಧ ಮಾಡಿಕೊಂಡಿರುವ ರೂಬೆನ್, ಕರೆದು ಅನ್ನ ಕೊಡುತ್ತಾರೆ. ನಾಯಿ, ಬೆಕ್ಕುಗಳ ಜತೆಗೆ ಹಂದಿಯೂ ಅನ್ನ ಸೇವಿಸುತ್ತದೆ.

ರಾತ್ರಿ ಸುತ್ತಮುತ್ತ ಮಲಗುವ ಹಂದಿಗೆ ಬೆಳಿಗ್ಗೆ 4 ಗಂಟೆ ವೇಳೆಗೆ ಮತ್ತೊಮ್ಮೆ ರೂಬೆನ್ ಅನ್ನ ಬಡಿಸುತ್ತಾರೆ. ಅದನ್ನು ತಿಂದು ಹೊರಡುವ ಹಂದಿ ದಿನವಿಡೀ ಕಾಡಿನಲ್ಲಿ ಸುತ್ತಾಡುತ್ತದೆ. ಸಂಜೆ 5ರ ಸುಮಾರಿಗೆ ಮತ್ತೆ ಹಾಜರಾಗುತ್ತದೆ. ರೂಬೆನ್ ಅವರ ಮನೆಯ ಬಳಿ ಜನರಿದ್ದರೆ ಬರಲು ಕೊಂಚ ಹಿಂದೇಟು ಹಾಕುತ್ತದೆ. 'ಚಿನ್ನಿಪುಟ್ಟಿ ಬಾ' ಎಂದ ಕೂಡಲೇ ಓಡೋಡಿ ಬಂದು ಅವರ ಹಿಂದೆಯೇ ಸುಳಿದಾಡುತ್ತದೆ.

ಮಕ್ಕಳಂತೆ ಅಕ್ಕರೆಯಿಂದ ಪ್ರಾಣಿಗಳ ಜತೆ ಕಾಲ ಕಳೆಯುವ ರೂಬೆನ್, ಇದಕ್ಕೆ ಯಾರೂ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ಮದುವೆ– ಸಂಸಾರದಿಂದಲೂ ದೂರ ಉಳಿದಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರೂಬೆನ್ ಬಡಿಸಿದ ಅನ್ನ ಸೇವಿಸುತ್ತಿರುವ ಕಾಡುಹಂದಿ ಮತ್ತು ನಾಯಿಗಳು

ದುಬಾರಿ ಅಕ್ಕಿಯಲ್ಲಿ ಪ್ರಾಣಿಗಳಿಗೆ ಊಟ

ರೂಬೆನ್ ಅವರ ಬಳಿ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಇವೆ. ಆದರೆ, ಪಡಿತರ ಚೀಟಿ ಇಲ್ಲ. ರದ್ದಾಗಿರುವ ಪಡಿತರ ಚೀಟಿ ಪಡೆಯಲು ಪರದಾಡಿ ಸಾಕಾಗಿರುವ ಅವರು ಕೆ.ಜಿಗೆ ₹60 ರಿಂದ₹70 ದರದ ಅಕ್ಕಿಯನ್ನು ಅಂಗಡಿಗಳಿಂದ ಖರೀದಿಸಿ ತಂದು ಪ್ರಾಣಿಗಳಿಗೆ ಊಟ ಹಾಕುತ್ತಾರೆ.

ದಿನಕ್ಕೆ ಆರು ಕೆ.ಜಿ ಅಕ್ಕಿ, ಆರು ಕೆ.ಜಿ ಮೀನು, ನಾಲ್ಕು ಕೆ.ಜಿ ಕೋಳಿ ಮಾಂಸ ತಂದು ನಾಯಿ, ಬೆಕ್ಕುಗಳಿಗೆ ಊಟ ಬಡಿಸುತ್ತಾರೆ. ರೂಬೆನ್ ಅವರ ಈ ಪ್ರಾಣಿ ಪ್ರೀತಿ ಸುತ್ತಮುತ್ತಲ ಜನರಲ್ಲಿ ಅಪಾರ ಅಭಿಮಾನ ತಂದಿದೆ. ಯಾರೊಂದಿಗೂ ಹೆಚ್ಚಾಗಿ ಮಾತನಾಡದ ರೂಬೆನ್ ತನ್ನದೇ ಪ್ರಪಂಚದಲ್ಲಿ ಧನ್ಯತೆ ಕಂಡುಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಶಬರಿಮಲೆ: ರಸ್ತೆ ಬದಿ ಸೇವಾ ಕೇಂದ್ರ

ಪತ್ತನಂತಿಟ್ಟ (ಪಿಟಿಐ): ಧಾರ್ಮಿಕ ಯಾತ್ರೆ ಸಂದರ್ಭದಲ್ಲಿ ಶಬರಿಮಲೆಗೆ ಅಯ್ಯಪ್ಪ ಭಕ್ತರನ್ನು ಕರೆತರುವ ವಾಹನಗಳಿಗೆ ರಸ್ತೆ ಬದಿಯಲ್ಲಿ ತುರ್ತು ನೆರವು ಒದಗಿಸುವ ಹೆಲ್ಪ್‌ಲೈನ್ ಆಧಾರಿತ ಸೇವಾ ಕೇಂದ್ರಕ್ಕೆ ಕೇರಳದ ಮೋಟಾರು ವಾಹನ ಇಲಾಖೆ (ಎಂವಿಡಿ) ಚಾಲನೆ ನೀಡಿದೆ.

'ಶಬರಿಮಲೆ ಸುರಕ್ಷಾ ವಲಯ' ಹೆಸರಿನಲ್ಲಿ ಸಹಾಯವಾಣಿ (ಹೆಲ್ಪ್‌ಲೈನ್) ಸಂಖ್ಯೆಗಳನ್ನು ನೀಡಿದ್ದು, ಇವು ದಿನವಿಡೀ ಕಾರ್ಯನಿರ್ವಹಿಸಲಿವೆ. ಇಡುಕ್ಕಿ, ಕೊಟ್ಟಾಯಂ ಜಿಲ್ಲೆಯ ಪತ್ತನಂತಿಟ್ಟ ಮಾರ್ಗದಲ್ಲಿ ಸಾಗುವ ಭಕ್ತರ ವಾಹನಗಳು ಅಪಘಾತಕ್ಕೆ ಒಳಗಾದಲ್ಲಿ, ಕೆಟ್ಟುನಿಲ್ಲುವುದು ಸೇರಿದಂತೆ ಯಾವುದೇ ತುರ್ತು ಸಂದರ್ಭಗಳಲ್ಲಿ ಈ ಸೇವಾ ಕೇಂದ್ರದ ಪ್ರಯೋಜನ ಪಡೆಯಬಹುದು' ಎಂದು ತಿಳಿಸಿದೆ.

'ಎಲಾವುಂಕಲ್, ಎರುಮೇಲಿ ಮತ್ತು ಕುಟ್ಟಿಕ್ಕಾನಂನಲ್ಲಿ ನಿಯಂತ್ರಣ ಕೊಠಡಿ ತೆರೆಯಲಾಗಿದೆ. ಕ್ರೇನ್, ಆಂಬುಲೆನ್ಸ್, ದುರಸ್ತಿ ಸೇರಿದಂತೆ ಇತರೆ ಸೇವೆಗಳನ್ನು ಒದಗಿಸಲಾಗುವುದು' ಎಂದು ಇಲಾಖೆ ತಿಳಿಸಿದೆ.

ಹೆಲ್ಪ್‌ಲೈನ್ : ಎರ್ನಾಕುಲಂ– 9400044991, 9562318181, ಎರುಮೇಲಿ: 9496367974, 8547639173, ಕುಟ್ಟಿಕ್ಕಾನಂ: 9446037100, 8547639176, safezonesabarimala@gmail.com ವೆಬ್‌ಸೈಟ್‌ನಲ್ಲೂ ಭಕ್ತರು ಸಂಪರ್ಕಿಸಬಹುದು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ಸೈಬರ್ ಅಪರಾಧ 800 ಮಂದಿ ಸೆರೆ

ನವದೆಹಲಿ (ಪಿಟಿಐ): 'ಸೈಹಾಕ್' ಎಂಬ ಹೆಸರಿನಲ್ಲಿ 48 ಗಂಟೆಗಳ ಕಾರ್ಯಾಚರಣೆ ನಡೆಸಿದ ದೆಹಲಿ ಪೊಲೀಸರು ಸೈಬರ್ ಅಪರಾಧಗಳೊಂದಿಗೆ ನಂಟು ಹೊಂದಿದ್ದ 800ಕ್ಕೂ ಅಧಿಕ ಮಂದಿಯನ್ನು ಬಂಧಿಸಿದ್ದಾರೆ.

'ಶುಕ್ರವಾರ ಬೆಳಿಗ್ಗೆ 9 ಗಂಟೆವರೆಗೆ ಕಾರ್ಯಾಚರಣೆ ನಡೆದಿದ್ದು, 877 ಜನರನ್ನು ಬಂಧಿಸಲಾಗಿದೆ ಅಥವಾ ವಶಕ್ಕೆ ಪಡೆಯಲಾಗಿದೆ. 509 ಜನರಿಗೆ ನೋಟಿಸ್ ನೀಡಲಾಗಿದೆ' ಎಂದು ಜಂಟಿ ಪೊಲೀಸ್ ಕಮಿಷನರ್ ರಜನೀಶ್ ಗುಪ್ತಾ ಅವರು ತಿಳಿಸಿದ್ದಾರೆ.

ಉದ್ಯೋಗ, ಹೂಡಿಕೆ ಹೆಸರಲ್ಲಿ ವಂಚನೆ ಎಸಗುತ್ತಿದ್ದವರನ್ನು ಬಗ್ಗು ಬಡಿಯಲು ಮುಂದಾಗಿರುವ ಪೊಲೀಸರು, ಹಲವು ಕಾಲ್ ಸೆಂಟರ್‌ಗಳಲ್ಲಿ ಶೋಧ ನಡೆಸಿದ್ದಾರೆ.

₹53 ಕೋಟಿಯ ಗಾಂಜಾ, ವಜ್ರ ಜಪ್ತಿ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ₹53 ಕೋಟಿ ಮೌಲ್ಯದ ಹೈಡ್ರೊಪೋನಿಕ್ ಗಾಂಜಾ, ಚಿನ್ನ ಮತ್ತು ವಜ್ರವನ್ನು ಜಪ್ತಿ ಮಾಡಿ 20 ಜನರನ್ನು ಬಂಧಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ನವೆಂಬರ್ 13ರಿಂದ 20ರವರೆಗೆ ನಡೆದ ಕಾರ್ಯಾಚರಣೆಯಲ್ಲಿ ಈ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೊದಲ ಹಂತದ ಕಾರ್ಯಾಚರಣೆಯಲ್ಲಿ, ಪ್ರತ್ಯೇಕ ಪ್ರಕರಣಗಳಲ್ಲಿ ₹25.318 ಕೋಟಿ ಮೌಲ್ಯದ 25.318 ಕೆ.ಜಿ ಹೈಡ್ರೊಪೋನಿಕ್ ಗಾಂಜಾ ವಶಪಡಿಸಿಕೊಂಡು, ಹಲವು ಪ್ರಯಾಣಿಕರನ್ನು ಬಂಧಿಸಲಾಗಿತ್ತು. ಮತ್ತೊಂದು ಕಾರ್ಯಾಚರಣೆಯಲ್ಲಿ ₹26.981 ಕೋಟಿ ಮೌಲ್ಯದ 26.981 ಕೆ.ಜಿ ಹೈಡ್ರೊಪೋನಿಕ್ ಗಾಂಜಾ ವಶಪಡಿಸಿಕೊಂಡು 8 ಆರೋಪಿಗಳನ್ನು ಬಂಧಿಸಲಾಗಿದೆ.

ಇದೇ ವೇಳೆ ಅಕ್ರಮ ಚಿನ್ನ ಸಾಗಣೆಯ ನಾಲ್ಕು ಪ್ರಕರಣ ಪತ್ತೆ ಯಾಗಿದ್ದು, ನಾಲ್ವರು ಪ್ರಯಾಣಿಕರಿಂದ ₹65.57 ಲಕ್ಷ ಮೌಲ್ಯದ 551 ಗ್ರಾಂ ಚಿನ್ನ ವಶಪಡಿಸಿಕೊಳ್ಳಲಾಗಿದೆ. ಮತ್ತೊಂದು ಪ್ರಕರಣದಲ್ಲಿ ₹54.13 ಲಕ್ಷ ಮೌಲ್ಯದ 469.75 ಕ್ಯಾರಟ್ ವಜ್ರ ಜಪ್ತಿ ಮಾಡಿದ್ದು, ಆರೋಪಿ ಅವುಗಳನ್ನು ದೇಹದೊಳಗೆ ಇಟ್ಟುಕೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹80 ಕೋಟಿ ಮೌಲ್ಯದ ಹಾವಿನ ವಿಷ ವಶಕ್ಕೆ

ಮೇದಿನಿನಗರ (ಪಿಟಿಐ): ವನ್ಯಜೀವಿ ಅಪರಾಧ ನಿಯಂತ್ರಣ ದಳ ಮತ್ತು ಅರಣ್ಯ ಇಲಾಖೆಯ ಜಂಟಿ ತಂಡವು ಜಾರ್ಖಂಡ್‌ನ ಪಲಾಮು ಜಿಲ್ಲೆಯಲ್ಲಿ ಹಾವಿನ ವಿಷವನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಏಳು ಜನರನ್ನು ಬಂಧಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

'₹80 ಕೋಟಿ ಮೌಲ್ಯದ 1,200 ಗ್ರಾಂ ಹಾವಿನ ವಿಷ ಮತ್ತು ₹15 ಲಕ್ಷದಿಂದ ₹20 ಲಕ್ಷ ಮೌಲ್ಯದ 2.5 ಕೆ.ಜಿ ಚಿಪ್ಪು ಹಂದಿಯ ಚಿಪ್ಪುಗಳನ್ನು ವಶಪಡಿಸಿಕೊಳ್ಳಲಾಗಿದೆ. ದಂಧೆಯಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆಯಿದೆ' ಎಂದು ಜಿಲ್ಲಾ ಅರಣ್ಯಾಧಿಕಾರಿ ಸತ್ಯಂ ಕುಮಾರ್ ತಿಳಿಸಿದರು.

ಶನಿವಾರ, ನವೆಂಬರ್ 22, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸ್ಟಾರ್ಕ್ ಮಿಂಚು

ಆಸ್ಟ್ರೇಲಿಯಾ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಅವರು ಆ್ಯಷಸ್ ಟೆಸ್ಟ್ ಸರಣಿಯ ಮೊದಲ ಟೆಸ್ಟ್‌ನಲ್ಲಿ ಶುಕ್ರವಾರ ಇಂಗ್ಲೆಂಡ್ ವಿರುದ್ಧ ಏಳು ವಿಕೆಟ್ ಗೊಂಚಲು ಪಡೆದರು



ಕೃತಿ ಬಿಡುಗಡೆ

ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ‘ಹಮ್ ಔರ್ ಯೇ ವಿಶ್ವ’ ಕೃತಿಯನ್ನು ಭೋಪಾಲದಲ್ಲಿ ಗುರುವಾರ ಬಿಡುಗಡೆ ಮಾಡಿದರು

G SQUARE 13 YEARS OF BUILDING Trust SINCE 2012

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

BIGGER PLOT. SMARTER CHOICE.
DOUBLE APPRECIATION

RERA NO: PRM/KA/RERA/1268/378/PR/020125/007342

ಲಾಂಚಿಂಗ್ ಫೇಸ್ 3
G SQUARE Alchemy
ನ್ಯೂ ಕಾಂತರಾಜ್ ಅರಸ್ 80 ಅಡಿ ರಸ್ತೆ

ಪ್ರೀಮಿಯಂ ವಿಲ್ಲಾ ಪ್ಲಾಟ್ ಗಳು
ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿ

ಮಾರುಕಟ್ಟೆ ಬೆಲೆ ~~₹8500/ ಚದರ ಅಡಿ~~
ಲಾಂಚ್ ಬೆಲೆ ~~₹5999/ ಚದರ ಅಡಿ~~
ಅರ್ಲಿ ಬರ್ಡ್ ಬೆಲೆ ₹5650/ ಪ್ರತಿ ಚದರ.ಅಡಿಗೆ
ಮೊದಲ 25 ಬುಕಿಂಗ್ ಗಳಿಗೆ ಮಾತ್ರ

MUDA APPROVED RERA

WHY ARE BENGALUREANS MOVING TO MYSURU?

ಬೆಂಗಳೂರು TIER - 1		ಮೈಸೂರು FUTURE TIER - 1
₹9 – 12 lakh	Monthly Rent for 10k sq. ft.	₹3 – 6 lakhs
High	Operational Cost	Low - Upto 50%
Minimal	Govt. Incentives	50% rent reimbursement, tax waivers, R&D-focused incentives

Great Ring Road connectivity, clean and livable surroundings and Karnataka’s new IT policy 2025 - 2030

- **50%** Rent Reimbursement Up to ₹2 Cr
- **30%** Property Tax Reimbursement For 3 years
- **100%** Electricity Duty Waiver For 5 years
- **25%** Phone & Internet Bill Waiver Up to ₹12 lakh

UP TO 90% BANK LOAN AVAILABLE
Canara Bank, HDFC BANK, ICICI Bank, punjab national bank, LIC HFL, AXIS BANK

G SQUARE BUILD ASSIST
A POST-PURCHASE GUIDANCE PROGRAM

CREDAI MYSURU

CASH NOT ACCEPTED

FOR SITE VISIT CALL
97430 34000

ಲಾಂಚಿಂಗ್ ಫೇಸ್ 3
G SQUARE
Alchemy
ನ್ಯೂ ಕಾಂತರಾಜ್ ಅರಸ್ 80 ಅಡಿ ರಸ್ತೆ
ಸಲೂನ್‌ಗಳು ಮತ್ತು ಸ್ಪಾಗಳಿಗೆ 7000 ಚದರ. ಅಡಿ
ಬ್ಯಾಂಕ್ ಮತ್ತು ಎಟಿಎಂ ಗಳಿಗೆ 8000 ಚದರ. ಅಡಿ
80 ಅಡಿ ರಸ್ತೆ, ORR - PRR ಸಂಪರ್ಕ ಹಾಗೂ ವಾಣಿ
ಗಳಿಗೆ ಪ್ರವೇಶವನ್ನು ಹೊಂದಿರುವ 41 ಎಕ
ಕೋ ವರ್ಕಿಂಗ್ ಸ್ಥಳಗಳು 15,000 ಚದರ. ಅಡಿ
ಅಪಾರ್ಟ್‌ಮೆಂಟ್ 25,000 ಚದರ. ಅಡಿ
ಔಟರ್ ರಿಂಗ್ ರೋಡ್
AVAIL UP TO 90%
LOAN FROM ALL LEADING BANKS
FOR COMMERCIAL APPROVED PLOTS

ಆಸ್ಪತ್ರೆಗಳಿಗೆ
25,000 ಚದರ. ಅಡಿ
ರೆಸ್ಟೋರೆಂಟ್‌ಗಳು
10,000 ಚದರ. ಅಡಿ
Hospital
CAFE
SCHOOL
ಸ್ಥಳಗಳು ಮತ್ತು ದೊಡ್ಡ ವಸತಿ ಪ್ಲಾಟ್
ಏಕೈಕ ವಿಲ್ಲಾ ಸಮುದಾಯ
ಹೈಪರ್‌ಮಾರ್ಕೆಟ್‌ಗಳು
10,000 ಚದರ. ಅಡಿ
ರಿಟೇಲ್ ಮಾರಾಟ
ಮಳಿಗೆಗಳು
6000 ಚದರ. ಅಡಿ
SHOP
9.0M ROAD
18.0M Proposed
THE BLUEPRINT FOR ROYAL LIVING & INVESTMENT:
SIZE RANGING FROM 1,500 TO 25,000 SQ.FT.
80 FT. ROYAL ROAD ACCESS
53% GREEN OPEN SPACE
PLUG & PLAY PLOTS
MUDA APPROVED RERA
FOR SITE VISIT CALL
97430 34000
RERA NO: PRM/KA/RERA/1268/378/PR/020125/007342

G SQUARE 13 YEARS OF BUILDING Trust SINCE 2012

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

LAUNCHING PH-3

G SQUARE Alchemy

MYSURU'S PREMIER VILLA COMMUNITY

SMARTER INVESTMENT. PERFECT CONNECTIVITY. BIGGER RETURNS

300+ BOOKINGS IN PHASES 1 & 2.

120 REGISTERED, WITH 80+ CUSTOMERS STARTING CONSTRUCTION BY SANKRANTHI.

EXPERIENCE VILLA LIVING, SPECIALLY CRAFTED FOR YOU

SUSTAINABLE REASONS

7

- 13 Years of Trust
- India's Largest Plotted Developer
- 100% Appreciation
- 100% Solar-Powered Sites
- 20,000+ Happy Customers
- 4000+ Acres Delivered
- 5 Lakh+ Trees Across Our Sites

PLOT + 3 BHK VILLA

₹96L

PLOT AREA: 1048 SQ.FT
VILLA AREA: 1572 SQ.FT

PLOT + 4 BHK VILLA

₹1.29CR

PLOT AREA: 1408 SQ.FT
VILLA AREA: 2112 SQ.FT

SALIENT FEATURES

- Total of 478 Residential Plots Ranging from 838 to 3875 sq.ft. Spread Across 41 Acres
- 1 Min from Christ Public School
- 2 Mins from Outer Ring Road
- 2 Mins from Bogadi Road
- 10 Mins from Christ College
- 15 Mins from Apollo BGS Hospital
- 20 Mins from Bengaluru-Mysuru Expressway Junction
- All Inclusive Township - Plots, Villas and Apartments
- Easy Access to Mysore Airport
- 1 Year Free Maintenance
- Ready to Construct Villa Plot Community with 35+ World-Class Amenities
- Perfect Legal Documentation
- G Square Build Assist: Post-purchase guidance for Easy Villa Construction

PLUG & PLAY PLOTS

- 24x7 Security
- CCTV Surveillance
- Black Top Roads
- Streetlights
- Underground Drainage Connection
- Domestic Water Supply
- Overhead Tank
- Sewage Treatment Plant
- Underground EB Connection
- Storm Water Drain

RERA No- PRM/KA/RERA/1268/378/PR/020125/007342

UP TO 90% BANK LOAN AVAILABLE
Canara Bank | HDFC BANK | ICICI Bank | punjab national bank | LIC HFL | AXIS BANK

G SQUARE BUILD ASSIST
A POST-PURCHASE GUIDANCE PROGRAM

CREDAI

CASH NOT ACCEPTED

FOR SITE VISIT CALL
97430 34000

prajavani.net prajavani | ಶನಿವಾರ, ನವೆಂಬರ್ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 322 | ಪುಟ 24 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆಮಿಗೆ ಲಕ್ಷ್ಯ

ಭಾರತದ ಲಕ್ಷ್ಯ ಸೇನ್ ಶುಕ್ರವಾರ ಆಯುಷ್ ಶೆಟ್ಟಿ ಅವರನ್ನು ಮಣಿಸಿ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು

ಭುವನ ಸುಂದರಿ ಕಿರೀಟ

ಥಾಯ್ಲೆಂಡ್‌ನಲ್ಲಿ ನಡೆದ 2025ರ ಭುವನ ಸುಂದರಿ ಸ್ಪರ್ಧೆಯ ಕಿರೀಟವನ್ನು ಮೆಕ್ಸಿಕೊದ ಫಾತಿಮಾ ಬಾಷ್ ಮುಡಿಗೆ ಏರಿಸಿಕೊಂಡಿದ್ದಾರೆ

ಸೆನ್ಸೆಕ್ಸ್ 85,231 | ನಿಫ್ಟಿ 26,068 | $/₹ 89.66 | ಚಿನ್ನ (Std. 10g) ₹1,28,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,62,700 (ಬೆಂಗಳೂರು)

‘ಕೈ’ ಬಣ ರಾಜಕೀಯ ಬಿರುಸು

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆಯೇ ಕಾಂಗ್ರೆಸ್‌ನಲ್ಲಿನ ಬಣ ರಾಜಕೀಯ ಬಿರುಸುಗೊಂಡಿದೆ. ಸಚಿವ ಸಂಪುಟ ಪುನರ್‌ರಚನೆ ಹಾಗೂ ನಾಯಕತ್ವ ಬದಲಾವಣೆಯ ವಿಷಯವನ್ನು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ತಮ್ಮ ಬಣದ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ನಾಯಕರ ಪರವಾಗಿ ದೆಹಲಿ ಯಾತ್ರೆ, ಔತಣಕೂಟಗಳು ಜೋರಾಗಿವೆ. ಏತನ್ಮಧ್ಯೆ, ‘ಯಾರೂ ಮಾತನಾಡಬಾರದು’ ಎಂದು ಯಥಾವಾದವನ್ನು ಹೈಕಮಾಂಡ್ ಮುಂದಿಟ್ಟಿದೆ.

ಕಟ್ಟುನಿಟ್ಟಿನ ಎಚ್ಚರಿಕೆ: ಸುರ್ಜೇವಾಲಾ

ನವದೆಹಲಿ: ‘ಕೆಲವು ಕಾಂಗ್ರೆಸ್ ನಾಯಕರು ಮತ್ತು ಶಾಸಕರ ಅನಗತ್ಯ ಹೇಳಿಕೆಗಳು ಸಹ ಊಹಾಪೋಹಗಳಿಗೆ ಕಾರಣವಾಗಿವೆ.

ನಾಯಕತ್ವದ ವಿಷಯದ ಬಗ್ಗೆ ಅಥವಾ ಸ್ಥಾಪಿತ ಹಿತಾಸಕ್ತಿಗಳು ಪ್ರಚಾರ ಮಾಡುತ್ತಿರುವ ಕಾರ್ಯಸೂಚಿಗೆ ಮಣಿಯದಂತೆ ಪಕ್ಷವು ಅವರಿಗೆ ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಿದೆ’ ಎಂದು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ. ಈ ಕುರಿತು ಎಕ್ಸ್ ಮಾಡಿರುವ ಅವರು, ‘ರಾಜ್ಯದಲ್ಲಿನ ಬೆಳವಣಿಗೆಗಳ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಜತೆಗೆ ಚರ್ಚೆ ನಡೆಸಿದ್ದೇನೆ. ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತ ಬಳಿಕ ಬಣ ಬಿಕ್ಕಟ್ಟಿನಿಂದ ನಲುಗಿರುವ ಬಿಜೆಪಿ ಹಾಗೂ ಕೆಲವೊಂದು ಮಾಧ್ಯಮಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಉದ್ದೇಶಪೂರ್ವಕವಾಗಿ ಅಪಪ್ರಚಾರ ನಡೆಸುತ್ತಿವೆ’ ಎಂದು ಅವರು ದೂಷಿಸಿದ್ದಾರೆ.

‘ಸಿ.ಎಂ ಆಗಿ ಮುಂದುವರಿಯುವೆ’

ಮೈಸೂರು: ‘ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯುತ್ತೇನೆ. ಮುಂದಿನ ಬಜೆಟ್‌ಗಳನ್ನು ನಾನೇ ಮಂಡಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಪತ್ರಕರ್ತರ ಜೊತೆ ಶುಕ್ರವಾರ ಅವರು ಮಾತನಾಡಿದರು. ‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದಂತೆ ನಾನೆಂದೂ ಮಾತಿಗೆ ತಪ್ಪುವುದಿಲ್ಲ. ರಾಜ್ಯದ ಜನರಿಗೆ ನೀಡಿದ ಗ್ಯಾರಂಟಿಯ ಭರವಸೆಯನ್ನು ಈಡೇರಿಸಿದ್ದೇನೆ. ಮುಖ್ಯಮಂತ್ರಿಯಾಗಿಯೂ ಮುಂದುವರೆಯುತ್ತೇನೆ’ ಎಂದು ಹೇಳಿದರು. ‘ನೀವೇ ಮುಂದಿನ ಬಜೆಟ್ ಮಂಡಿಸುವುದಾಗಿ ಹೇಳಿದ್ದೀರಿ. ಈ ನಡುವೆಯೇ ಕಾಂಗ್ರೆಸ್‌ನ ಕೆಲವು ಶಾಸಕರು ದೆಹಲಿ ಭೇಟಿಗೆ ತೆರಳಿದ್ದಾರಲ್ಲ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ‘ಎಷ್ಟು ಜನ ಹೋಗಿದ್ದಾರೆ? ಶಾಸಕರು ದೆಹಲಿಗೆ ಹೋಗಲೇಬಾರದು ಎಂದು ಇದೆಯಾ’ ಎಂದು ಪ್ರಶ್ನಿಸಿದರು. ಈ ವೇಳೆ ಪತ್ರಕರ್ತರ ಪ್ರಶ್ನೆಗಳಿಗೆ ಸಿಟ್ಟಾದರು.

‘ಸಚಿವ ಚೆಲುವರಾಯಸ್ವಾಮಿ ಅವರು ಕೇಂದ್ರ ಕೃಷಿ ಸಚಿವರನ್ನು ಭೇಟಿಯಾಗಲು ಹೋಗಿದ್ದಾಗಿ ಹೇಳಿದ್ದಾರೆ. ಡಿ.ಕೆ. ಶಿವಕುಮಾರ್ ಸಹ ಈ ಬಗ್ಗೆ ಈಗಾಗಲೇ ಈ ಬಗ್ಗೆ ಮಾತನಾಡಿದ್ದಾರೆ’ ಎಂದರು.

11

‘ಐ ವಿಶ್ ಹಿಮ್ ಆಲ್ ದ ಬೆಸ್ಟ್’

ಬೆಂಗಳೂರು: ‘ಸಿದ್ದರಾಮಯ್ಯ ಐದು ವರ್ಷ ನಾನೇ ಮುಖ್ಯಮಂತ್ರಿ ಅಂದಿದ್ದಾರೆ, ಐ ವಿಶ್ ಹಿಮ್ ಆಲ್ ದ ಬೆಸ್ಟ್...’

‘ಮುಖ್ಯಮಂತ್ರಿಯಾಗಿ ನಾನೇ ಮುಂದುವರಿಯುತ್ತೇನೆ. ಮುಂದಿನ ಬಜೆಟ್ ಅನ್ನೂ ಮಂಡಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಹೇಳಿದ್ದಾರಲ್ಲ’ ಎನ್ನುವ ಪ್ರಶ್ನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪ್ರತಿಕ್ರಿಯೆ ಹೀಗಿತ್ತು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಐದು ವರ್ಷ ಇರುವುದಿಲ್ಲ ಎಂದು ನಾವು ಹೇಳಿಲ್ಲ. ಅವರ ಅಧಿಕಾರವನ್ನು ಯಾರೂ ಪ್ರಶ್ನೆ ಮಾಡಿಲ್ಲ. ಅವರೇ ಹೇಳಿದ್ದಾರೆ. ದೊಡ್ಡವರು ಹೇಳಿದ ಮೇಲೆ, ನಾವು ಚಿಕ್ಕವರು ಗೌರವದಿಂದ ಕೇಳಿಕೊಂಡು ನಮ್ರತೆಯಿಂದ ಇರಬೇಕು’ ಎಂದು ಹೇಳಿದರು. ‘ಅಧಿಕಾರ ಹಸ್ತಾಂತರ ವಿಚಾರದಲ್ಲಿ ಹೈಕಮಾಂಡ್ ನಾಯಕರ ನಿರ್ಧಾರಕ್ಕೆ ಬದ್ಧವಾಗಿದ್ದೇನೆ. ಸಿದ್ದರಾಮಯ್ಯ ಅವರೂ ಹೈಕಮಾಂಡ್ ನಾಯಕರ ತೀರ್ಮಾನದಂತೆ ನಡೆಯುವುದಾಗಿ ಹೇಳಿದ್ದಾರೆ’ ಎಂದರು.



11

ಯುದ್ಧ ವಿಮಾನ ಪತನ

ಪಿಟಿಐ ಚಿತ್ರ

ದುಬೈ ಏರ್‌ಶೋನಲ್ಲಿ ಪ್ರದರ್ಶನ ನೀಡುತ್ತಿದ್ದ ವೇಳೆ ಭಾರತೀಯ ವಾಯುಪಡೆಯ ಲಘು ಯುದ್ಧ ವಿಮಾನ ‘ತೇಜಸ್’ ಶುಕ್ರವಾರ ಪತನಗೊಂಡಿದ್ದು, ಪೈಲಟ್ ಮೃತಪಟ್ಟಿದ್ದಾರೆ. ವಿಮಾನ ನೆಲಕ್ಕೆ ಅಪ್ಪಳಿಸಿದಾಗ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿರುವ ದೃಶ್ಯ

ದರೋಡೆ: ಕಾನ್‌ಸ್ಟೆಬಲ್ ಸೂತ್ರಧಾರ

ಮಾಜಿ ಉದ್ಯೋಗಿ ನೆರವು • ಎಂಟು ಮಂದಿಯ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ್ದ ಪ್ರಕರಣದ ಸಂಚುಕೋರರು ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಸಿಎಂಎಸ್ ಏಜೆನ್ಸಿಯ ಮಾಜಿ ಉದ್ಯೋಗಿ ಎಂಬುದು ಪೊಲೀಸರ ತನಿಖೆಯಿಂದ ಬಯಲಾಗಿದೆ.

ಅಣ್ಣಪ್ಪ ನಾಯ್ಕ

ತಾಂತ್ರಿಕ ನೆರವು ಪಡೆದು ನಾಲ್ಕು ವಿಶೇಷ ತಂಡಗಳು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿವೆ. ತನಿಖೆ ವೇಳೆ ಹಲವು ಸಂಗತಿಗಳು ಗೊತ್ತಾಗಿವೆ. ‘ಗೋವಿಂದಪುರ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ, ಸಿಎಂಎಸ್ ಏಜೆನ್ಸಿ ಮಾಜಿ ಉದ್ಯೋಗಿ ಕ್ಸೇವಿಯರ್ ಸೇರಿದಂತೆ ಎಂಟು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ’ ಎಂಬುದು ಗೊತ್ತಾಗಿದೆ.

‘ಈ ಪ್ರಕರಣದಲ್ಲಿ ಮತ್ತೊಬ್ಬ ಪೊಲೀಸ್ ಸಿಬ್ಬಂದಿ ಮೇಲೂ ಶಂಕೆಯಿದ್ದು, ಸೂಕ್ತ ಸಾಕ್ಷ್ಯಾಧಾರಗಳು ಲಭಿಸಿದ ತಕ್ಷಣವೇ ಅವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತದೆ’ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

‘ಆಂಧ್ರಪ್ರದೇಶದ ಚಿತ್ತೂರು, ತಮಿಳು ನಾಡಿನ ಚೆನ್ನೈನಲ್ಲಿ ನಾಲ್ವರು, ಬೆಂಗಳೂರಿನ ನಾಲ್ಕು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ತನಿಖೆ ಪ್ರಗತಿ ಕಂಡಿದೆ. ಸದ್ಯದಲ್ಲೇ ಉಳಿದವರನ್ನೂ ಪತ್ತೆಹಚ್ಚಿ ಬಂಧಿಸುತ್ತೇವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ವಶಕ್ಕೆ ಪಡೆದ ಶಂಕಿತರ ಪೈಕಿ, ಇಬ್ಬರು ಮಾಜಿ ಸೈನಿಕರೊಬ್ಬರ ಪುತ್ರರು ಎಂದು ಹೇಳಲಾಗಿದೆ.

6

ದರೋಡೆಗೆ ಸಂಚು ಹೇಗಿತ್ತು...

- ಜೆ.ಪಿ. ನಗರದ ಸಾರಕ್ಕಿ ಮುಖ್ಯರಸ್ತೆಯ ಎಚ್‌ಡಿಎಫ್‌ಸಿ ಬ್ಯಾಂಕ್ ಕರೆನ್ಸಿ ಕೇಂದ್ರದಿಂದ ಹಣವನ್ನು ಹೇಗೆ ಸಾಗಣೆ ಮಾಡಲಾಗುತ್ತದೆ ಎಂಬ ಮಾಹಿತಿ ನೀಡಿದ್ದ ಸಿಎಂಎಸ್ ಏಜೆನ್ಸಿ ಮಾಜಿ ಉದ್ಯೋಗಿ ಕ್ಸೇವಿಯರ್
- ವರ್ಷದ ಹಿಂದೆ ಕೆಲಸ ಬಿಟ್ಟಿದ್ದ ಮಾಜಿ ಉದ್ಯೋಗಿ
- ದರೋಡೆ ಬಳಿಕ ಪಾರಾಗುವ ಯೋಜನೆ ರೂಪಿಸಿದ್ದ ಕಾನ್‌ಸ್ಟೆಬಲ್
- ಬಾಣಸವಾಡಿಯ ಕಲ್ಯಾಣನಗರ ಹಾಗೂ ಕಮ್ಮನಹಳ್ಳಿಯ ಹುಡುಗರನ್ನು ಬಳಸಿ ವಾಹನ ಅಡ್ಡಗಟ್ಟಿ ದರೋಡೆ
- ಹಲವು ಬಾರಿ ಕರ್ತವ್ಯ ಲೋಪ ಎಸಗಿದ್ದ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ
- ಸದ್ಯ 20ಕ್ಕೂ ಹೆಚ್ಚು ಮಂದಿಯ ವಿಚಾರಣೆ
- ತಿರುಪತಿಯಲ್ಲಿ ಪತ್ತೆಯಾದ ವಾಹನವನ್ನು ವಶಕ್ಕೆ ಪಡೆದ ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸರು

₹5.30 ಕೋಟಿ ಜಪ್ತಿ?

‘ದರೋಡೆಯಾದ ₹7.11 ಕೋಟಿ ಪೈಕಿ, ₹5.30 ಕೋಟಿಯನ್ನು ಚೆನ್ನೈನಲ್ಲಿ ವಶಕ್ಕೆ ಪಡೆಯಲಾಗಿದೆ’ ಎಂಬ ಮಾಹಿತಿ ಲಭ್ಯವಾಗಿದೆ. ‘ಕಾರ್ಯಾಚರಣೆ ವೇಳೆ ಹಣವನ್ನು ಜಪ್ತಿ ಮಾಡಲಾಗಿದೆ. ಎಷ್ಟು ಎಂಬುದು ನಿಖರವಾಗಿ ಗೊತ್ತಾಗಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜೆಡಿಎಸ್‌ಗೆ ಕುಮಾರಸ್ವಾಮಿಯೇ ಅಧ್ಯಕ್ಷ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ಎಚ್.ಡಿ.ಕುಮಾರಸ್ವಾಮಿ ಅವರೇ ಮುಂದುವರೆಯಬೇಕು ಎಂಬ ಅಭಿಪ್ರಾಯ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ವ್ಯಕ್ತವಾಗಿದ್ದು, ರಾಜ್ಯದ ಮುಂದಿನ ವಿಧಾನಸಭಾ ಚುನಾವಣೆಯನ್ನು ಅವರ ನೇತೃತ್ವದಲ್ಲಿಯೇ ಎದುರಿಸಲಿದೆ.

ವಿವರ 11

4 ಕಾರ್ಮಿಕ ಸಂಹಿತೆಗಳು ಜಾರಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಾರ್ಮಿಕ ಕಾನೂನುಗಳನ್ನು ಸಮಗ್ರವಾಗಿ ಪರಿಷ್ಕರಿಸಿದ್ದು, ನಾಲ್ಕು ನೂತನ ಕಾರ್ಮಿಕ ಸಂಹಿತೆಗಳು ಶುಕ್ರವಾರದಿಂದ ಜಾರಿಗೆ ಬಂದಿವೆ. ಕೇಂದ್ರ ಸರ್ಕಾರವು ಈ ಕುರಿತು ಅಧಿಸೂಚನೆಯನ್ನೂ ಹೊರಡಿಸಿದೆ.

ವೇತನ ಸಂಹಿತೆ (2019), ಕೈಗಾರಿಕೆ ಸಂಪರ್ಕ ಸಂಹಿತೆ (2020), ಸಾಮಾಜಿಕ ಭದ್ರತೆ ಕುರಿತ ಸಂಹಿತೆ (2020) ಹಾಗೂ ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಉದ್ಯೋಗ ಕುರಿತ ನಿಬಂಧನೆಗಳ ಸಂಹಿತೆ (2020) ಜಾರಿಗೆ ಬಂದಿವೆ.

ಈ ಮೊದಲಿನ 29 ಕಾರ್ಮಿಕ ಕಾಯ್ದೆಗಳ ಬದಲಾಗಿ ಈ ನಾಲ್ಕು ಸಂಹಿತೆಗಳು ಅನುಷ್ಠಾನಕ್ಕೆ ಬಂದಿದ್ದು, ಕಾರ್ಮಿಕರಿಗೆ ಸಂಬಂಧಿಸಿದ ವಿವಿಧ ಕಾನೂನುಗಳನ್ನು ಆಧುನಿಕ ಚೌಕಟ್ಟಿನೊಂದಿಗೆ ಈ ಸಂಹಿತೆಯಡಿ ಒಟ್ಟುಗೂಡಿಸಲಾಗಿದೆ. ಗಿಗ್ ಕಾರ್ಮಿಕರು ಸಹ ಈ ಸಂಹಿತೆ ವ್ಯಾಪ್ತಿಗೆ ಬರಲಿದ್ದಾರೆ.

10

26ಕ್ಕೆ ಕಾರ್ಮಿಕ ಸಂಘಟನೆಗಳ ಪ್ರತಿಭಟನೆ

ಕೇಂದ್ರ ಸರ್ಕಾರ ರೂಪಿಸಿ, ಅಧಿಸೂಚನೆ ಪ್ರಕಟಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ವಿಪಕ್ಷಗಳೊಂದಿಗೆ ಸಂಯೋಜನೆ ಹೊಂದಿರುವ 10 ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

ಈ ಸಂಹಿತೆಗಳ ಅನುಷ್ಠಾನ ವಿರೋಧಿಸಿ ನವೆಂಬರ್ 26ಕ್ಕೆ, ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ದೇಶವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಹೇಳಿವೆ. ಈ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಹಾಗೂ ‘ಶ್ರಮ ಶಕ್ತಿ ನೀತಿ–2025’ರ ಕರಡು ಹಿಂಪಡೆಯಬೇಕು ಎಂಬುದಾಗಿ ಒತ್ತಾಯಿಸಲಾಗುವುದು ಎಂದೂ ತಿಳಿಸಿವೆ. ನೂತನ ಕಾರ್ಮಿಕ ಸಂಹಿತೆಗಳನ್ನು ‘ನರಹತ್ಯೆಯ ದಾಳಿಗಳು’ ಹಾಗೂ ‘ದುಡಿಯುವ ವರ್ಗಗಳ ಮೇಲಿನ ಯುದ್ಧ’ ಎಂದು ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲುಎ, ಎಐಸಿಸಿಟಿಯು, ಎಲ್‌ಪಿಎಫ್ ಹಾಗೂ ಯುಟಿಯುಸಿ ಟೀಕಿಸಿವೆ.

ಕಾಡಂಚಿನಲ್ಲಿ ಕ್ಯಾಮೆರಾ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಿ ವನ್ಯಜೀವಿಗಳಿಗೆ ತೊಂದರೆ ನೀಡುವವರ ಮೇಲೆ ನಿಗಾ ಇರಿಸಲು ಹೆದ್ದಾರಿಯ ಅಲ್ಲಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ.

ಕಾಡುಪ್ರಾಣಿಗಳ ಫೋಟೊ, ವಿಡಿಯೊ ತೆಗೆಯುವುದು, ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸುವುದು ಹಾಗೂ ಹೆದ್ದಾರಿಯಲ್ಲಿ ಸಂಚಾರಕ್ಕೆ ಧಕ್ಕೆ ಆಗುವುದನ್ನು ತಡೆಯುವುದು, ಚಲನವಲನಗಳನ್ನು ಆಧರಿಸಿ ತಪ್ಪಿತಸ್ಥರ ಮೇಲೆ ದಂಡ ವಿಧಿಸುವುದು ಇದರ ಉದ್ದೇಶ.

‘ಬಂಡೀಪುರದಿಂದ ಕೆಕ್ಕನಹಳ್ಳ ಚೆಕ್‌ಪೋಸ್ಟ್‌ವರೆಗೆ ಚಾಚಿರುವ ಹೆದ್ದಾರಿಯಲ್ಲಿ 10 ಕಡೆ ಕ್ಯಾಮೆರಾ ಅಳವಡಿಸಲಾಗಿದೆ. ಸೋಲಾರ್ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಿರುವುದರಿಂದ ವಿದ್ಯುತ್ ಸಂಪರ್ಕದ ಅಗತ್ಯವಿಲ್ಲ. ದಿನದ 24 ತಾಸು ಕಾರ್ಯನಿರ್ವಹಿಸುತ್ತವೆ’ ಎಂದು ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್ ತಿಳಿಸಿದರು.

ಕಸ ಯಂತ್ರದ ಬಾಡಿಗೆ ಮರುಪರಿಶೀಲನೆಗೆ ಸೂಚನೆ

ಬೆಂಗಳೂರು: ಯಾಂತ್ರಿಕ ಕಸ ಗುಡಿಸುವ ಯಂತ್ರಗಳಿಗೆ (ಮೆಕ್ಯಾನಿಕಲ್ ಸ್ವೀಪಿಂಗ್ ಮಷಿನ್) ದುಬಾರಿ ಬಾಡಿಗೆ ನೀಡುವುದಕ್ಕೆ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ, ಈ ಯೋಜನೆಯ ವೆಚ್ಚದ ಬಗ್ಗೆ ಮೂರನೇ ವ್ಯಕ್ತಿಯ ಮೂಲಕ ಪರಿಶೀಲನೆ ನಡೆಸುವಂತೆ ರಾಜ್ಯ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಸೂಚಿಸಿದೆ.

ವಿವರ 2

ಪಾಕ್‌ಗೆ ಮಾಹಿತಿ ಸೋರಿಕೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಉಡುಪಿ: ನೌಕಾಪಡೆಯ ಹಡಗುಗಳಿಗೆ ಸಂಬಂಧಿಸಿದ ಗೋಪ್ಯ ಮಾಹಿತಿಯನ್ನು ಪಾಕಿಸ್ತಾನಕ್ಕೆ ಸೋರಿಕೆ ಮಾಡಿದ ಆರೋಪದಲ್ಲಿ ಇಬ್ಬರನ್ನು ಪೊಲೀಸರು ಮಲ್ಪೆಯಲ್ಲಿ ಬಂಧಿಸಿದ್ದಾರೆ.

ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ರೋಹಿತ್ (29), ಸಂತ್ರಿ (37) ಬಂಧಿತರು.

‘ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವಾಲಯದ ಸುಪರ್ದಿಯಲ್ಲಿ ಇರುವ, ಮಲ್ಪೆಯ ಉಡುಪಿ ಕೊಚ್ಚಿನ್ ಶಿಪ್ ಯಾರ್ಡ್ ಸಂಸ್ಥೆಗೆ, ಸುಷ್ಮಾ ಮರೈನ್ ಪ್ರೈವೆಟ್ ಲಿಮಿಟೆಡ್ ಮೂಲಕ ಗುತ್ತಿಗೆ ಆಧಾರದಲ್ಲಿ ಆರೋಪಿಗಳು ಕೆಲಸಕ್ಕೆ ಸೇರಿದ್ದರು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರೋಹಿತ್



ಸಂತ್ರಿ

ವಿವರ 10

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಕಾರ್ಮಿಕರಿಗೆ ಸಿಗದ ಕನಿಷ್ಠ ವೇತನ: ದೂರು

ಬೆಂಗಳೂರು: ನಗರದ ಟೆರಿಯರ್ ಸೆಕ್ಯೂರಿಟಿ ಸರ್ವಿಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಾಗೂ ಬ್ಲ್ಯೂ ಸ್ಪ್ರಿಂಗ್ ಎಂಟರ್‌ಪ್ರೈಸ್ ಸಂಸ್ಥೆಗಳು ಐದು ಸಾವಿರಕ್ಕೂ ಹೆಚ್ಚು ಕಾರ್ಮಿಕರಿಗೆ ರಾಜ್ಯ ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ಹಾಗೂ ಇತರೆ ಸೌಲಭ್ಯ ನೀಡುತ್ತಿಲ್ಲ ಎಂದು ಪಂಚತಾರಾ ಹೋಟೆಲ್ ಕಾರ್ಮಿಕರ ಸಂಘದ ಅಧ್ಯಕ್ಷ ಎಂ.ಟಿ.ಸುಭಾಷ್ ಚಂದ್ರ ಆರೋಪಿಸಿದ್ದಾರೆ.

ಈ ಸಂಬಂಧ ರಾಜ್ಯಪಾಲರಿಗೆ ಪತ್ರ ಬರೆದಿರುವ ಅವರು, 'ಸರಿಯಾದ ಸಮಯಕ್ಕೆ ವೇತನ ಪಾವತಿಸುವುದಿಲ್ಲ. ಸರ್ಕಾರದ ಕಾನೂನು ಕಾಗದದಲ್ಲೇ ಉಳಿದಿದೆ. ಪ್ರತಿಯೊಬ್ಬ ನೌಕರನಿಗೂ ಗ್ರಾಚ್ಯುಟಿ ಹಕ್ಕು ಸಿಗಬೇಕು. ಆದರೆ, ನೌಕರರಿಗೆ ಅನಗತ್ಯ ದಾಖಲೆಗಳು ತರುವಂತೆ, ಅಲೆದಾಡುವಂತೆ ಮಾಡಲಾಗಿದೆ. ಕೆಲಸ ಬಿಟ್ಟವರು ಸವಲತ್ತು ಪಡೆಯಲು ಪರದಾಡುತ್ತಿದ್ದಾರೆ. ಬಡವರು ಜೀವನ ನಡೆಸುವುದೇ ಕಷ್ಟವಾಗಿದೆ' ಎಂದು ಹೇಳಿದ್ದಾರೆ.

ದುಬಾರಿ ಬಾಡಿಗೆ: ಮರುಪರಿಶೀಲನೆಗೆ ಸೂಚನೆ

ಕಸ ಗುಡಿಸುವ ಯಂತ್ರಗಳ ಬಾಡಿಗೆಯಲ್ಲಿ ಅಕ್ರಮದ ಆರೋಪಕ್ಕೆ ಸರ್ಕಾರದ ಪ್ರತಿಕ್ರಿಯೆ

• ನವೀನ್ ಮಿನೇಜಸ್



ಮುಖ್ಯಾಂಶಗಳು
- ಬಾಡಿಗೆ ವೆಚ್ಚವನ್ನು ಸಮರ್ಥಿಸಿಕೊಂಡಿದ್ದ ಜಿಬಿಎ
- ಬಿಡ್‌ದಾರರ ಪ್ರತಿಕ್ರಿಯೆ ಆಧರಿಸಿ ಬೆಲೆ ನಿಗದಿ ಅಂದಿದ್ದ ಅಧಿಕಾರಿಗಳು
- ದುಬಾರಿ ಬೆಲೆ ಎಂದು ಸಂಘ ಸಂಸ್ಥೆಗಳಿಂದಲೂ ಟೀಕೆ

ಬೆಂಗಳೂರು: ಯಾಂತ್ರಿಕ ಕಸ ಗುಡಿಸುವ ಯಂತ್ರಗಳಿಗೆ (ಮೆಕ್ಯಾನಿಕಲ್ ಸ್ವೀಪಿಂಗ್ ಮಷಿನ್) ದುಬಾರಿ ಬಾಡಿಗೆ ನೀಡುವುದಕ್ಕೆ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ, ಈ ಯೋಜನೆಯ ವೆಚ್ಚದ ಬಗ್ಗೆ ಮೂರನೇ ವ್ಯಕ್ತಿಯ ಮೂಲಕ ಪರಿಶೀಲನೆ ನಡೆಸುವಂತೆ ರಾಜ್ಯ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಸೂಚಿಸಿದೆ.

46 ಕಸ ಗುಡಿಸುವ ಯಂತ್ರಗಳಿಗೆ ₹613 ಕೋಟಿ ಬಾಡಿಗೆ ನೀಡುವ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಕಸ ಗುಡಿಸುವ ಯಂತ್ರಗಳಿಗೆ ದುಬಾರಿ ಬಾಡಿಗೆ ನೀಡುವಲ್ಲಿ ಅಕ್ರಮ ನಡೆದಿದೆ ಎಂದು ಬಿಜೆಪಿ, ಜೆಡಿಎಸ್ ಸೇರಿದಂತೆ ರಾಜಕೀಯ ಪಕ್ಷಗಳು ಆರೋಪಿಸಿದ್ದವು. ಹೀಗಾಗಿ ಮರುಮೌಲ್ಯಮಾಪನಕ್ಕೆ ಸರ್ಕಾರ ಸೂಚನೆ ನೀಡಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ. ಯಾವುದೇ ಟೆಂಡರ್ ಕರೆಯುವ ಮೊದಲು ವೆಚ್ಚದ ಅಂದಾಜುಗಳನ್ನು ಮರುಮೌಲ್ಯಮಾಪನ ಮಾಡಲು ಮೂರನೇ ವ್ಯಕ್ತಿಯ ಏಜೆನ್ಸಿಯನ್ನು ನೇಮಿಸಬೇಕು ಎಂದು ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದ್ದಾರೆ. ಜಿಬಿಎ ವಿವಿಧ ಕಸ ಗುಡಿಸುವ ಯಂತ್ರಗಳ ಮಾದರಿಗಳು ಮತ್ತು ವಿಶೇಷಣಗಳನ್ನು ಹೋಲಿಸಬೇಕು ಮತ್ತು ಐದು ಪಾಲಿಕೆಗಳಿಗೆ ಹೆಚ್ಚು ಸೂಕ್ತವಾದ ಬ್ರ್ಯಾಂಡ್ ಮತ್ತು ವೈಶಿಷ್ಟ್ಯಗಳನ್ನು ಶಿಫಾರಸು ಮಾಡಬೇಕು' ಎಂದು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆದೇಶದ ಮೇರೆಗೆ ತುಷಾರ್ ಗಿರಿನಾಥ್ ಪತ್ರ ಬರೆದಿದ್ದಾರೆ.

ಒಟ್ಟು ₹781.08 ಕೋಟಿ ವೆಚ್ಚದಲ್ಲಿ ಏಳು ವರ್ಷಗಳ ಕಾಲ 59 ಕಸ ಗುಡಿಸುವ ಯಂತ್ರಗಳನ್ನು ಬಾಡಿಗೆಗೆ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಜಿಬಿಎ ಅಕ್ಟೋಬರ್‌ನಲ್ಲಿ ನಗರಾಭಿವೃದ್ಧಿ ಇಲಾಖೆಯನ್ನು ಕೋರಿತ್ತು. ನಗರಾಭಿವೃದ್ಧಿ ಇಲಾಖೆಯು ಯೋಜನೆಯನ್ನು ಪರಿಷ್ಕರಿಸಿತ್ತು. ಯಂತ್ರಗಳ ಸಂಖ್ಯೆಯನ್ನು 46ಕ್ಕೆ ಮತ್ತು ವೆಚ್ಚವನ್ನು ₹613.25 ಕೋಟಿಗೆ ಇಳಿಸಿತ್ತು. ರಾಜ್ಯ ಸಚಿವ ಸಂಪುಟವು ಇದನ್ನು ಅಂಗೀಕರಿಸಿತ್ತು. ಆದರೂ ಇದು ದುಬಾರಿ ಬೆಲೆ ಎಂದು ಆಕ್ಷೇಪಕ್ಕೆ ಒಳಗಾಗಿತ್ತು.

'ಯಂತ್ರಗಳನ್ನು ಖರೀದಿಸಲು ₹308 ಕೋಟಿ ಸಾಕಾಗುತ್ತದೆ. ಆದರೆ, ₹613 ಕೋಟಿ ವೆಚ್ಚ ಮಾಡಿ ಬಾಡಿಗೆ ಪಡೆಯುತ್ತಿರುವುದು ದೊಡ್ಡ ಹಗರಣ. ಕೇಂದ್ರ ಸರ್ಕಾರವು ₹72 ಲಕ್ಷಕ್ಕೆ ಒಂದು ವಾಹನವನ್ನು ಖರೀದಿಸಿದರೆ, ರಾಜ್ಯ ಸರ್ಕಾರವು ₹2.5 ಕೋಟಿ ಖರ್ಚು ಮಾಡುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದರು.

ಮೆಕ್ಯಾನಿಕಲ್ ಯಂತ್ರದ ಮೂಲಕ ಗಂಟೆಗೆ 2 ಕಿ.ಮೀ. ಮಾತ್ರ ಸ್ವಚ್ಛಗೊಳಿಸಬಹುದು. ಒಂದು ಗಂಟೆಯಲ್ಲಿ 40 ಕಿ.ಮೀ. ಸ್ವಚ್ಛಗೊಳಿಸಿದಂತೆ ಬಿಲ್ ಮಾಡುತ್ತಾರೆ. ನಗರದ ಸಂಚಾರ ದಟ್ಟಣೆಯ ನಡುವೆ ಇಷ್ಟು ವೇಗವಾಗಿ ಸ್ವಚ್ಛಗೊಳಿಸಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದ್ದರು.

ಸುದ್ದಿ 2 ನಿಮಿಷ

ದೀಪಾ ಸೇರಿ 7 ಮಂದಿಗೆ ಪ್ರಶಸ್ತಿ

ಬೆಂಗಳೂರು: ಭಾರತೀಯ ವಿದ್ಯಾಭವನ ನೀಡುವ 'ಭವನ್–ಜಾಕಿಯಾ ಶಂಕರ್ ಪಾಠಕ್ ಪ್ರಶಸ್ತಿ'ಗೆ ಲೇಖಕಿ ದೀಪಾ ಭಾಸ್ತಿ ಸೇರಿ ಏಳು ಮಂದಿಯನ್ನು ಆಯ್ಕೆ ಮಾಡಲಾಗಿದೆ.

ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಜಾಕಿಯಾ ಶಂಕರ್ ಪಾಠಕ್ ಸ್ಮರಣಾರ್ಥ ಅವರ ಕುಟುಂಬ ದತ್ತಿ ಸ್ಥಾಪಿಸಿದೆ. ಸಾಹಿತ್ಯ, ಶಿಕ್ಷಣ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. 2024ನೇ ಸಾಲಿಗೆ ಸಾಹಿತ್ಯ ವಿಭಾಗದಲ್ಲಿ ಲೇಖಕಿ ಹಾಗೂ ಶಿಕ್ಷಣ ತಜ್ಞೆ ಡಿ.ಆರ್. ದೇವಿಕಾ, ಶೈಕ್ಷಣಿಕ ಕ್ಷೇತ್ರದ ಸಾಧನೆಗಾಗಿ ಶುಭಾ ಮದನ್ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ಆನಂದಿ ಆಯ್ಕೆಯಾಗಿದ್ದಾರೆ.

2025ನೇ ಸಾಲಿಗೆ ಕ್ರಮವಾಗಿ ಅನುವಾದಕಿ ದೀಪಾ ಭಾಸ್ತಿ, ಕಮ್ಮಾಜೆಯ ಮೊರಾರ್ಜಿ ದೇಸಾಯಿ ವಸತಿ ಶಿಕ್ಷಣ ಸಂಸ್ಥೆಯ ಇಂಗ್ಲಿಷ್ ಅಧ್ಯಾಪಕಿ ಆರಾಧನಾ, ವಿದ್ಯಾರ್ಥಿನಿಯರಾದ ಅಪ್ಸರಾ ಹಾಗೂ ನಿಸರ್ಗಾ ನಾರಾಯಣ್ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿ ಸಾಹಿತ್ಯ ವಿಭಾಗದಲ್ಲಿ ₹10 ಸಾವಿರ, ಶಿಕ್ಷಣ ವಿಭಾಗದಲ್ಲಿ ₹5 ಸಾವಿರ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ₹3 ಸಾವಿರ ನಗದು ಒಳಗೊಂಡಿದೆ.

ಡಿ.4ರಂದು ಸಂಜೆ 4 ಗಂಟೆಗೆ ಭಾರತೀಯ ವಿದ್ಯಾಭವನದ ಕೆ.ಆರ್.ಜಿ. ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

1 ಕಿ.ಮೀ.ನಲ್ಲಿ 400 ಗುಂಡಿ ವಿಪಕ್ಷ ನಾಯಕ ಅಶೋಕ

ಬೆಂಗಳೂರು: 'ಬಿವಿಕೆ ಅಯ್ಯಂಗಾರ್ ರಸ್ತೆಯ 1 ಕಿ.ಮೀ. ಅಂತರದಲ್ಲಿ 400 ಗುಂಡಿಗಳಿವೆ. ಗುಂಡಿ ಮುಚ್ಚಲು ಸರ್ಕಾರ ಬಿಡುಗಡೆ ಮಾಡುತ್ತಿರುವ ಹಣ ಎಲ್ಲಿ ಹೋಗುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಬಿಜೆಪಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ನಿಯೋಗವು ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸಿತು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಶೋಕ, 'ಬೆಂಗಳೂರು ಮಾತ್ರವಲ್ಲ. ಇಡೀ ರಾಜ್ಯದ ಎಲ್ಲ ಕಡೆಗಳಲ್ಲಿನ ರಸ್ತೆಗಳಲ್ಲಿ ಗುಂಡಿ ಬಿದ್ದಿವೆ. ಗುಂಡಿ ಮುಚ್ಚುವ ನೆಪದಲ್ಲಿ ಜನರ ತೆರಿಗೆ ಹಣ ಲೂಟಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಬೆಂಗಳೂರಿನಲ್ಲಿ ಜನರ ಮಧ್ಯೆಯೇ ₹7 ಕೋಟಿ ದರೋಡೆ ಮಾಡಿದ್ದಾರೆ. ಬೆಂಗಳೂರನ್ನು ಗಾರ್ಬೇಜ್ ಸಿಟಿ, ದರೋಡೆ ನಗರ ಮಾಡಿದ್ದಷ್ಟೇ ಇವರ ಸಾಧನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಎರಡೂವರೆ ವರ್ಷದ ಅವಧಿಯಲ್ಲಿ ಸರ್ಕಾರದ ವಿರುದ್ಧ ಆರೋಪಗಳ ಕುರಿತಾದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದರು.

'ಬೆಂಗಳೂರಿನಲ್ಲಿ ಮನೆ–ಮನೆಯಿಂದ ಕಸ ಸಂಗ್ರಹಿಸುತ್ತಿಲ್ಲ. ಇದು ಹೀಗೇ ಮುಂದುವರೆದರೆ ನಾವೆಲ್ಲರೂ ಜಿಬಿಎ ಕಚೇರಿಗಳ ಎದುರು ಕಸ ಸುರಿಯುತ್ತೇವೆ' ಎಂದು ಸಂಸದ ಪಿ.ಸಿ. ಮೋಹನ್ ಆಕ್ರೋಶ ವ್ಯಕ್ತಪಡಿಸಿದರು. ಸಂಸದ ಗೋವಿಂದ ಕಾರಜೋಳ ಅವರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ 9ನೇ ಕನ್ನಡ ಸಮ್ಮೇಳನ: ವಿಷಯ: 'ಮಾನವ ಸಂಪನ್ಮೂಲ ಮತ್ತು ಕೈಗಾರಿಕಾ ಸಂಬಂಧಗಳಲ್ಲಿ ಮೌಲ್ಯಗಳು, ನವೀನತೆ ಹಾಗೂ ಕೃತಕ ಬುದ್ಧಿಮತ್ತೆಯ ಸಮ್ಮಿಲನ', ಅತಿಥಿಗಳು: ಸಾಧು ಕೋಕಿಲ, ಬಿ.ಸಿ. ಪ್ರಭಾಕರ್, ಎಸ್.ಎನ್. ಮೂರ್ತಿ, ಮಂಜುನಾಥ ಗಂಗಾಧರ, ಕೆ. ಶ್ರೀನಿವಾಸ್, ಕೆ.ಜಿ. ನಂಜಪ್ಪ, ಟಿ.ವಿ. ರಾವ್, ರಮೇಶ್ ಬಿ., ಮ್ಯಾಕ್ಸಿ ಎಫ್. ಫರ್ನಾಂಡಿಸ್, ನಾಗನಗೌಡ ಎಸ್.ಜೆ., ಸತ್ಯಾನಂದ ಎಂ., ಇಸ್ರೇಲ್ ಇಂಬರಾಜ್, ಪ್ರಸನ್ನ ಮಾವಿನಕುಳಿ, ಆಯೋಜನೆ: ನಿರಾತಂಕ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 9

ಆಚಾರ್ಯ ಕನ್ನಡ ನಾಡು ನುಡಿ ಮಹೋತ್ಸವ: ಅತಿಥಿಗಳು: ಎಸ್. ಮುನಿರಾಜು, ಸಂತೀಶ್ ಎಂ. ಬೆಜ್ಜಿಹಳ್ಳಿ, ಉಪಸ್ಥಿತಿ: ಸುಷ್ಮಾ ಹರೀಶ್, ಉದಯಕುಮಾರ್, ಶ್ರೀಕಲಾ, ರಂಗನಾಥ್, ಆಯೋಜನೆ ಹಾಗೂ ಸ್ಥಳ: ಆಚಾರ್ಯ ಗುರುಕುಲ ವಿದ್ಯಾಕೇಂದ್ರ, ಬಾಗಲಗುಂಟೆ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ ಸಮಾರಂಭ, 'ಕರ್ನಾಟಕ ರತ್ನ ದೇಜಗೌ ಕನ್ನಡ ಶ್ರೀ' ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣೆ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಎಂ. ಸತೀಶ್ ರೆಡ್ಡಿ, ಆಯೋಜನೆ: ದಶಮುಖ ಸಾಮಾಜಿಕ ಸೇವಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ.ರಸ್ತೆ, ಬೆಳಿಗ್ಗೆ 10

55ನೇ ಸಂಗೀತ ಸಮ್ಮೇಳನದ ಅಂಗವಾಗಿ ಪ್ರಾತ್ಯಕ್ಷಿಕೆ: ಎಂ.ಆರ್.ವಿ. ಪ್ರಸಾದ್, ಪದ್ಮ ಗುರುದತ್, ತಿರುಮಲೆ ಶ್ರೀನಿವಾಸ, ಗುರುಪ್ರಸನ್ನ, ರಾಜಶೇಖರ್, ಸೋಮಶೇಖರ್ ಜೋಯಿಸ್, ರಂಗನಾಥ ಚಕ್ರವರ್ತಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಲಕ್ಷ್ಮೀನಾರಾಯಣ ಎ.ವಿ., ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 11

ವಿಜಯ್ ಪ್ರಕಾಶ್

'ವಂದೇ ಮಾತರಂ' 150 ವರ್ಷಗಳ ಸಂಭ್ರಮಾಚರಣೆ: ಉದ್ಘಾಟನೆ: ವಿಜಯ್ ಪ್ರಕಾಶ್, ಅಧ್ಯಕ್ಷತೆ: ಆರ್. ಅಶೋಕ, ಅತಿಥಿಗಳು: ಅರವಿಂದ್ ರಾಮಸ್ವಾಮಿ, ನರೇಶ್ ಕುಮಾರ್, ಆಯೋಜನೆ: ವೀಣಾವಾಣಿ ಸಂಗೀತ ಶಾಲೆ, ಸ್ಥಳ: ಶಾಸಕರ ಕಚೇರಿ, ಪದ್ಮನಾಭನಗರ ವಿಧಾನಸಭೆ ಕ್ಷೇತ್ರ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

'ಸಿನಿಕಾವ್ಯ ನಾದಸಿರಿ' ಸಂಗೀತೋತ್ಸವ ಹಾಗೂ ನಾದ ಸರಸ್ವತಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ದಿನೇಶ್ ಗುರೂಜಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಪ್ರಶಸ್ತಿ ಪ್ರದಾನ: ಆರ್.ವಿ. ರಾಘವೇಂದ್ರ, ಪ್ರಶಸ್ತಿ ಪುರಸ್ಕೃತರು: ವಿಜಯ ಹಾವನೂರು, ಆಯೋಜನೆ: ನಿನಾದ ಸಂಸ್ಕೃತಿ ಕಲಾಕೇಂದ್ರ, ಸ್ಥಳ: ಗಾಂಧಿ ನೆಹರೂ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ಕಾ.ವೆಂ.ಶ್ರೀ. ಕಾವ್ಯಸಂಜೆ: ಉಪಸ್ಥಿತಿ: ಕಾ.ವೆಂ. ಶ್ರೀನಿವಾಸಮೂರ್ತಿ, ಅತಿಥಿಗಳು: ಎಂ. ಕೃಷ್ಣಮೂರ್ತಿ, ಮಂಜುನಾಥ ನಾಗಪ್ಪ, ಆಯೋಜನೆ: ಇಂಚರ ಸುಗಮ ಸಂಗೀತ ಸಂಸ್ಥೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

55ನೇ ಸಂಗೀತ ಸಮ್ಮೇಳನ: ಉದಯೋನ್ಮುಖ ಕಲಾವಿದರ ಸಂಗೀತ ಕಛೇರಿ: ವೀಣೆ: ಹಿಮಾನಿ ಅನಂತ್, ಮೃದಂಗ: ಸುಧನ್ವ ಆರ್., ಘಟ: ಸ್ಕಂದ ಮಂಜುನಾಥ್, ಸಂಗೀತ ಸಮ್ಮೇಳನ ಕಛೇರಿ: ಗಾಯನ: ಕಣ್ಣಾಣಪುರಂ ಎಸ್. ಅರವಿಂದ್, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಪ್ರವೀಶ್ ಸ್ಪರ್ಶ್, ಖಂಜಿರ: ಭಾರ್ಗವ ಹಾಲಂಬಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 4.15

ಐದು ಪುಸ್ತಕಗಳ ಬಿಡುಗಡೆ: ಬಿ.ಎಲ್. ಶಂಕರ್, ಬಿಡುಗಡೆಯಾಗುವ ಪುಸ್ತಕಗಳು: ನಟರಾಜ್ ತಲಘಟ್ಟಪುರ ಅವರ 'ಬಯಲ ರೂಪ', ' ಬೊಗಸೆ ತುಂಬ ಮಣ್ಣು', 'ಮಿಡಿನಾಗರಗಳ ನಡುವೆ', ಇಂಗ್ಲಿಷ್ ಅನುವಾದ 'ಅಡ್ಮೈರರ್ಸ್ ಆಫ್ ಕಲರ್', ಹಿಂದಿ ಅನುವಾದ 'ರಂಗೋ ಕೆ ಉಪಾಸಕ್', ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಅತಿಥಿ: ರಘುನಾಥ ಚ.ಹ., ಆಯೋಜನೆ: ವರ್ಷನಿಧಿ ಪ್ರಕಾಶನ, ಸ್ಥಳ: ಭಾರತ್ ಎಜುಕೇಷನ್ ಸೊಸೈಟಿ, ಜಯನಗರ 4ನೇ ಬ್ಲಾಕ್, ಸಂಜೆ 5

ಚಂದ್ರಶೇಖರ ಕಂಬಾರ

67ನೇ ಆಕಾಶವಾಣಿ ಸಂಗೀತ ಸಮ್ಮೇಳನ: ಉಪಸ್ಥಿತಿ: ಡಾ.ಸಿ.ಎನ್. ಮಂಜುನಾಥ್, ಕರ್ನಾಟಕ ಶಾಸ್ತ್ರೀಯ ಸಂಗೀತ: ಅಶೋಕ್ ಎಸ್., ಎಂ.ಬಿ. ಹರಿಹರನ್, ಭಾವಗೀತೆ ಗಾಯನ: ಲಕ್ಷ್ಮೀ ನಾಗರಾಜ್ ಮತ್ತು ತಂಡ, ಆಯೋಜನೆ: ಆಕಾಶವಾಣಿ, ಸ್ಥಳ: ಪುರಂದರ ಭವನ, ಇಂದಿರಾನಗರ ಸಂಗೀತ ಸಭಾ, ಇಂದಿರಾನಗರ, ಸಂಜೆ 6

'ಯಕ್ಷಪ್ರಶ್ನೆ' ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

₹40 ಕೋಟಿ ಬಿಡಿಎ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿದ್ದು, ನಾಗರಬಾವಿ ಬಡಾವಣೆಯಲ್ಲಿ ₹40 ಕೋಟಿ ಆಸ್ತಿ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ನಾಗರಬಾವಿ ಗ್ರಾಮದ ಸರ್ವೆ ನಂ. 35ರಲ್ಲಿ 1 ಎಕರೆ ಮತ್ತು ಸರ್ವೆ ನಂ. 19 ಹಾಗೂ 138ರ 20 ಗುಂಟೆ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡಿತು.

ಸೆಲ್ ಥೆರಪಿ ಕುರಿತು ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಮಯ್ಯ ಸ್ಮಾರಕ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ಸೆಲ್ ಥೆರಪಿ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಕೆ.ಬಿ.ಶಿವಕುಮಾರ್ ವಿಚಾರ ಸಂಕಿರಣ ಉದ್ಘಾಟಿಸಿದರು.

ಸಿಎಆರ್–ಟಿ ಚಿಕಿತ್ಸೆಗಳು, ಸೆಲ್ ಟ್ರಾನ್ಸ್‌ಪ್ಲಾಂಟ್, ಸೆಲ್ ಥೆರಪಿ ವಿಧಾನಗಳ ಬಗ್ಗೆ ಅಮೆರಿಕ, ಬ್ರಿಟನ್, ಜಪಾನ್, ಬ್ರೆಜಿಲ್, ಆಸ್ಟ್ರೇಲಿಯಾ ಮತ್ತು ಭಾರತ ಸೇರಿ ವಿವಿಧ ದೇಶಗಳ ಪ್ರಸಿದ್ಧ ವೈದ್ಯರು, ವಿಜ್ಞಾನಿಗಳು, ಸಂಶೋಧಕರ ಜತೆ ಸಂವಾದ ನಡೆಯಿತು.

ದೇಶದ ಆರೋಗ್ಯ ಕ್ಷೇತ್ರಕ್ಕೆ ಇದು ಮಹತ್ವದ ಅಧ್ಯಾಯವಾಗಿದ್ದು, ರಕ್ತ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಗಳಿಗೆ ಸಿಎಆರ್–ಟಿ ಸೆಲ್ ಥೆರಪಿ ಹೊಸ ದಿಕ್ಕು ತೋರಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟರು.

ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಎಸ್.ಸಿ. ನಾಗೇಂದ್ರ ಸ್ವಾಮಿ, 'ಸೆಲ್ ಥೆರಪಿ ವಿಜ್ಞಾನವು ವೇಗವಾಗಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಜಾಗತಿಕ ಮಾನದಂಡಗಳಿಗೆ ಹೊಂದುವ ವ್ಯವಸ್ಥೆಗಳು, ನೀತಿಗಳು ಮತ್ತು ತರಬೇತಿ ಚೌಕಟ್ಟನ್ನು ಬಲಪಡಿಸುವ ಅಗತ್ಯ ಇದೆ. ವಿಜ್ಞಾನ, ತಂತ್ರಜ್ಞಾನ ಮತ್ತು ರೋಗಿಗಳ ಅಗತ್ಯಗಳನ್ನು ಒಂದೇ ವೇದಿಕೆಯಲ್ಲಿ ಹೊಂದಿಸಲು ಬದ್ಧರಾಗಿದ್ದೇವೆ. ಬೆಂಗಳೂರು ನಗರ ಪ್ರತಿಭೆ, ಪರಿಸರ ಮತ್ತು ಸಹಕಾರದ ಮನೋಭಾವ ಹೊಂದಿದ್ದು, ಜಾಗತಿಕ ಮಟ್ಟದಲ್ಲಿ ಸೆಲ್ ಥೆರಪಿ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಲು ಸಂಪೂರ್ಣ ಸಿದ್ಧ' ಎಂದು ತಿಳಿಸಿದರು.

ಡಬ್ಲ್ಯುಬಿಎಂಟಿ ಅಧ್ಯಕ್ಷ ಡಾ.ಡಮಿಯಾನೋ ರೊಂಡೆಲ್ಲಿ, ಉಪಾಧ್ಯಕ್ಷ ಮಿಕ್ಕಿ ಕೋಹ್, ಮಾಜಿ ಅಧ್ಯಕ್ಷ ಮಹ್ಮೂದ್ ಅಲ್ಜುರ್ಫ್, ರಾಮಯ್ಯ ಸ್ಮಾರಕ ಆಸ್ಪತ್ರೆ ಸಲಹೆಗಾರ ಡಾ.ಸಂತೋಷ್ ಕೆ.ದೇವದಾಸ್, ಅಂತರರಾಷ್ಟ್ರೀಯ ತಜ್ಞರು, ಹಿರಿಯ ವಿಜ್ಞಾನಿಗಳು ಭಾಗವಹಿಸಿದ್ದರು.

ವಿಚಾರ ಸಂಕಿರಣವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಕೆ.ಬಿ.ಶಿವಕುಮಾರ್ ಉದ್ಘಾಟಿಸಿದರು. ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಸಿ.ನಾಗೇಂದ್ರ ಸ್ವಾಮಿ, ಡಬ್ಲ್ಯುಬಿಎಂಟಿ ಅಧ್ಯಕ್ಷ ಡಾ.ಡಮಿಯಾನೋ ರೊಂಡೆಲ್ಲಿ ಹಾಜರಿದ್ದರು



ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಅವರಿಗೆ ಪೌರಕಾರ್ಮಿಕರು ಮನವಿ ಸಲ್ಲಿಸಿದರು

ವೇತನ ವಿಳಂಬ ಸಹಿಸಲ್ಲ: ರಘು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೌರಕಾರ್ಮಿಕರು, ಕಸ ಸಂಗ್ರಹಿಸುವ ಆಟೊ ಟಿಪ್ಪರ್ ಚಾಲಕರು, ಸಹಾಯಕರಿಗೆ ಸಕಾಲದಲ್ಲಿ ವೇತನ ನೀಡದೆ ತೊಂದರೆ ನೀಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ವಹಿಸಬೇಕು ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಮತ್ತು ಲೋಡರ್ಸ್, ಕ್ಲೀನರ್ಸ್ ಮತ್ತು ಡ್ರೈವರ್ಸ್ ಅವರೊಂದಿಗೆ ಶುಕ್ರವಾರ ಗೋವಿಂದರಾಜನಗರದಲ್ಲಿರುವ ಜ್ಞಾನಸೌಧ ಸಭಾಂಗಣದಲ್ಲಿ ನಡೆದ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ನೀಡುವಲ್ಲಿ ಹಲವಾರು ತಾಂತ್ರಿಕ ತಪ್ಪುಗಳು, ಜನ್ಮದಿನಾಂಕ, ಜನ್ಮಸ್ಥಳ ತಪ್ಪು ನಮೂದು ಮತ್ತು ಸಿಂಧುತ್ವ ಇರದೇ ವಿಳಂಬವಾಗುತ್ತಿದೆ ಎಂದು ಪೌರಕಾರ್ಮಿಕರಾದ ಅಂಜಿನಮ್ಮ ದೂರಿದರು.

ವಿಶೇಷ ಶಿಬಿರ ಆಯೋಜಿಸಿ ಆದಷ್ಟು ಬೇಗ ಸಮಸ್ಯೆ ಬಗೆಹರಿಸ ಲಾಗುವುದು ಎಂದು ಪಾಲಿಕೆಯ ಆಯುಕ್ತ ಕೆ.ವಿ. ರಾಜೇಂದ್ರ ಭರವಸೆ ನೀಡಿದರು. ಹೆಚ್ಚುವರಿ ಆಯುಕ್ತ ದಿಗ್ವಿಜಯ್ ಬೋಡ್ಕೆ, ಆಯೋಗದ ಕಾರ್ಯದರ್ಶಿ ಸುಮಯ್ಯಾ ಅವರು ಭಾಗವಹಿಸಿದ್ದರು.

3 ದಶಕಗಳ ಅಧಿಕೃತ ಆಂಧ್ರ ಪಾಕಪದ್ಧತಿ
ಇದೀಗ ಸಿಂಗಸಂದ್ರ ದಲ್ಲಿ
nandhana PALACE Legendary Andhra Restaurant Chain
ನಂದನ ಪ್ಯಾಲೇಸ್
CUSTOMER CARE: BANGALORE: 080 46 13 11 11 CHENNAI: +91 89255 27979
www.nandhanarestaurants.com @nandhanapalace
No.93/2, 1st Floor, NH 7, Hosur Main Road, Singasandra, Bengaluru - 560 068 | Mb: +91 95134 44820
ರೆಸ್ಟೋರೆಂಟ್ | ಬ್ಯಾಂಕ್ವೆಟ್ಸ್ | ಟೇಕ್‌ಅವೇ | ಹೋಮ್ ಡೆಲಿವರಿ | ಕ್ಲೌಡ್ ಕಿಚನ್ಸ್

ನಗರಸಭಾ ಕಾರ್ಯಾಲಯ, ಚನ್ನಪಟ್ಟಣ
ಬೆಂಗಳೂರು ದಕ್ಷಿಣ ಜಿಲ್ಲೆ–562160. ದೂ.ಸಂ.: 080–27251235
e-mail: ka.channapatna.cmc@gmail.com, website: www.channapatnacity.mrc.gov.in
ಸಂ: CCMC/HS/PKDAY/CR-39/2025-26 ದಿನಾಂಕ: 21.11.2025
ಟೆಂಡರ್ ಪ್ರಕಟಣೆ
ಚನ್ನಪಟ್ಟಣ ನಗರಸಭೆಗೆ 2025–26ನೇ ಸಾಲಿಗೆ **ಪೌರಕಾರ್ಮಿಕರ ದಿನಾಚರಣೆಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಲು** ಆಸಕ್ತ ಏಜೆನ್ಸಿ/ಗುತ್ತಿಗೆದಾರರಿಂದ/ಅರ್ಹರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 06.12.2025 ಸಮಯ 5:00 ಗಂಟೆವರೆಗೆ.** ಅರ್ಹರು/ಗುತ್ತಿಗೆದಾರರು/ಏಜೆನ್ಸಿಯವರು ಹೆಚ್ಚಿನ ವಿವರಗಳಿಗೆ ಕಛೇರಿಯ ಆರೋಗ್ಯ ಶಾಖೆಯಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ	ಟೆಂಡರ್ ಫಾರಂ ಮೊತ್ತ
1	ಪೌರಕಾರ್ಮಿಕರ ದಿನಾಚರಣೆಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆ ಮಾಡುವುದು	ರೂ. 5.00 ಲಕ್ಷ	ರೂ.10,000/-	ರೂ.500/-

ಸಹಿ/– ಪೌರಾಯುಕ್ತರು
ನಗರಸಭೆ, ಚನ್ನಪಟ್ಟಣ
DIPR/BSD/459/SA/2025-26

ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್
PRESSTONIC You visualize... We realize
CIN: L28995KA2021PLC145718
ನೋಂದಾಯಿತ ಕಛೇರಿ: ಖಾತಾ ನಂ. 161, ಸೈಟ್ # 275 & 276, 14 ನೇ & 15 ನೇ ಕ್ರಾಸ್, ಕರೀಮ್ ಸಾಬ್ ಲೇಔಟ್, ಪೀಣ್ಯ ಹೆಗ್ಗನಹಳ್ಳಿ, ವಿಶ್ವನೀಡಂ, ಬೆಂಗಳೂರು - 560091, ಕರ್ನಾಟಕ, ಭಾರತ | ದೂರವಾಣಿ ಸಂಖ್ಯೆ: 080-23480001
ಇ-ಮೇಲ್: cs@presstonengg.co ವೆಬ್‌ಸೈಟ್: www.presstonic.com
ಅಂಚೆ ಮತಪತ್ರದ ಸೂಚನೆ
[illegible]
ದಿನಾಂಕ : 22.11.2025
ಸ್ಥಳ : ಬೆಂಗಳೂರು
ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/-

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಕೆಂಪೇಗೌಡ ರಸ್ತೆ, ಬೆಂಗಳೂರು–560009.
ದೂ. 080–22483140, 22483145, ಇ–ಮೇಲ್:cackarnataka1@gmail.com
ಸಂಖ್ಯೆ: ಸಿ.ಎ.ಸಿ–4(ಎ)/KARTET-2025/ಪತ್ರಿಕಾ.ಪ್ರ/01/2025–26/1943991 ದಿನಾಂಕ: 18.11.2025
ಪ್ರಕಟಣೆ
2025ರ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET-2025) ದಿನಾಂಕ:07/12/2025 ರಂದು ರಾಜ್ಯದಾದ್ಯಂತ ನಡೆಯಲ್ಲಿದ್ದು ಈ ಸಂಬಂಧ ಪರೀಕ್ಷಾ ಕೇಂದ್ರಗಳಲ್ಲಿ ಪರಿಶೀಲನಾ ಉಪಕರಣ/ಸಾಧನಗಳನ್ನು (Security Ancillary Services) ಅಳವಡಿಸುವ ಕುರಿತು E-Procurement Portal ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ನಿಗಧಿತ ಅವಧಿಯೊಳಗೆ ಟೆಂಡರ್‌ನ್ನು ಸಲ್ಲಿಸುವಂತೆ ಕೋರಲಾಗಿದೆ.
ಸಹಿ/–
ಜಂಟಿ ನಿರ್ದೇಶಕರು
ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು
ವಾಸಾಸಂಇ/ವಾಪ್ರ/3951/ಶಿರಡಿ ಸಾಯಿ/2025–26

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂರವಾಣಿ : 080–27682221, Email : itstaff_ulb_devanahalli@yahoo.co.in
ನಂ.ದೇಪು/ಆ.ಶಾ/ಟೆಂಡರ್/ಸಿಆರ್/09/2025–26 ದಿನಾಂಕ: 20.11.2025
ಟೆಂಡರ್ ಪ್ರಕಟಣೆ
[illegible]
DMA/2025-26/SE6707
www.kppp.karnataka.gov.in
ಸಹಿ/– ಆರೋಗ್ಯಾಧಿಕಾರಿಗಳು ಪುರಸಭೆ, ದೇವನಹಳ್ಳಿ
ಸಹಿ/– ಮುಖ್ಯಾಧಿಕಾರಿ ಪುರಸಭೆ, ದೇವನಹಳ್ಳಿ

ನೈಋತ್ಯ ರೈಲ್ವೆ
ಇ–(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 38 UBL 2025-26 ದಿನಾಂಕ: 13.11.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ (ಯುಬಿಎಲ್) ರೈಲ್ವೆ ನಿಲ್ದಾಣದಲ್ಲಿ ಮೆಕ್ಯಾನೈಜ್ಡ್ [illegible]	ರೂ. 2,51,18,618/-
2	ಹುಬ್ಬಳ್ಳಿ ವಿಭಾಗ: [illegible]	ರೂ. 2,29,12,703/-
3	ಹುಬ್ಬಳ್ಳಿ ವಿಭಾಗ: [illegible]	ರೂ. 1,43,16,342/-

[illegible]
PUB/678/AAF/PRB/SWR/2025-26

ಬ್ಯಾಂಕ್ ಆಫ್ ಬರೋಡ Bank of Baroda
ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯ ಮೂಲಕ
ಬೀದಿ ವ್ಯಾಪಾರಿಗಳಿಗೆ ದೊಡ್ಡ ಕನಸು ಕಾಣಲು ಸಹಾಯ ಮಾಡುವುದು
Call Toll Free No. (24x7) 1800 5700 / 1800 5000 | www.bankofbaroda.in
Scan to Know More

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427
ಇಮೇಲ್-eemidcbpura@gmail.com
ಸಂಖ್ಯೆ: ಕಾಪಾ/ಸ.ನೀ.ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ/1949/ 2025–26 ದಿನಾಂಕ: 19/11/2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26/ದಿ:19–11–2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ–1 ... ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ... 4702 ವಿಶೇಷ ಘಟಕ ಯೋಜನೆ, 4702 ಗಿರಿಜನ ಉಪ ... ಯಲಾಗಿದೆ. ಪ್ರತೀ ಕಾಮಗಾರಿಗೆ ಗರಿಷ್ಠ ಮತ್ತು ಕನಿಷ್ಠ ... ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ... ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ... ವೆಬ್‌ಸೈಟ್ www.kppp. karnataka.gov.in ನಲ್ಲಿ ... 04:30 ಗಂಟೆಯಿಂದ ಪಡೆಯಬಹುದು (Download). ... ಕೊನೆಯ (Upload) ದಿನಾಂಕ: 29/11/2025 ... ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01/12/2025ರ ... ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ... ವಿವರ ಹಾಗೂ ನಿಬಂಧನೆಗಳಿಗೆ www.kppp. ... ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ ... ಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ... ರುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನಟ ಸುದೀಪ್ ವಿರುದ್ಧ ದೂರು

ರಾಮನಗರ: ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ರಕ್ಷಿತಾ ಶೆಟ್ಟಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಡಿ ನಿರೂಪಕ, ನಟ ಕಿಚ್ಚ ಸುದೀಪ್ ವಿರುದ್ಧ ದೂರು ನೀಡಲಾಗಿದೆ.

ಸಾಮಾಜಿಕ ಹೋರಾಟಗಾರ್ತಿ ಸಂಧ್ಯಾ ಪವಿತ್ರಾ, ಡಿವೈಎಸ್‌ಪಿ ಕಚೇರಿಗೆ ದೂರು ನೀಡಿದ್ದಾರೆ. ಸ್ಪರ್ಧಿಗಳಾದ ಅಶ್ವಿನಿ ಗೌಡ ಹಾಗೂ ರಿಷಾ ಗೌಡ ವಿರುದ್ಧವೂ ದೂರು ನೀಡಿದ್ದಾರೆ.

ಶೋ ನಲ್ಲಿ ಇತ್ತೀಚೆಗೆ ಸ್ಪರ್ಧಿಯೊಬ್ಬರು,ಮತ್ತೊಬ್ಬ ಸ್ಪರ್ಧಿ ವಿರುದ್ಧ ಜಾತಿ ಆಧಾರಿತ ಹೇಳಿಕೆ ನೀಡಿದ್ದು, ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

26ರಂದು ಭೂಮಿ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಮಿ ಮತ್ತು ವಸತಿ ಹಕ್ಕಿಗಾಗಿ ಆಗ್ರಹಿಸಿ ಭೂಮಿ– ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯು ಇದೇ 26 ರಂದು 'ಬೆಂಗಳೂರು ಚಲೊ' ಭೂಮಿ ಸತ್ಯಾಗ್ರಹ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಕಾರ್ಯದರ್ಶಿ ಕುಮಾರ ಸಮತಳ, 'ಹಾಲಿ ಕಂದಾಯ ಕಾಯ್ದೆಗೆ ತಿದ್ದುಪಡಿ ತಂದು, ಬಗರ್ ಹುಕುಂ ಸಾಗುವಳಿದಾರರಿಗೆ 'ಒಂದು ಬಾರಿಯ ವಿಲೇವಾರಿ' ಅಡಿಯಲ್ಲಿ ಭೂಮಿ ಮಂಜೂರಾತಿ ನೀಡಬೇಕು. ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಭೂಮಿ ಸತ್ಯಾಗ್ರಹ ನಡೆಸಲಾಗುತ್ತದೆ' ಎಂದು ಹೇಳಿದರು.

'ವಸತಿರಹಿತರಿಗೆ ಸೂರು ಕಲ್ಪಿಸಲು ರಾಜ್ಯವ್ಯಾಪಿ ಸಮಗ್ರ ಬೃಹತ್ ವಸತಿ ಯೋಜನೆ ಘೋಷಿಸಬೇಕು. ಅರಣ್ಯ ಕಾಯ್ದೆಯಡಿ ಅರಣ್ಯವಾಸಿಗಳಿಗೂ ನ್ಯಾಯಬದ್ಧ ಹಕ್ಕು ಸಿಗಬೇಕು. ಬಲವಂತದ ಮತ್ತು ಫಲವತ್ತಾದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ರದ್ದಾಗಬೇಕು. ಬಲಾಢ್ಯರ ಪರವಾದ 2022ರ ಭೂ ತಿದ್ದುಪಡಿ ಕಾಯ್ದೆ ರದ್ದಾಗಬೇಕು' ಎಂದು ಆಗ್ರಹಿಸಿದರು.

'ರಾಜ್ಯದಲ್ಲಿ ಸರ್ಕಾರಿ, ಗೋಮಾಳ, ಖರಾಬ್, ಅನಾದೀನ, ಸೊಪ್ಪಿನ ಬೆಟ್ಟ ಇತ್ಯಾದಿ ಹೆಸರಿನಲ್ಲಿ ಸರ್ಕಾರಿ ಭೂಮಿಯಿದೆ. ಇದನ್ನು ಫಾರಂ ನಂ.50, 53 ಮತ್ತು 57ರಲ್ಲಿ ಅರ್ಜಿ ಸಲ್ಲಿಸಿದವರಿಗೆ ಮಂಜೂರಾತಿ ಮಾಡಲು ಅವಕಾಶವಿಲ್ಲ. ಹೀಗಾಗಿ, ಕಂದಾಯ ಕಾಯ್ದೆಗೆ ತಿದ್ದುಪಡಿ ತಂದು, ಭೂಮಿ ಮಂಜೂರು ಮಾಡಬೇಕು' ಎಂದು ಒತ್ತಾಯಿಸಿದರು.

ಸಮಿತಿಯ ರಾಜ್ಯ ಉಪಾಧ್ಯಕ್ಷ ಸಿರಿಮನೆ ನಾಗರಾಜ್, ರಾಜ್ಯ ಕಾರ್ಯದರ್ಶಿ ಕರಿಯಪ್ಪ ಗುಡಿಮನಿ, ಕೆ.ಮರಿಯಪ್ಪ ಉಪಸ್ಥಿತರಿದ್ದರು.

ಧರ್ಮಸ್ಥಳ ಪ್ರಕರಣ ಜಾಮೀನಿಗೆ ಅರ್ಜಿ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಕೃತ್ಯಗಳ ಪ್ರಕರಣದ ಸಾಕ್ಷಿ ದೂರುದಾರ ಜಾಮೀನು ಕೋರಿ ಕಾನೂನು ಸೇವಾ ಪ್ರಾಧಿಕಾರ ಒದಗಿಸಿದ ವಕೀಲರ ಮೂಲಕ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶುಕ್ರವಾರ ಅರ್ಜಿ ಸಲ್ಲಿಸಿದ್ದಾನೆ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು ಸಾಕ್ಷಿದೂರುದಾರನನ್ನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿದ ಆರೋಪದ ಮೇರೆಗೆ ಬಂಧಿಸಿತ್ತು. ಆತ ಶಿವಮೊಗ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾನೆ.

ವಾದ: ಈ ಪ್ರಕರಣದ ಸಾಕ್ಷಿ ದೂರುದಾರ ಸೇರಿ ಆರು ಮಂದಿ ಯಾವ ರೀತಿ ಕೋರ್ಟ್ ದಾರಿ ತಪ್ಪಿಸಿದ್ದಾರೆ ಎಂಬ ಕುರಿತು ಎಸ್‌ಐಟಿ ಬೆಳ್ತಂಗಡಿಯ ಜೆಎಂಎಫ್‌ಸಿ ಕೋರ್ಟ್‌ಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 215 ಅಡಿ ಗುರುವಾರ ವರದಿ ಸಲ್ಲಿಸಿದೆ. ಸಾಕ್ಷಿ ದೂರುದಾರ ಹೊರತುಪಡಿಸಿ ಉಳಿದವರು ವಿಚಾರಣೆಗೆ ಸಹಕರಿಸುತ್ತಿಲ್ಲ ಎಂದು ಎಸ್‌ಐಟಿ ಪರ ವಕೀಲರು ವಾದ ಮಂಡಿಸಿದರು ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-PROC0TNDR(IT)/1/2025-ADMN I ದಿನಾಂಕ: 22.11.2025

ಇ–ಟೆಂಡರ್ ಪ್ರಕಟಣೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಸಂಬಂಧಿತ ಏಜೆನ್ಸಿಗಳಿಂದ ಕೆಳಕಂಡ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ.

"Tender for Supply, Installation and Commissioning of Desktops, Laptops and Mini Desktops-Call-3".

Last date: **29.11.2025 till 11.00 AM.**

ಸದರಿ ಟೆಂಡರ್‌ನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/3972/2025-26

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರ ಕಚೇರಿ, ವೈಟ್‌ಫೀಲ್ಡ್ ವಿಭಾಗ,
ಹಗದೂರು ಮುಖ್ಯ ರಸ್ತೆ, ಸರ್ಕಾರಿ ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು – 560 066.

ಸಂ. ಬೆಂಪೂನಪಾ/ಕಾ.ಅ/ವೈಫಿ/ಟೆಂಡರ್/01/2025–26 ದಿನಾಂಕ : 20.11.2025

ತಿದ್ದುಪಡಿ–1

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ) (ಎರಡು ಲಕೋಟೆ ಪದ್ಧತಿ)

ಕಾಮಗಾರಿಯ ವಿವರ : (1) ಮಹದೇವಪುರ ಕ್ಷೇತ್ರದ ವೈಟ್‌ಫೀಲ್ಡ್ ಮತ್ತು ವರ್ತೂರು ವಾರ್ಡ್‌ನಲ್ಲಿ GOK ಅನುದಾನದಡಿಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಸಂಬಂಧಿತ ಕಾಮಗಾರಿಗಳು,

ಉಲ್ಲೇಖ : ಸಂ. ಬೆಂಪೂನಪಾ/ಕಾಅ/ವೈಫಿ/ಟೆಂಡರ್/01/2025–26, ದಿ : 11.11.2025

ಟೆಂಡರ್‌ನ ಬದಲಾದ ದಿನಾಂಕಗಳು : (1) Queries ಸಲ್ಲಿಸುವ ಕೊನೆಯ ದಿನಾಂಕ: **24.11.2025** (2) ಬಿಡ್ ಪೂರ್ವ ಸಭೆಯ ದಿನಾಂಕ ಮತ್ತು ಸಮಯ : **24.11.2025 ರಂದು 3.00 ಗಂಟೆಗೆ** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **28.11.2025 ಸಂಜೆ 4:00 ರವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **29.11.2025 ರಂದು ಸಂಜೆ 4.30 ರವರೆಗೆ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **02.12.2025 ರಂದು ಸಂಜೆ 4.00 ರವರೆಗೆ.**

ಅಧಿಸೂಚನೆಯ ಇತರ ನಿಯಮಗಳು ಮತ್ತು ಷರತ್ತುಗಳಲ್ಲಿ ಬದಲಾವಣೆಗಳು ಏನು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ವಿಭಾಗ, ಬೆಂ.ಪೂ.ನ.ಪಾ.

ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2025–26/954 ದಿನಾಂಕ:21/11/2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ತೃತೀಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **ttp://kppp.karnataka.gov.in** ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024–25 ನೇ ಸಾಲಿನ SBMG ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: (1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. (2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. (3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. (4) **ಡಬಲ್ ಕವರ್** ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿ ಕೆಲಸದ ವೇಳೆಯಲ್ಲಿ ಅಥವಾ **http://kppp.karnataka.gov.in** ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ **ದಿನಾಂಕ:25/11/2025** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : **kppp.karnataka.gov.in** ನಲ್ಲಿರುವಂತೆ **(1)** ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : **25/11/2025 ಸಮಯ 10:00** ಗಂಟೆಯಿಂದ **02/12/2025 ಸಮಯ 16:00** ಗಂಟೆವರೆಗೆ **(2)** ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : **25/11/2025 ಸಮಯ 10:00** ಗಂಟೆಯಿಂದ **02/12/2025 ಸಮಯ 16:00** ಗಂಟೆವರೆಗೆ **(3)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **03/12/2025 ರಂದು 16:30** ಗಂಟೆಗೆ ಕಚೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **05/12/2025 ರಂದು 11:00** ಗಂಟೆಗೆ ಕಚೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ.

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಚೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಕಾಮಗಾರಿ ಹೆಸರು : DETAILED PROJECT REPORT FOR CONSTRUCTION OF 3KLD FSTP AT UDAMAKAL VILLAGE OF GANGAVATHI TALUKA KOPPAL DIST. ಕೆಟಗರಿ : **GNL.** ಗುತ್ತಿಗೆಗೆ ಇಟ್ಟ ಮೊತ್ತ (ರೂ ಲಕ್ಷಗಳಲ್ಲಿ ಹೆಚ್ಚು/ಕಡಿಮೆ) **: Rs.65.29.** ಇ.ಎಂ.ಡಿ ಮೊತ್ತ **kppp.karnataka** ಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ಮೊತ್ತ **: Rs.1,31,000=00.** ಗುತ್ತೇದಾರರ ದರ್ಜೆ : **2 ನೇ ದರ್ಜೆ ಮೇಲ್ಪಟ್ಟು. ಅವಧಿ : 06 ತಿಂಗಳು.**

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ವಾ.ಸಾ.ಇ/ಕೊಪ್ಪಳ/472/ದೇಶಪಾಂಡೆಪಬ್ಲಿಸಿಟಿ/2025–26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ವಲಯ–1
ಕಾರ್ಯಪಾಲಕ ಅಭಿಯಂತರವರ ಕಚೇರಿ, ಕೆಂಗೇರಿ ವಿಭಾಗ, ಆರ್‌ಆರ್‌ನಗರ ವಲಯ,
ಬಿಬಿಎಂಪಿ ಕಚೇರಿ ಕಟ್ಟಡ, ಸಿ ಎ ನಂ.–3, 1ನೇ ಮುಖ್ಯ ರಸ್ತೆ, ಹೊರ ವರ್ತುಲ ರಸ್ತೆ,
ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560 060.

ಸಂಖ್ಯೆ:ಕಾಪಾಅ/ಕೆಂಗೇರಿ/ಟೆಂಡರ್/01/2025-26 ದಿನಾಂಕ: 21-11-2025

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)

ವೆಬ್‌ಸೈಟ್ **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ಗ್ರೇಟರ್ ಬೆಂಗಳೂರು ರವರು (ಬಿ.ಬಿ.ಎಂ.ಪಿ)/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳ ನಮೂದಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	**2025–26ರ ಅಡಿಯಲ್ಲಿ ವಿಶೇಷ ಮೂಲಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ ಅನುದಾನದ ಅಡಿಯಲ್ಲಿ ಕೆಂಗೇರಿ, ದೊಡ್ಡಬಿದರಕಲ್ಲು, ಹೇರೋಹಳ್ಳಿ ಮತ್ತು ಕೆಂಗೇರಿ ಉಪವಿಭಾಗದಲ್ಲಿನ ಆರ್ಟಿರಿಯಲ್, ಸಬ್‌ಆರ್ಟಿರಿಯಲ್, ಆದ್ಯತಾ ರಸ್ತೆಗಳು ಮತ್ತು ಸಂಪರ್ಕ ರಸ್ತೆಗಳ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಸರ್ಕಾರ ಸಂಖ್ಯೆ. 25, 27, 28, 29, 30, 31, 33, 34, 35, 40, 42, 43 ರಿಂದ 48) (ಪ್ಯಾಕೇಜ್–1).** ಕಾಮಗಾರಿ ಅಂದಾಜು ಮೊತ್ತ **(ರೂ.ಲಕ್ಷಗಳಲ್ಲಿ): 4460.00.** ಇಎಂಡಿ ಮೊತ್ತ **(ರೂ.ಗಳಲ್ಲಿ): 44,60,000/-** (1.00 ಲಕ್ಷ ಆನ್‌ಲೈನ್ ಮುಖಾಂತರ ಮತ್ತು ಬಾಕಿ ಮೊತ್ತ ಬಿಜಿ/ಎಫ್‌ಡಿಆರ್ ಮುಖಾಂತರ).
2)	**2025–26ರ ಅಡಿಯಲ್ಲಿ ವಿಶೇಷ ಮೂಲಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ ಅನುದಾನದ ಅಡಿಯಲ್ಲಿ ಹೇರೋಹಳ್ಳಿ ಉಪವಿಭಾಗದಲ್ಲಿನ ಆರ್ಟಿರಿಯಲ್, ಸಬ್‌ಆರ್ಟಿರಿಯಲ್, ಆದ್ಯತಾ ರಸ್ತೆಗಳು ಮತ್ತು ಸಂಪರ್ಕ ರಸ್ತೆಗಳ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಸರ್ಕಾರ ಸಂಖ್ಯೆ.26, 41, 49, 50, 51 ಮತ್ತು 52) (ಪ್ಯಾಕೇಜ್–2).** ಕಾಮಗಾರಿ ಅಂದಾಜು ಮೊತ್ತ **(ರೂ.ಲಕ್ಷಗಳಲ್ಲಿ): 4520.00.** ಇಎಂಡಿ ಮೊತ್ತ **(ರೂ.ಗಳಲ್ಲಿ): 45,20,000/-** (1.00 ಲಕ್ಷ ಆನ್‌ಲೈನ್ ಮುಖಾಂತರ ಮತ್ತು ಬಾಕಿ ಮೊತ್ತ ಬಿಜಿ/ಎಫ್‌ಡಿಆರ್ ಮುಖಾಂತರ).
3)	**2025–26ರ ಅಡಿಯಲ್ಲಿ ವಿಶೇಷ ಮೂಲಸೌಕರ್ಯ ಯೋಜನೆಗಳಿಗೆ ಬಂಡವಾಳ ಬೆಂಬಲ ಅನುದಾನದ ಅಡಿಯಲ್ಲಿ ಕೆಂಗೇರಿ ಉಪವಿಭಾಗದಲ್ಲಿನ ಆರ್ಟಿರಿಯಲ್, ಸಬ್‌ಆರ್ಟಿರಿಯಲ್, ಆದ್ಯತಾ ರಸ್ತೆಗಳು ಮತ್ತು ಸಂಪರ್ಕ ರಸ್ತೆಗಳ ಮತ್ತು ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಸರ್ಕಾರ ಸಂಖ್ಯೆ.32, 36, 37, 38 ಮತ್ತು 39) (ಪ್ಯಾಕೇಜ್–3).** ಕಾಮಗಾರಿ ಅಂದಾಜು ಮೊತ್ತ **(ರೂ.ಲಕ್ಷಗಳಲ್ಲಿ): 1020.00.** ಇಎಂಡಿ ಮೊತ್ತ **(ರೂ.ಗಳಲ್ಲಿ): 15,30,000/-** (1.00 ಲಕ್ಷ ಆನ್‌ಲೈನ್ ಮುಖಾಂತರ ಮತ್ತು ಬಾಕಿ ಮೊತ್ತ ಬಿಜಿ/ಎಫ್‌ಡಿಆರ್ ಮುಖಾಂತರ).

ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ದಾಖಲೆಯನ್ನು ಕೆಪಿಪಿ ಪೋರ್ಟಲ್‌ನಿಂದ ದೊರೆಯುವ **ದಿನಾಂಕ: 27–11–2025 ನಂತರ. 2)** ಪೂರ್ವ ಬಿಡ್ ಸಭೆ **ದಿನಾಂಕ: 02–12–2025 ರಂದು ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಐಡಿಯಲ್ ಹೋಮ್ಸ್, ಆರ್.ಆರ್. ನಗರ ವಲಯ, ಬೆಂಗಳೂರು–98 ಇಲ್ಲಿ ನಡೆಸಲಾಗುವುದು. 3)** ಟೆಂಡರ್‌ಗಳನ್ನು ಸಲ್ಲಿಸುವ **ಕೊನೆಯ ದಿನಾಂಕ: 11–12–2025 ರಂದು ಸಂಜೆ 4:00 ಗಂಟೆ ಮುಂಚಿತವಾಗಿ. 4)** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 12–12–2025 ರಂದು ಸಂಜೆ 4:30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗದಲ್ಲಿ ತೆರೆಯಲಾಗುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೆಂಪನಪಾ, ವಲಯ–1.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ನಂ.2, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು, ಮಂಡ್ಯ ಜಿಲ್ಲೆ
ಇ–ಮೇಲ್ : vcdnmaddur@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :07/2025–26 ದಿ:09.11.2025
ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:07/2025–26 ದಿನಾಂಕ: 19.11.2025 ರಲ್ಲಿ ಒಟ್ಟು 04 ಕಾಮಗಾರಿಗಳಿಗೆ (ಕನಿಷ್ಟ ಮೊತ್ತ 90.00 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ.300.00 ಲಕ್ಷ ರೂಪಾಯಿ)ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ **http://kppp.karnataka.gov.in** ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.2, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/590/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಿಭಾಗ, ಮಿನಿ ವಿಧಾನ ಸೌದ ಎದುರುಗಡೆ, ಐವಾನ–ಎ–ಶಾಹಿ ರೋಡ, ಕಲಬುರಗಿ, ದೂ.08472–220815

ಸಂಖ್ಯೆ : ಕಜಮ/ಕಾಪಾಅ/ತಾಂತ್ರಿಕ/ಕಿ.ಅ./ಗುರುಮಿಠಕಲ್ ಅಮೃತ ನಗರೋತ್ಥಾನ–4/ಟೆಂಡರ್/2025–26/1848 ದಿನಾಂಕ:21.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೋಟಲ್ ಮುಖಾಂತರ

ಈ ಕೆಳಗೆ ವಿವರಿಸಿದಂತೆ ಈ ಕೆಳಗಿನ ಕೆಲಸಗಳಿಗೆ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಕೆಲಸ ವಿವರಣೆ : ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ರ ಅಡಿಯಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ಪಟ್ಟಣ ಜಲಶುದ್ಧಿಕರಣ ಘಟಕದಲ್ಲಿ ಆವರಣದಲ್ಲಿರುವ 4.54 ಎಂ.ಎಲ್.ಡಿ. ಸಾಮರ್ಥ್ಯದ ಜಲ ಶುದ್ಧಿಕರಣ ಘಟಕದ ನವೀಕರಣ ಮತ್ತು ಚೈನ್ ಲಿಂಕ್ಡ್ ಬೇಲಿಯೊಂದಿಗೆ ಕಂಪೌಂಡ ಗೋಡೆಯ ನಿರ್ಮಾಣ ಕಾಮಗಾರಿ. 2) ಕೆಲಸದ ಅಂದಾಜು ಮೊತ್ತ (ರೂ.ಗಳಲ್ಲಿ) **: ರೂ.91,85,887.00** ಜಿ.ಎಸ್.ಟಿ. ಹೊರತುಪಡಿಸಿ, 3) ಮುಂಗಡ ಠೇವಣಿ ಮೊತ್ತ (ರೂಗಳಲ್ಲಿ) **ರೂ. 1,84,000.00** 4) ಟೆಂಡರ್ ಪ್ರಕ್ರಿಯೆ ಶುಲ್ಕ : ಕೆ.ಪಿ.ಪಿ. ಪ್ರೊಟಲ್‌ನಲ್ಲಿರುವಂತೆ, 5) ಕೆಲಸದ ಕಾಲಾವಧಿ: 09 ತಿಂಗಳು, 6) ಅರ್ಹತೆ ಮಾನದಂಡಗಳು: ಬಿಡ್ ದಾಖಲೆಗಳ ಪ್ರಕಾರ 7) ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಕಾರ್ಯಪಾಲಕ ಅಭಿಯಂತರರು ಕನನೀಸ ಮತ್ತು ಒಚ ಮಂಡಳಿ, ವಿಭಾಗ ಕಲಬುರಗಿ, ಮಿನಿ ಮಿಧಾನ ಸೌಧ ಎದುರುಗಡೆ, ಐವಾನ್–ಎ–ಶಾಹಿ ರೋಡ್, ಕಲಬುರಗಿ, 8) ಟೆಂಡರ್‌ನನ್ನು ಡೌನ್‌ಲೋಡ್ ಮಾಡಲು ಪ್ರಾರಂಭಿಸಲು ದಿನಾಂಕ ಮತ್ತು ಸಮಯ : **24.11.2025 ಬೆ.11.00** ಗಂಟೆಯಿಂದ 9) ಟೆಂಡರ್‌ನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಸಲ್ಲಿಸಲು/ಅಪಲೋಡ್ ಮಾಡಲು ಕೊನೆಯ **ದಿನಾಂಕ ಮತ್ತು ಸಮಯ : 08.12.2025 ಸಾ.17.00 ಗಂಟೆವರೆಗೆ** 10) ತಾಂತ್ರಿಕ ಟೆಂಡರ್ ತೆರೆಯುವ **ದಿನಾಂಕ ಮತ್ತು ಸಮಯ 10.12.2025 ಬೆ.11.00 ಗಂಟೆ ನಂತರ** 11) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : ಅರ್ಹ ಟೆಂಡರದಾರರಿಗೆ ಸುಚನೆ ನಿಡಲಾಗುವುದು. 12) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/757/2025–26/ದೇಶಪಾಂಡೆ ಪಬ್ಲಿಸಿಟಿ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ–4 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560 052. ಇ–ಮೇಲ್: bswmlee4@gmail.com

ಸಂ: ಉಪ್ರವ್ಯ–4/ಬೆಂಘತ್ಯಾನಿನಿ/ಟೆಂಡ್/06/2025–26 ದಿನಾಂಕ:21.11.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು, ಪರವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಉಪ ಪ್ರಧಾನ ವ್ಯವಸ್ಥಾಪಕರು–4, ಇವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನ (ಅಂದರೆ **https://kppp.karnataka.gov.in**) ಮೂಲಕ ಕೋಷ್ಟಕದಲ್ಲಿ ನೀಡಲಾದ ಕಾಮಗಾರಿಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು ಬಿಡ್‌ದಾರರು ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ 24.11.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) (ಜಿಎಸ್‌ಟಿ ಸೇರಿ)	ಇಎಂಡಿ (ರೂಗಳಲ್ಲಿ)	ಪೂರ್ಣಗೊಳಿಸುವ ಅವಧಿ
1	ಜಿಬಿಎ ವ್ಯಾಪ್ತಿಯಲ್ಲಿ ಮಾರುಕಟ್ಟೆಗಳು, ಕಮರ್ಷಿಯಲ್ ಸ್ಟ್ರೀಟ್‌ಗಳಂತಹ ಜನನಿಬಿಡ ಪ್ರದೇಶಗಳಲ್ಲಿ ಸ್ಥಳೀಯ ಬೀದಿಗಳನ್ನು ಗುಡಿಸಲು 71 ಸಂಖ್ಯೆಗಳ, 2 ಘನ ಮೀಟರ್‌ಗಿಂತ ಕಡಿಮೆ ಸಾಮರ್ಥ್ಯದ ಬ್ಯಾಟರಿ ಚಾಲಿತ(ಇವಿ) ಸಣ್ಣ ಯಾಂತ್ರಿಕ ಕಸ ಗುಡಿಸುವ ಯಂತ್ರಗಳ ಖರೀದಿ.	**726.87**	**10,90,000/–**	**6 ತಿಂಗಳು**

ಕಾರ್ಯಕ್ರಮಗಳ ವಿವರ: 1. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **06.12.2025 ರಂದು ಸಂಜೆ 4.00 ಗಂಟೆಯವರೆಗೆ. 2.** ಕೆಪಿಪಿ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **28.11.2025 ರಂದು ಮಧ್ಯಾಹ್ನ 3.00 ಗಂಟೆಯವರೆಗೆ.** 3. ಬಿಡ್ ಪೂರ್ವಭಾವಿ ಸಭೆಯು **28.11.2025 ರಂದು ಮಧ್ಯಾಹ್ನ 3.30 ಗಂಟೆಗೆ** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052 ಕಚೇರಿಯಲ್ಲಿ ನಡೆಯಲಿದೆ. **4.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **08.12.2025 ರಂದು ಸಂಜೆ 4.30 ಅಥವಾ ಮುಂದಿನ ಕೆಲಸದ ದಿನದಂದು.** 5. ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ಬಗ್ಗೆ ತಿಳಿಸಲಾಗುವುದು.

ನಿಯಮಗಳು ಮತ್ತು ಷರತ್ತುಗಳು: **1.** ನಿಯಂತ್ರಣಕ್ಕೆ ಮೀರಿದ ಸಿಸ್ಟಮ್ ವೈಫಲ್ಯದ ಕಾರಣದಿಂದಾಗಿ ಯಾವುದೇ ವಿಳಂಬಗಳಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರವಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ **https://kppp.karnataka.gov.in** ಆಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. **2.** ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರರಾಗಿರುವುದಿಲ್ಲ. **3.** ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–4, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/ಜಿಎ/3968/2025–26

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
ನಂ. 4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು–560002.
ಇ–ಮೇಲ್: nrlmkarnataka@gmail.com

ಸಂಖ್ಯೆ: KSRLPS/FNHW/FNHW/12/2024-FNHW-KSRLPS ದಿನಾಂಕ: 21.11.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಇಮರ್‌ಶನ್ ಕೇಂದ್ರಗಳಲ್ಲಿ ಜಾರಿಗೊಳಿಸಲಾಗಿರುವ ಆಹಾರ, ಪೋಷಣಾ, ಆರೋಗ್ಯ ಮತ್ತು ವಾಷ್ (FNHW) ಹಸ್ತಕ್ಷೇಪಗಳ ಪರಿಣಾಮಗಳ ಮೌಲ್ಯಮಾಪನ ಕೈಗೊಳ್ಳಲು ಅಗತ್ಯ ಸೇವೆಗಾಗಿ ದಿನಾಂಕ: 21.11.2025ರಂದು Request for Proposal (RFP)ನ್ನು ಕೆಪಿಪಿ ಪೋರ್ಟಲ್‌ನ ಮೂಲಕ ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು/ಬಿಡ್ಡುದಾರರು https://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್/ಪ್ರಸ್ತಾವನೆಯನ್ನು ದಿನಾಂಕ: 09.12.2025ರ ಸಂಜೆ 5.00ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No: KSRLPS/2025-26/SE0037 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3965/ಆಕಾರ್/2025–26

ಕರ್ನಾಟಕ ಸರಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ
ಟೆಂಡರ್ ಪ್ರಕಟಣೆ – 15

(ಇ–ಪ್ರಕ್ಯೂರ್ಮೆಂಟ್ ಪದ್ದತಿಯಲ್ಲಿ e-procurment portal ಅಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಜಿಲ್ಲಾ ಪಂಚಾಯತ್ ಅನುದಾನದ ಲೆಕ್ಕ ಶೀರ್ಷಿಕೆಯಡಿ ಇ–ಪ್ರಕ್ಯೂರ್ಮೆಂಟ್ ಪದ್ಧತಿಯಲ್ಲಿ (Standard Tender Documents for Procurment of Goods)ನ ನಿಬಂಧನೆಗೊಳಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಸರಬರಾಜುದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.kppp.karnataka.gov.in ಆನ್ ಲೈನ್ ಮುಖಾಂತರ ಸ್ವೀಕರಿಸಲಾಗುವುದು

ಕ್ರ.ಸಂ. 1. ಕಾಮಗಾರಿ ಹೆಸರು: Tender for Supply, Installation, Maintenance and Commissioning of 200 kW Solar Grid tie System in District Office Complex, Rajathadri, Manipal, Udupi District. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 70.00. Tender Should quote separatly for each Items in website Portal.

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 21–11–2025 ರಿಂದ 29–11–2025ರ ಅಪರಾಹ್ನ 5.30ಗಂಟೆಯವರೆಗೆ. 2. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ: 01–12–2025 ಪೂರ್ವಾಹ್ನ 10.30 ಗಂಟೆಯ ನಂತರ. ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ.

ಸಮಗ್ರ ಶಿಕ್ಷಣ–ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–01.

ಸಂಖ್ಯೆ: SSK/QMT/GKA/2/2025-JDQ/74637 ದಿನಾಂಕ: 21.11.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಸಮಗ್ರ ಶಿಕ್ಷಣ–ಕರ್ನಾಟಕ ವತಿಯಿಂದ **ಗಣಿತ ಕಲಿಕಾ ಆಂದೋಲನ–2.0 ಗಣಿತ ಕಿಟ್** ಅನ್ನು ತಯಾರಿಸಿ **ಬೆಂಗಳೂರು ವಿಭಾಗದ 11 ಜಿಲ್ಲೆಗಳ** ಆಯ್ದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದೆ. ಟೆಂಡರ್ (No. SSK/2025-26/IND0202) ವಿವರಗಳು **https://kppp.karnataka.gov.in**ನಲ್ಲಿ ಲಭ್ಯವಿದ್ದು, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಹಾಗೂ ಸಮಯ: 05.12.2025, ಸಂಜೆ 5.00 ಗಂಟೆಯಾಗಿರುತ್ತದೆ.**

ಸಹಿ/– ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ.

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ,
ಬೆಂಗಳೂರು–560022 ದೂರವಾಣಿ: 23472850/23371695
ಇಮೇಲ್:apmcbangalore22@gmail.com

ಸಂಖ್ಯೆ: ಕೃಉಮಾಸ(ಬೆಂ)/ಅಭಿವೃದ್ಧಿ/3637/2025–26 ದಿನಾಂಕ: 21–11–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, 2024–25ನೇ ಸಾಲಿಗೆ ವಾರ್ಷಿಕ ಕ್ರಿಯಾಯೋಜನೆಯಡಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಷರತ್ತು–ವಾ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯತಕ್ಕದ್ದು,

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ Replacing deteriorated/damaged/burnt out streetlights, U.G. cable, streetlight control boxes, high mast lights, LT U.G. loop cable, additional streetlight poles, LT meter bank panels etc and also providing CCTV for all the Gates and important places in the yard at main market yard of Yeshwantpur APMC ಕಾಮಗಾರಿ	69,02,312.00 (ಜಿ.ಎಸ್.ಟಿ ಹೊರತುಪಡಿಸಿ)	1,38,100.00
INDENT NO: APMC/2025-26/BD/WORK_INDENT639			
ಅರ್ಹತೆ: KW-03 ರಂತೆ			

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05–12–2025ರ ಸಂಜೆ:5.30 ಗಂಟೆವರೆಗೆ

ಸಹಿ/–
ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ಡಿಐಪಿಆರ್/ಸಿಪಿ/3962/ಸಿಸಿಎಲ್/2025–26

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
[ICAR, NAAC accredited and UGC u/s 12(B) & 2(f) approved]
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ:spo@uasraichur.edu.in ದೂರವಾಣಿ ಸಂಖ್ಯೆ: 08532 220165

ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-10/2025-26, Dt:21.11.2025

ಟೆಂಡರ ಪ್ರಕಟಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ e-tender notification for the STRENGTHENING OF CENTRE OF EXCELLENCE ON PLANT GENOMICS TOWARDS DEVELOPING CLIMATE RESILIENCE CROPS & TRAINING THE YOUTH IN MOLECULAR TECHNIQUES COMPLETE ON TURNKEY BASIS INCLUDING PROCURMENT OF SCIENTIFIC EQUIPMENTS, FURNITURES & CONSTRUCTION OF FIRST FLOOR AT UAS RAICHUR ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.kppp.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UASRCR/2025-26/IND0068) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವಕಡೆ ದಿನಾಂಕ: 22.12.2025ಆಗಿರುತ್ತದೆ

ಸಹಿ/– ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.

DIP/RCR/557/KSMCA/559/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–64/2595/2025–26 ದಿನಾಂಕ: 21.11.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಸಿಇಐ (ವಿದ್ಯುತ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು : ದಕ್ಷಿಣ ಕನ್ನಡ ಜಿಲ್ಲೆ, ಬೈಕಂಪಾಡಿ ಕೈಗಾರಿಕಾ ಪ್ರದೇಶದ ಪ್ರಮುಖ ವೃತ್ತಗಳಿಗೆ ಹೈಮಾಸ್ಟ್ ಒದಗಿಸುವ ಕಾಮಗಾರಿ. (CAT-I), (2ನೇ ಕರೆ).

.ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03.12.2025 ಸಂಜೆ 4.00 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/3978/Zen/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಭಾಗ ವಿಜಯಪುರ

No.EE/MID/VJP/AE-1,2,4/4702/TND/2025-26/3027 Date: 20.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :– ಒಟ್ಟು 15 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.700.21ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳಿಂದ ಆರು(6) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**21.11.2025** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ:**29.11.2025** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ:**26.11.2025** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:**28.11.2025** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ (ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ

ವಾಸಾಸಂಇ/ವಿಜಯಪುರ/482/ಕೆಎಸ್‌ಎಂಸಿಎ/2025–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಮನಸ್ಸಿನಿಂದ ಕೀಳರಿಮೆ ಮತ್ತು ಭಯವನ್ನು ಕಿತ್ತೊಗೆದರೆ, ನೀವು ಅದ್ಭುತವಾದುದನ್ನು ಸಾಧಿಸಲು ಸಮರ್ಥರಾಗುತ್ತೀರಿ.
–ಮದರ್ ತೆರೆಸಾ

ಸಂಪಾದಕೀಯ

ಮಸೂದೆಗಳ ಅಂಕಿತಕ್ಕಿಲ್ಲ ಕಾಲಮಿತಿ ರಾಜ್ಯಪಾಲರ ಅಧಿಕಾರಕ್ಕಿಲ್ಲ ಪರಿಮಿತಿ

ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ನ್ಯಾಯಾಲಯ ಗಡುವು ನಿಗದಿ ಮಾಡಬಹುದೇ ಎಂದು ಪ್ರಶ್ನಿಸಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸುಪ್ರೀಂ ಕೋರ್ಟ್ ನೀಡಿರುವ ಸ್ಪಷ್ಟನೆ ಹಾಗೂ ತೀರ್ಪು ಭವಿಷ್ಯತ್ತಿ ಮುಂದುವರಿಕೆಯ ಪ್ರಕ್ರಿಯೆಯಾಗಿದೆ. ಇದು ಆದರ್ಶ ರಾಜಕಾರಣದ ಸಂದರ್ಭದಲ್ಲಿ ಮಾದರಿ ಸಾಂವಿಧಾನಿಕ ಸ್ಥಿತಿಯ ಘೋಷಣೆಯಂತಿದೆ. ವಾಸ್ತವಿಕ ಜಗತ್ತಿನಲ್ಲಿ ರಾಜಕಾರಣಿಗಳಂತೆ ವರ್ತಿಸುವ ಕೆಲವು ರಾಜ್ಯಪಾಲರಿಂದ ಉದ್ಭವವಾಗುವ ಸಮಸ್ಯೆಗಳಿಗೆ ಕೋರ್ಟ್‌ನ ತೀರ್ಪು ಯಾವುದೇ ಪರಿಹಾರ ನೀಡಿಲ್ಲ. ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಮಸೂದೆಗಳಿಗೆ ಒಪ್ಪಿಗೆ ನೀಡಲು ರಾಜ್ಯಪಾಲರು ನಿರಾಕರಿಸುತ್ತಿರುವುದು ಪರಿಹರಿಸಬೇಕಾದ ಸಮಸ್ಯೆಯಾಗಿತ್ತು. ಕೆಲವು ರಾಜ್ಯಪಾಲರ ನಿಷ್ಕ್ರಿಯ ನಡವಳಿಕೆಯು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದಾಗಿತ್ತು. ಮಸೂದೆಗಳಿಗೆ ಒಪ್ಪಿಗೆ ನೀಡುವುದು, ರಾಷ್ಟ್ರಪತಿಗೆ ಕಳುಹಿಸುವುದು ಇಲ್ಲವೇ ತಮ್ಮ ಅಭಿಪ್ರಾಯದೊಂದಿಗೆ ಆದಷ್ಟು ಬೇಗನೆ ಹಿಂದಿರುಗಿಸುವುದು ರಾಜ್ಯಪಾಲರ ಸಾಂವಿಧಾನಿಕ ಕರ್ತವ್ಯವಾಗಿದೆ. ಇದಾವುದನ್ನೂ ಮಾಡದೆ, ಕೆಲವು ರಾಜ್ಯಪಾಲರು ಮಸೂದೆಗಳನ್ನು ಎರಡು ವರ್ಷಗಳಿಗೂ ಮೀರಿದ ದೀರ್ಘ ಕಾಲ ತಮ್ಮ ಬಳಿ ಇರಿಸಿಕೊಂಡಿರುವ ಹಾಗೂ ರಾಷ್ಟ್ರಪತಿಗೆ ಕಳುಹಿಸಿದ ಸಂದರ್ಭದಲ್ಲಿ ಪ್ರಕರಣಗಳು ಸುಪ್ರೀಂ ಕೋರ್ಟ್‌ಗೆ ಬಂದಿದ್ದವು. ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ನೇತೃತ್ವದ ಪೀಠ, ಮಸೂದೆಗಳಿಗೆ ಸಂಬಂಧಿಸಿದಂತೆ ನಿರ್ಣಯವನ್ನು ತ್ರೈಮಾಸಿಕ ಕಾಲಮಿತಿಯನ್ನು ಗೊತ್ತುಪಡಿಸುವ ನಿರ್ಣಯವನ್ನು ಕಳೆದ ಏಪ್ರಿಲ್‌ನಲ್ಲಿ ನೀಡಿತ್ತು. ಇದೀಗ, ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು, ಸಾಂವಿಧಾನಿಕ ಸ್ಥಾನಮಾನ ಹೊಂದಿರುವ ರಾಷ್ಟ್ರಪತಿ ಅಥವಾ ರಾಜ್ಯಪಾಲರಿಗೆ, ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಯಾವುದೇ ಕಾಲಮಿತಿ ಹಾಕುವ ಅಧಿಕಾರವಿಲ್ಲ ಎನ್ನುವ ತೀರ್ಪು ನೀಡಿದೆ.



ವಿಧಾನಸಭೆಗಳ ಮಸೂದೆಗಳಿಗೆ ಒಪ್ಪಿಗೆ ನೀಡಲು ರಾಜ್ಯಪಾಲರಿಗೆ ಕಾಲಮಿತಿ ಗೊತ್ತುಪಡಿಸಲು ಸಾಧ್ಯವಿಲ್ಲ ಎನ್ನುವ ಸುಪ್ರೀಂ ಕೋರ್ಟ್ ತೀರ್ಪು, ಆದರ್ಶ ರಾಜಕಾರಣಕ್ಕಷ್ಟೇ ಸೂಕ್ತ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯನಿರ್ವಹಣೆಯಲ್ಲಿ ಸಮನ್ವಯ ಅಪೇಕ್ಷಿಸುವ ಸಂವಿಧಾನ, ಸಾಂವಿಧಾನಿಕ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕೋರ್ಟ್‌ಗಳು ಕಾಲಮಿತಿಯನ್ನು ಗೊತ್ತುಪಡಿಸುವುದಕ್ಕೆ ಅನುಮತಿಸುವುದಿಲ್ಲ ಎಂದೂ ನ್ಯಾಯಪೀಠ ಹೇಳಿದೆ. ಮಸೂದೆಗಳಿಗೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳಲು ರಾಜ್ಯಪಾಲರಿಗೆ ಅನಿಯಂತ್ರಿತ ಅಧಿಕಾರ ಇಲ್ಲ ಎನ್ನುವುದನ್ನೂ ಸ್ಪಷ್ಟಪಡಿಸಿರುವ ಕೋರ್ಟ್, ತೀರ್ಮಾನ ವಿಳಂಬವಾದಲ್ಲಿ ರಾಜ್ಯಗಳು ನ್ಯಾಯಾಲಯದ ಪರಿಶೀಲನೆ ಬಯಸಬಹುದು ಎಂದೂ ಹೇಳಿದೆ. ಆದರೆ, ರಾಜ್ಯಪಾಲರ ವಿಳಂಬನೀತಿಯ ಕಾಲಾವಧಿ ಎಷ್ಟು ಎನ್ನುವುದನ್ನು ಕೋರ್ಟ್ ಸ್ಪಷ್ಟಪಡಿಸಿಲ್ಲ. ರಾಜ್ಯಪಾಲರ ವಿಳಂಬನೀತಿಯ ಸಂದರ್ಭದಲ್ಲಿ ಮಸೂದೆಗಳಿಗೆ ಅಂಕಿತ ದೊರೆತಿದೆ ಎಂದು ಪರಿಭಾವಿಸುವುದನ್ನು ಕೋರ್ಟ್ ನಿರಾಕರಿಸಿದೆ. ವಿಳಂಬಗೊಂಡ ಮಸೂದೆಗಳಿಗೆ 'ಸ್ವಯಂ ಒಪ್ಪಿಗೆ' ಎಂಬ ಪರಿಕಲ್ಪನೆ ಸಾಂವಿಧಾನಿಕವಾಗಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ರಾಜ್ಯಪಾಲರ ಅಸಹಕಾರದ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ದೀರ್ಘಕಾಲದ ಕಾನೂನು ಹೋರಾಟ ನಡೆಸಬೇಕಾದುದನ್ನು ಪ್ರಸಕ್ತ ತೀರ್ಪು ಅನಿವಾರ್ಯಗೊಳಿಸಿದೆ. ಈ ತೀರ್ಪು ಮಸೂದೆಗಳ ಅಂಗೀಕಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳ ವಿರುದ್ಧ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ಅಧಿಕಾರವನ್ನು ಬಲಪಡಿಸಿದೆ; ಒಕ್ಕೂಟ ತತ್ತ್ವ ಹಾಗೂ ಜನಾಭಿಪ್ರಾಯದ ಪರಮಾಧಿಕಾರಕ್ಕೂ ಹಿನ್ನಡೆ ಉಂಟುಮಾಡುವಂತಿದೆ. ಪ್ರಜಾಪ್ರಭುತ್ವದ ಸಂಪ್ರದಾಯಗಳನ್ನು ರಾಜ್ಯಪಾಲರು ಗೌರವಿಸಲೇಬೇಕು ಎನ್ನುವುದನ್ನು ಸುಪ್ರೀಂ ಕೋರ್ಟ್‌ನ ಹಿಂದಿನ ತೀರ್ಪು ಸ್ಪಷ್ಟವಾಗಿ ಹೇಳಿತ್ತು. ಆದರೆ, ಈಗಿನ ತೀರ್ಪು ಸಂವಿಧಾನದ ಆಶಯಗಳು ಹಾಗೂ ಪ್ರಜಾಪ್ರಭುತ್ವದ ಉತ್ತಮ ಸಂಪ್ರದಾಯಗಳಿಗೆ ಧಕ್ಕೆ ತರುವಂತಿದೆ.

ಸಂವಿಧಾನವೇ ಜೀವನವಿಧಾನ

ಪಡಸಾಲೆ
ರಘುನಾಥ ಚ.ಹ.

ಮೈಸೂರಿನಲ್ಲಿ ನಡೆದ (ನ. 3) 2018–2019ರ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮಾತುಗಳ ಕೊನೆಗೆ, 'ಜೈಹಿಂದ್', 'ಜೈ ಕರ್ನಾಟಕ' ಎನ್ನುವ ಘೋಷಣೆ ಗಳನ್ನು ಉಚ್ಚರಿಸಿ, ಒಂದೆರಡು ಕ್ಷಣಗಳ ಮೌನದ ನಂತರ 'ಜೈ ಸಂವಿಧಾನ್' ಎನ್ನುವ ಘೋಷವಾಕ್ಯಕ್ಕೆ ವಿಶೇಷ ಒತ್ತು ನೀಡಿ ಉದ್ಗರಿಸಿದರು. ತಕ್ಷಣವೇ ಮುಂದಿನ ಸಾಲಿನಲ್ಲಿ ಕುಳಿತಿದ್ದ ಯುವನಟಿಯೊಬ್ಬರು ತಮ್ಮ ಪಕ್ಕದಲ್ಲಿದ್ದವರನ್ನು ಅಚ್ಚರಿಯಿಂದ ಕೇಳಿದರು: 'ಸಿಎಂ ಕೊನೆಯದಾಗಿ ಹೇಳಿದ್ದು ಏನು?'

'ಜೈ ಸಂವಿಧಾನ್' ಎನ್ನುವ ಘೋಷಣೆ ನಟಿಯೊಬ್ಬರನ್ನು ಗೊಂದಲಗೊಳಿಸಿದ್ದು ಎರಡು ಸಂಗತಿಗಳನ್ನು ಸೂಚಿಸುವಂತಿತ್ತು. ಒಂದು, ಸಂವಿಧಾನದ ಬಗ್ಗೆ ಯುವಜನರಿಗೆ ಇರಬಹುದಾದ ಅರಿವಿನ ಕೊರತೆ. ಎರಡನೆಯದು, ಆ ಅರಿವನ್ನು ಮೂಡಿಸಲೇಬೇಕಾದ ಸದ್ಯದ ಅನಿವಾರ್ಯತೆ.

ಭಾರತದ ಸಂವಿಧಾನ ಸಭೆಯು 1950ರ ನವೆಂಬರ್ 26ರಂದು ಭಾರತೀಯ ಸಂವಿಧಾನವನ್ನು ಅಂಗೀಕರಿಸಿದ ಚಾರಿತ್ರಿಕ ಘಟನೆಗೆ ಎಪ್ಪತ್ತೈದು ವರ್ಷಗಳು ತುಂಬಿದರೂ, ಸಂವಿಧಾನದ ಬಗ್ಗೆ ಸಾರ್ವಜನಿಕಪ್ರಜ್ಞೆ ನಿರೀಕ್ಷಿತ ಮಟ್ಟದಲ್ಲಿಲ್ಲ ಎನ್ನುವುದು ನಿಜಕ್ಕೂ ಕಳವಳ ಹುಟ್ಟಿಸುವಂತಹದ್ದು. 'ಸಂವಿಧಾನ ದಿನ'ದ ಆಸುಪಾಸಿನಲ್ಲಿ ನಾಡಿನಲ್ಲಿ ನಡೆದ ಕೆಲವು ಸಂಗತಿಗಳನ್ನು ಗಮನಿಸಿದರೆ, ನಮ್ಮ ಸಂವಿಧಾನಪ್ರಜ್ಞೆ ಅಳ್ಳಕವಾಗಿರುವುದು ಅರಿವಿಗೆ ಬರುತ್ತದೆ.

'ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ' ಎನ್ನುವ ವಿಚಾರಸಂಕಿರಣದ 'ಆತಿಥ್ಯ'ವನ್ನು ಶಿವಮೊಗ್ಗದ ಕುವೆಂಪು ವಿ.ವಿ. ವಹಿಸಿಕೊಂಡಿದ್ದು ಚರ್ಚೆಗೆ ಕಾರಣವಾಯಿತು. ಈ ಕಾರ್ಯಕ್ರಮದ ನೆಪದಲ್ಲಿ ವಿಶ್ವವಿದ್ಯಾಲಯ ಮತೀಯವಾದಕ್ಕೆ ಇಂಬು ನೀಡುತ್ತಿದೆ ಎಂದು ಕೆಲವರು ಆತಂಕಪಟ್ಟರೆ, ಎಲ್ಲ ವಿಚಾರಗಳ ಮುಕ್ತ ಚರ್ಚೆಗೆ ವಿಶ್ವವಿದ್ಯಾಲಯಗಳು ತೆರೆದುಕೊಳ್ಳಬೇಕು ಎನ್ನುವ ಅರ್ಥದಲ್ಲಿ ವಿ.ವಿ. ಕುಲಪತಿ ಶರತ್ ಅನಂತಮೂರ್ತಿ ಮಾತನಾಡಿದ್ದರು. ಈ ಪರ–ವಿರೋಧದ ವಾದಗಳನ್ನು ಹೊರತುಪಡಿಸಿ ಶೀರ್ಷಿಕೆಯನ್ನು ಗಮನಿಸಿದರೆ, ಅದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿ ಕಾಣಿಸುವಂತಿದೆ. ಭಗವದ್ಗೀತೆ ಅಥವಾ ಬೇರೊಂದು ಧರ್ಮಗ್ರಂಥದಿಂದ ಅಪರಾಧ ನಿಯಂತ್ರಣ ಆಗುತ್ತದೋ ಇಲ್ಲವೋ ಎನ್ನುವುದು ಸಾರ್ವಜನಿಕ ಚರ್ಚೆಯ ವಿಷಯವೇ ಆಗಬಾರದು. ಏಕೆಂದರೆ, ಅಪರಾಧಕ್ಕೆ ಕಡಿವಾಣ ಹಾಕುವುದು ಕಾನೂನಿನ ಕೆಲಸ. ಸಾಮಾಜಿಕ ಸ್ವಾಸ್ಥ್ಯ–ಸುರಕ್ಷತೆಗೆ ಸಂಬಂಧಿಸಿದಂತೆ ಸಾಂವಿಧಾನಿಕ ಕಾನೂನುಗಳಿಗೆ ಇರುವ ಸಾರ್ವತ್ರಿಕತೆ ಧರ್ಮಗ್ರಂಥಗಳಿಗೆ ಇಲ್ಲ. ಹಾಗಾಗಿ, ಭಗವದ್ಗೀತೆಯ ಮೂಲಕ ಅಪರಾಧ ನಿಯಂತ್ರಣದ ಸಾಧ್ಯತೆಗಳ ಕುರಿತು ಸಾರ್ವಜನಿಕ ಚರ್ಚೆ ನಡೆಸುವುದನ್ನು ಸಂವಿಧಾನವನ್ನು ಗೌಣಗೊಳಿಸುವ ಪ್ರಯತ್ನವೆಂದೇ ಭಾವಿಸಬೇಕಾಗುತ್ತದೆ. ಸಮುದಾಯಗಳ ಚೌಕಟ್ಟಿನಿಂದ ಹೊರತಂದು ಸಾರ್ವತ್ರಿಕಗೊಳಿಸುವ ಪ್ರಯತ್ನ ಧರ್ಮಗ್ರಂಥಗಳಿಗೆ ಗೌರವ ತರುವಂತಹದ್ದಲ್ಲ; ಅದು ಸಾಂವಿಧಾನಿಕ ನಡೆಯೂ ಅಲ್ಲ. ಸಂವಿಧಾನದ ಆಶಯಗಳನ್ನು ಗೌಣಗೊಳಿಸುವ ಚಟುವಟಿಕೆಗಳಿಗೆ ವೇದಿಕೆ ಆಗುವುದನ್ನು ಅನುಮಾನದಿಂದ ನೋಡಬೇಕೇ ಹೊರತು, ಅಲ್ಲಿ ವೈಚಾರಿಕತೆಯ ಪ್ರಶ್ನೆ ಬರುವುದಿಲ್ಲ.

ಸಂವಿಧಾನಕ್ಕೆ ಪರ್ಯಾಯವಾಗಿ ಧಾರ್ಮಿಕ ಸಂಗತಿಗಳನ್ನು ಚಲಾವಣೆಗೆ ತರುವ ಪ್ರಯತ್ನ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎನ್ನುವುದಕ್ಕೆ ಇತ್ತೀಚಿನ ನಿದರ್ಶನಗಳು: ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನ ಹಾಗೂ ಮೋಹನ್ ಭಾಗವತ್‌ರ 'ಹಿಂದೂರಾಷ್ಟ್ರ'ದ ಪರಿಕಲ್ಪನೆ. ಸಾಮಾಜಿಕ ಶಾಂತಿಪಾಲನೆಗೆಂದೇ ಪೊಲೀಸ್ ವ್ಯವಸ್ಥೆಯಿರುವಾಗ, ಕಾನೂನುಬದ್ಧವಾಗಿ ನೋಂದಣಿಯೂ ಆಗದ ಸಂಸ್ಥೆಯೊಂದಕ್ಕೆ ಸೇರಿದವರು ಎನ್ನಲಾದ ಕೆಲವರು ಸಾರ್ವಜನಿಕವಾಗಿ ದೊಣ್ಣೆಗಳನ್ನು ಝಳಾಯಿಸುತ್ತಾ ನಡೆಯುವುದು ಏನನ್ನು ಸೂಚಿಸುತ್ತದೆ? ಸುರಕ್ಷತೆಗೆ ಪರ್ಯಾಯ ಎನ್ನುವ ಚಿತ್ರಣ ನೀಡುವ, ಕಾನೂನುಬದ್ಧವಲ್ಲದ, ಯಾವುದೇ ವ್ಯವಸ್ಥೆ ಸಂವಿಧಾನಬಾಹಿರ. ಈ ಅರಿವು

> ಸಂವಿಧಾನವನ್ನು ಅಪ್ರಸ್ತುತಗೊಳಿಸುವ ಪ್ರಯತ್ನಗಳು ವ್ಯಾಪಕ ಆಗಿರುವಾಗ, ಸಂವಿಧಾನಪ್ರಜ್ಞೆ ಮುನ್ನೆಲೆಗೆ ಬರಬೇಕಾಗಿದೆ. 'ಜೈ ಸಂವಿಧಾನ್' ಎಲ್ಲರ ಕೊರಳಿನ ದನಿಯೂ, ಬದುಕಿನ ಬನಿಯೂ ಆಗಬೇಕಿದೆ. ಸಂವಿಧಾನದ ವಿವೇಕವಿಲ್ಲದ ರಾಜಕೀಯಪ್ರಜ್ಞೆ ಅಪಾಯಕಾರಿ.

ಮುನ್ನೆಲೆಗೆ ಬಂದಾಗ, ಪಥಸಂಚಲನ ವಿವಾದವೋ ಪ್ರತಿಷ್ಠೆಯೋ ಹಟವೋ ಆಗುವುದಿಲ್ಲ. ಸಾರ್ವಜನಿಕ ಪ್ರದರ್ಶನವೊಂದು ಸಮೂಹದಲ್ಲಿ ಸಂಭ್ರಮ ಮೂಡಿಸಬೇಕಷ್ಟೆ. ಪಥಸಂಚಲನದ ವೈಖರಿ ಕೆಲವರಿಗೆ ಅಸುರಕ್ಷತೆಯ ಭಾವನೆ ಮೂಡಿಸುತ್ತದೆ ಎನ್ನುವುದಾದಲ್ಲಿ, ಆ ನಡವಳಿಕೆಯನ್ನು ಪರಿಶೀಲಿಸಿಕೊಳ್ಳುವ ವಿನಯ ಅಗತ್ಯ. ಯಾವ ಧರ್ಮವೇ ಆಗಿರಲಿ, ಭಕ್ತಿ ಅಥವಾ ಶಕ್ತಿ ಸಾರ್ವಜನಿಕ ಪ್ರದರ್ಶನದ ವಿಷಯವಾದಾಗ, ಸಮಸ್ಯೆಗಳು ಶುರುವಾಗುತ್ತವೆ. ಧಾರ್ಮಿಕ ವಿಚಾರಗಳನ್ನು ಬೀದಿಗೆ ತರುವುದರಿಂದ ಆಗುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಸಂವಿಧಾನದಲ್ಲಿ ನಂಬಿಕೆಯುಳ್ಳವರು ಮಾಡಬೇಕಾದ ಕೆಲಸ. ಇದರ ಬದಲಾಗಿ, ಧಾರ್ಮಿಕ ವಿಷಯಗಳನ್ನು ಜಿದ್ದಾಗಿ ಪರಿವರ್ತಿಸಲು ಪ್ರಯತ್ನಿಸುವುದು ಸಂವಿಧಾನವನ್ನು ಬಲಪಡಿಸುವ ನಡೆಯಲ್ಲ.

'ಭಾರತವು ಹಿಂದೂ ರಾಷ್ಟ್ರವಾಗಿದ್ದು, ಈ ರಾಷ್ಟ್ರದ ಹೊಣೆ ಹಿಂದೂಗಳ ಮೇಲಿದೆ' ಎನ್ನುವುದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ನೀಡಿದ ಉಪನ್ಯಾಸದಲ್ಲಿನ ('ಸಂಘದ 100 ವರ್ಷದ ಪಯಣ: ನವ ಕ್ಷಿತಿಜ') ಬೀಜವಾಕ್ಯಗಳಲ್ಲೊಂದು. ಭಾಗವತ್‌ರ ಈ ಅಭಿಪ್ರಾಯ, ಆರ್‌ಎಸ್‌ಎಸ್ ಹಾಗೂ ಅದರ ಒಡಹುಟ್ಟುಗಳು ಮತ್ತೆ ಮತ್ತೆ ಚಲಾವಣೆಗೆ ತರುತ್ತಿರುವ 'ಭಾರತ ಹಿಂದೂರಾಷ್ಟ್ರ' ಎನ್ನುವ ಪರಿಕಲ್ಪನೆಯೇ ಆಗಿದೆ ಹಾಗೂ ಅದು ಸಂವಿಧಾನದ ಅರಿವಿನ ಕೊರತೆಯಿಂದ ಅಥವಾ ಸಂವಿಧಾನದ ಕುರಿತ ಅವಜ್ಞೆಯಿಂದ ರೂಪುಗೊಂಡಿರುವಂತಹದ್ದಾಗಿದೆ. ಭಾರತವನ್ನು ಗುರ್ತಿಸಬೇಕಿರುವುದು ಸಂವಿಧಾನ ಗುರ್ತಿಸಿರುವ ಬಹುತ್ವದ ಚಹರೆಗಳ ಮೇಲೆಯೇ ಹೊರತು, ಧಾರ್ಮಿಕ ನೆಲೆಗಟ್ಟಿನಲ್ಲಲ್ಲ. 'ಹಿಂದೂರಾಷ್ಟ್ರ' ಎಂದು ಗುರ್ತಿಸುವುದು ಈ ದೇಶದ ಉಳಿದ ಧರ್ಮಗಳನ್ನು ನಿರ್ಲಕ್ಷ್ಯದಿಂದ ನೋಡುವ ಕ್ರಮವಷ್ಟೇ ಆಗಿರದೆ, ಸಂವಿಧಾನದ ಬಗೆಗಿನ ನಿರ್ಲಕ್ಷ್ಯವೂ ಆಗಿದೆ.

ನೂರು ವರ್ಷಗಳು ತುಂಬಿದ ಸಂಸ್ಥೆಯೇ ಈಗಲೂ ಸ್ವಾತಂತ್ರ್ಯೋತ್ತರ ಮನಃಸ್ಥಿತಿಯಲ್ಲಿಯೇ ಉಳಿದಿರುವಾಗ, ಜನಸಾಮಾನ್ಯರಿಗೆ ಸಂವಿಧಾನ ಪ್ರಜ್ಞೆಯ ಕೊರತೆ ಇದ್ದರೆ ಅಚ್ಚರಿಯೇನಿಲ್ಲ. ಹಾಗೆ ನೋಡಿದರೆ, ದೇಶದ ಜನಸಾಮಾನ್ಯರು ಅಪ್ರಜ್ಞಾಪೂರ್ವಕವಾಗಿ ಸಂವಿಧಾನದ ಆಶಯಗಳನ್ನು ತಮ್ಮ ಬಾಳ್ವೆಯ ಬೆಳಕಾಗಿಸಿಕೊಂಡಿದ್ದಾರೆ. ಜನಪದರ ಬದುಕಿನಲ್ಲಿಯೇ ಸಂವಿಧಾನದ ಸಾಮರಸ್ಯದ ಬಿತ್ತಗಳಿವೆ. ಸಮಸ್ಯೆಯಿರುವುದು, ಕೆಲವರಿಗೆ ಕಲಿತಪಿತ್ತ ಗಂಟಲಿಗೂ ನೆತ್ತಿಗೂ ಏರಿರುವುದರಲ್ಲಿ.

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ಒಂದು ಗುಂಪು, ತಮ್ಮ ಪ್ರಯತ್ನಗಳಿಗೆ ಪೂರಕವಾಗಿ ಸಂವಿಧಾನ ಹಾಗೂ ಅದರ ಜೀವರೂಪವಾದ ಅಂಬೇಡ್ಕರ್ ಅವರನ್ನೇ ಬಳಸಿಕೊಳ್ಳುವ ನಿರ್ಲಜ್ಜಜಾಣತನ ಪ್ರದರ್ಶಿಸುತ್ತದೆ. ವಿಧಾನಸಭೆ ವಿಪಕ್ಷದ ನಾಯಕ ಆರ್. ಅಶೋಕ, 'ಸಂವಿಧಾನ ದಿನ'ದ ಸಂದರ್ಭದಲ್ಲಿ 'ಭೀಮನಡೆ' ಹೆಸರಿನ ಕಾರ್ಯಕ್ರಮ ಸಂಘಟಿಸಿ, ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿದ ದ್ರೋಹಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದಾಗಿ ಹೇಳಿದ್ದಾರೆ. ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅನ್ಯಾಯ ಮಾಡಿತು ಎಂದು ಆರೋಪಿಸುವ ಅಶೋಕರಂಥವರು ಗಮನಿಸಬೇಕಾದ ಸೂಕ್ಷ್ಮವೊಂದಿದೆ. ಬಾಬಾಸಾಹೇಬರು ನೆಹರೂ ನೇತೃತ್ವದ ಸರ್ಕಾರದ ಭಾಗವಾಗಿದ್ದಾಗಲೂ, ಸರ್ಕಾರದ ವಿರೋಧಿಯಾಗಿದ್ದಾಗಲೂ, ಅವರೆಂದೂ ಕಾಂಗ್ರೆಸ್ಸಿಗರಾಗಿರಲಿಲ್ಲ. ಕಾಂಗ್ರೆಸ್, ನೆಹರೂ ಹಾಗೂ ಗಾಂಧೀಜಿ ಅವರನ್ನು ಅಂಬೇಡ್ಕರ್ ಅವರಂತೆ ವಿಮರ್ಶೆಯ ನಿಕಷಕ್ಕೆ ಒಳಪಡಿಸಿದವರು ಮತ್ತೊಬ್ಬರಿಲ್ಲ. ಈ ವಿರೋಧವನ್ನು ನೆನಪಿನಲ್ಲಿ ಇರಿಸಿಕೊಂಡರೆ, ಬಾಬಾಸಾಹೇಬರಿಗೆ ಕಾಂಗ್ರೆಸ್‌ನಿಂದ ನ್ಯಾಯ ದೊರಕಲಿಲ್ಲ ಎನ್ನುವ ರಾಜಕೀಯ ವಿದ್ಯಮಾನವನ್ನು ಅರ್ಥ ಮಾಡಿಕೊಳ್ಳುವ ದಾರಿ ಕಾಣಿಸುತ್ತದೆ. ರಾಜಕೀಯ ವಿರೋಧಿಯಾಗಿದ್ದಾಗಲೂ ಅಂಬೇಡ್ಕರ್ ಅವರ ವಿದ್ವತ್ತನ್ನು ಕಾಂಗ್ರೆಸ್ ಗೌರವದಿಂದಲೇ ಕಂಡಿತ್ತು ಎನ್ನುವುದಕ್ಕೆ ಅಂಬೇಡ್ಕರ್ ಅವರನ್ನು ಸಂವಿಧಾನದ ಶಿಲ್ಪಿಯ ರೂಪದಲ್ಲಿ ಇತಿಹಾಸ ಗುರ್ತಿಸುತ್ತಿರುವುದೇ ನಿದರ್ಶನವಾಗಿದೆ. ಚರಿತ್ರೆಯ ಈ ಸಹಜ ವಿರೋಧಾಭಾಸಗಳನ್ನು ಬಿಜೆಪಿ ತನ್ನ ರಾಜಕೀಯ ಲಾಭಗಳಿಗಾಗಿ ತಪ್ಪಾಗಿ ಚಿತ್ರಿಸುತ್ತಿದೆ. ಬಿಜೆಪಿಯ ರಾಜಕೀಯಶಕ್ತಿಯೇ ಆದ ಸಂಘ ಪರಿವಾರದ ಹಿಂದೂರಾಷ್ಟ್ರದ ಪರಿಕಲ್ಪನೆಯೇ ಅಂಬೇಡ್ಕರ್‌ಪ್ರಣೀತ ಭಾರತಕ್ಕೆ ವಿರುದ್ಧವಾದುದು. 'ನನಗೆ ದೇಶವಿಲ್ಲ, ನನಗೆ ಮಾತೃಭೂಮಿಯಿಲ್ಲ' ಎಂದು ಅಂಬೇಡ್ಕರ್ ನೋವಿನಿಂದ ಹೇಳಿರುವುದಿದೆ. ಆ ಮಾತನ್ನು ಈಗ ಬಿಜೆಪಿ ನಿಜಗೊಳಿಸುತ್ತಿದೆ. ಸಮಾಜದ ನೆಮ್ಮದಿಯ ಬದುಕಿಗೆ ಅತ್ಯವಶ್ಯವಾದ ನೀರಿನ ದೋಣಿಯ ರೂಪದಲ್ಲಿ ಬಳಸಿಕೊಳ್ಳುವ ಬದಲು, ಎದುರಾಳಿಗಳನ್ನು ಬಗ್ಗುಬಡಿಯಲು ಬೇಕಾದ ದೊಣ್ಣೆಯಂತೆ ಅಂಬೇಡ್ಕರ್ ಅವರನ್ನು ಸಂಘ ಪರಿವಾರ ಬಳಸಿಕೊಳ್ಳುತ್ತಿದೆ. ಅಂಬೇಡ್ಕರರಿಗೆ ಕಾಂಗ್ರೆಸ್ ದ್ರೋಹ ಎಸಗಿತೆಂದು ಹೇಳುತ್ತಲೇ, ಸಂವಿಧಾನದ ಆಶಯಗಳನ್ನು ಮುಕ್ಕಾಗಿಸುತ್ತ ಬಾಬಾಸಾಹೇಬರನ್ನು ತಾತ್ವಿಕವಾಗಿ ಅಪ್ರಸ್ತುತವಾಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಹೆಸರಿನಲ್ಲಿ ಸಾಂವಿಧಾನಿಕ ವಿರೋಧಿ ಮನಃಸ್ಥಿತಿಯನ್ನು ರೂಪಿಸುವ ಪ್ರಯತ್ನಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ, ಎಳೆಯರು ಹಾಗೂ ಯುವಜನರನ್ನು ಕೇಂದ್ರವನ್ನಾಗಿಸಿಕೊಂಡು ಸಂವಿಧಾನಪ್ರಜ್ಞೆ ರೂಪಿಸುವ ಪ್ರಯತ್ನ ತೀವ್ರಗೊಳ್ಳಬೇಕಾಗಿದೆ. ವರ್ತಮಾನದ ಬಹುತೇಕ ಬಿಕ್ಕಟ್ಟುಗಳಿಗೆ ಸಂವಿಧಾನ ನಮ್ಮ ಜೀವನವಿಧಾನ ಆಗದಿರುವುದೇ ಕಾರಣವಾಗಿದೆ. ಸಂವಿಧಾನದ ಪಠ್ಯ ಜೀವನಪಠ್ಯವೂ ಆಗುವುದು, ಧರ್ಮ ಮತ್ತು ವಿಚಾರದ ಹೆಸರಿನಲ್ಲಿ ಅಸಹನೆಯಿಂದ ವರ್ತಿಸುವುದು ನಿಲ್ಲುವುದಕ್ಕೆ ಔಷಧಿಯಾಗಿದೆ.

ಮೊಬೈಲ್‌ಫೋನ್ ಸಾಕ್ಷರತೆಯ ಸಂದರ್ಭದಲ್ಲಿ ಜನಸಾಮಾನ್ಯರ ರಾಜಕೀಯಪ್ರಜ್ಞೆ ಪ್ರಖರಗೊಂಡಂತೆ ಕಾಣಿಸುತ್ತದೆ. ಆದರೆ, ಸಂವಿಧಾನದ ವಿವೇಕ ಒಳಗೊಳ್ಳದ ರಾಜಕೀಯಪ್ರಜ್ಞೆ ಅಪಾಯಕರ. ರಾಜಕೀಯಪ್ರಜ್ಞೆ ರೂಪುಗೊಳ್ಳಬೇಕಾದುದು ವಾಟ್ಸ್‌ಆ್ಯಪ್ ಅಥವಾ ಬೇರಾವುದೋ ಸಾಮಾಜಿಕ ಜಾಲತಾಣದಲ್ಲಿ ಅಲ್ಲ; ಅದು ನಮ್ಮದಾಗಬೇಕಾದುದು ಸಂವಿಧಾನದೊಂದಿಗಿನ ಅನುಸಂಧಾನದ ಅನುದಿನದ ಅನುಭವಮಂಟಪದಲ್ಲಿ.

ವಾಚಕರ ವಾಣಿ

ವಿ.ವಿ. ಗುಣಮಟ್ಟ: ಹೆಸರು ಮಾನದಂಡವೆ?

ರಾಜ್ಯದ ವಿಶ್ವವಿದ್ಯಾಲಯಗಳಿಗೆ ಸಾಂಸ್ಕೃತಿಕ ನಾಯಕರ ಹೆಸರಿಡಲು ಸರ್ಕಾರ ಮುಂದಾಗಿದೆ. ಆದರೆ, ರಾಜ್ಯದ ಮೊಟ್ಟಮೊದಲ ವಿಶ್ವವಿದ್ಯಾಲಯವಾದ ಮೈಸೂರು ವಿ.ವಿ. ಸೇರಿದಂತೆ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಹಾಗೂ ಸಂಶೋಧನಾ ಗುಣಮಟ್ಟ ಕುಸಿದಿದೆ. ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರ ಕೊರತೆ ಎದ್ದು ಕಾಣುತ್ತಿದೆ. ಇದರಿಂದ ವಿದ್ಯಾರ್ಥಿಗಳ ಪ್ರವೇಶವೂ ಕುಸಿದಿದೆ. ಸಕಾಲದಲ್ಲಿ ಅನುದಾನ ಲಭಿಸದೆ ಅಭಿವೃದ್ಧಿ ಕುಂಠಿತಗೊಂಡಿದೆ. ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸುವುದು ಮತ್ತು ಹೊಸ ನೇಮಕಾತಿ ಕಡೆಗೆ ಸರ್ಕಾರ ಗಮನಹರಿಸಬೇಕಾಗಿದೆ. ವಿಶ್ವವಿದ್ಯಾಲಯಗಳ ಹೆಸರು ಬದಲಾಯಿಸಿದ ತಕ್ಷಣ ಅವುಗಳ ಗುಣಮಟ್ಟ ಬದಲಾಗುವುದಿಲ್ಲ.

ಲಕ್ಷ್ಮಿ ಕಿಶೋರ್ ಅರಸ್, ಮೈಸೂರು

ತುಮಕೂರಿಗೆ ಮೆಟ್ರೊ ರೈಲು ಅರ್ಥಹೀನ

'ತುಮಕೂರಿಗೆ ಮೆಟ್ರೊ ವಿಸ್ತರಣೆ; ಆಡಂಬರದ ಅತಾರ್ಕಿಕ ಯೋಜನೆ' ಕುರಿತ ಸಂಪಾದಕೀಯವು (ಪ್ರ.ವಾ., ನ. 21) ಜನರೆದುರಿಗೆ ಕಟು ವಾಸ್ತವವನ್ನು ತೆರೆದಿಟ್ಟಿದೆ. ಬೆಂಗಳೂರಿನಿಂದ ತುಮಕೂರಿಗೆ 'ಮೆಟ್ರೊ' ವಿಸ್ತರಿಸುವ ವಿಚಾರ ಪ್ರಾಯೋಗಿಕವಲ್ಲ. ಮೆಟ್ರೊ ಸಂಪರ್ಕ ಜಾಲ ಬೆಂಗಳೂರಿನೊಳಗೇ ವಿಸ್ತರಣೆ ಆಗಬೇಕಾದ ಅಗತ್ಯ ಇರುವಾಗ, ತುಮಕೂರಿಗೆ ವಿಸ್ತರಿಸುತ್ತೇವೆಂಬುದು ಅರ್ಥಹೀನ. ಬೆಂಗಳೂರು–ತುಮಕೂರು ನಡುವಿನ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆ ನಡೆಯುತ್ತಿದೆ. ಮತ್ತೊಂದೆಡೆ, ನಾಲ್ಕು ಪಥದ ಹಳಿ ನಿರ್ಮಾಣಕ್ಕೆ ರೈಲ್ವೆ ಇಲಾಖೆ ಮುಂದಾಗಿದೆ. ಹೀಗಿರುವಾಗ, ಮೆಟ್ರೊ ವಿಸ್ತರಣೆಗೆ ಅತ್ಯುತ್ಸಾಹ ತೋರುತ್ತಿರುವುದು ಜನರನ್ನು ದಿಕ್ಕುತಪ್ಪಿಸುವ ರಾಜಕೀಯ ಹುನ್ನಾರವಷ್ಟೇ.

ಆರ್.ಎಸ್. ಅಯ್ಯರ್, ತುಮಕೂರು

ಬಾಡಿಗೆ: ನಿಯಮಾವಳಿ ಪರಿಷ್ಕರಿಸಿ

ಬೆಂಗಳೂರಿನಲ್ಲಿ ಮಧ್ಯಮವರ್ಗದ ಜನರು ಜೀವನ ನಡೆಸುವುದು ದುಸ್ತರವಾಗಿದೆ. ಬಾಡಿಗೆ ಮನೆಯಲ್ಲಿ ವಾಸಿಸುವವರ ಪಾಡು ಹೇಳತೀರದು. ಪ್ರತಿ ಬಡಾವಣೆಯಲ್ಲೂ ಕೊಠಡಿ, ಮನೆಗಳ ಬಾಡಿಗೆ ದುಬಾರಿಯಾಗಿದೆ. ಪ್ರತಿವರ್ಷ ಬಾಡಿಗೆ ದರ ಏರಿಕೆಗೆ ಯಾವ ಮಾನದಂಡ ಅನುಸರಿಸಲಾಗುತ್ತದೆ ಎನ್ನುವುದೇ ತಿಳಿಯುವುದಿಲ್ಲ. ಕೆಲವು ಮನೆ ಮಾಲೀಕರು ಸೌಹಾರ್ದದಿಂದ ವರ್ತಿಸುತ್ತಿದ್ದಾರೆ. ಅಂತಹವರ ಸಂಖ್ಯೆ ವಿರಳ. ಕೆಲವು ಮನೆ ಮಾಲೀಕರ ಶೋಷಣೆಗೆ ಮಿತಿ ಎಂಬುದಿಲ್ಲ. ಈಗಾಗಲೇ, ಇರುವ ಬಾಡಿಗೆ ನಿಯಂತ್ರಣ ಕಾಯ್ದೆಯು ಹಲ್ಲುಕಿತ್ತ ಹಾವಿನಂತಿದ್ದು, ಹೆಚ್ಚಿನ ಉಪಯೋಗವೇನೂ ಆಗುತ್ತಿಲ್ಲ. ಈ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಬಾಡಿಗೆ ನಿಯಂತ್ರಣಕ್ಕೆ ಸರ್ಕಾರವು ಹೊಸ ನಿಯಮಾವಳಿ ರೂಪಿಸಬೇಕಿದೆ.

ಚಂದ್ರಕುಮಾರ್ ಡಿ., ಬೆಂಗಳೂರು

ಆಘಾತ ತಂದ ಸವಿಜೇನಿನ ಕಹಿಕಥನ

ಚಿಕ್ಕಮಗಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಕಟ್ಟಡದಲ್ಲಿದ್ದ ಜೇನುಗೂಡುಗಳ ತೆರವಿನೊಂದಿಗೆ ಲಕ್ಷಾಂತರ ಜೇನುನೊಣಗಳ ಮಾರಣಹೋಮ ನಡೆದಿರುವ ಸುದ್ದಿ ಓದಿ ಬೇಸರವಾಯಿತು. ಬೆಳೆ ಉತ್ಪಾದನೆಯು ಜೇನುಹುಳುಗಳ ಪರಾಗ ಸ್ಪರ್ಶದ ಮೇಲೆ ಅವಲಂಬಿತವಾಗಿದೆ. ರಾಸಾಯನಿಕ ಸಿಂಪಡಿಸಿ ಅವುಗಳನ್ನು ಕೊಂದಿರುವುದು ಅಕ್ಷಮ್ಯ. ನೈಸರ್ಗಿಕ ವಿಧಾನ ಅನುಸರಿಸಿ ಜೇನುಗೂಡು ತೆರವಿಗೆ ಅವಕಾಶವಿತ್ತು. ಕಾಲೇಜಿನ ಆಡಳಿತ ಮಂಡಳಿಯ ಅವೈಜ್ಞಾನಿಕ ನಡೆ ಸರಿಯಲ್ಲ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಲಿಂಗತ್ವ ಅಲ್ಪಸಂಖ್ಯಾತರ ತಾತ್ಸಾರ ಬೇಡ

ಲಿಂಗತ್ವ ಅಲ್ಪಸಂಖ್ಯಾತರು ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ವಿಶೇಷ ಮೀಸಲಾತಿ, ಉದ್ಯೋಗ ಮತ್ತು ಕೌಶಲ ತರಬೇತಿ ನೀಡುವ ಅಗತ್ಯವಿದೆ. ಈ ಸಮುದಾಯವು ಸಮಾನ ಹಕ್ಕುಗಳನ್ನು ಹೊಂದಿ, ಬದುಕಲು ಅಗತ್ಯವಿರುವ ಬೆಂಬಲ ನೀಡಬೇಕಾಗಿದೆ. ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗೆ ಕಾನೂನಿನ ರಕ್ಷಣೆ ಒದಗಿಸಬೇಕಿದೆ.

ವಾಸುಕಿ ನಾಗರಾಜ್, ಸತ್ಯನಾರಾಯಣ ಕ್ಯಾಂಪ್

ಯುವಜನರ ಭವಿಷ್ಯ ಡೋಲಾಯಮಾನ

ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದ ಕಾಯ್ದೆಯ ಅನುಷ್ಠಾನವು ಹೈಕೋರ್ಟ್ ಮೆಟ್ಟಿಲೇರಿದೆ. ಹಾಗಾಗಿ, ಹೊಸ ನೇಮಕಾತಿಯ ಪುನರಾರಂಭಕ್ಕೆ ಅಗತ್ಯವಾದ ಕಾನೂನುಬದ್ಧ ರಕ್ಷಣೆ ಇನ್ನೂ ಸ್ಪಷ್ಟವಾಗಿಲ್ಲ. ಮತ್ತೊಂದೆಡೆ ಪರಿಶಿಷ್ಟ ಜಾತಿಯ ಒಳಮೀಸಲಾತಿ ಕುರಿತ ಗೊಂದಲವೂ ಬಗೆಹರಿದಿಲ್ಲ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೀಸಲಾತಿ ಪ್ರಮಾಣವನ್ನು ಶೇ 75ಕ್ಕೆ ಹೆಚ್ಚಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಸಮರ್ಪಕ ಕಾನೂನು ರಕ್ಷಣೆ ಒದಗಿಸದಿದ್ದರೆ, ಸರ್ಕಾರಿ ಉದ್ಯೋಗಕ್ಕಾಗಿ ಕಾಯುತ್ತಿರುವ ಲಕ್ಷಾಂತರ ಯುವಜನರ ಭವಿಷ್ಯ ಡೋಲಾಯಮಾನವಾಗಲಿದೆ.

ಕಾರ್ತಿಕ್ ಜಿ.ಸ., ಬೆಂಗಳೂರು

ತಂದೆ–ತಾಯಿ ಅನಾರೋಗ್ಯ: ನೆರವು ನೀಡಿ

ಬೆಂಗಳೂರಿನ ಕೋರಮಂಗಲದಲ್ಲಿ ವಾಸಿಸುತ್ತಿರುವ ನಾನು ಅಂತಿಮ ವರ್ಷದ ಬಿ.ಇ ವಿದ್ಯಾರ್ಥಿನಿ. 54 ವರ್ಷದ ನನ್ನ ತಂದೆ ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದಾರೆ. 47 ವರ್ಷದ ನನ್ನ ತಾಯಿಗೂ ನಾಸೊಫಾರಿಂಕ್ಸ್ ಕ್ಯಾನ್ಸರ್ ಚಿಕಿತ್ಸೆಯ ನಂತರ, ಬ್ರೈನ್ ಟ್ಯೂಮರ್ ಕಾಣಿಸಿಕೊಂಡಿದೆ. ಜೀವನ ನಿರ್ವಹಣೆಯೇ ಕಷ್ಟಕರ ಆಗಿರುವ ಸಂದರ್ಭದಲ್ಲಿ, ಚಿಕಿತ್ಸೆ ಮತ್ತು ಔಷಧಗಳಿಗೆ ಲಕ್ಷಾಂತರ ರೂಪಾಯಿ ಹೊಂದಿಸಬೇಕಾಗಿದೆ. ದಾನಿಗಳು ಆರ್ಥಿಕ ನೆರವು ನೀಡಬೇಕೆಂದು ಕೋರುವೆ. ಬ್ಯಾಂಕ್ ಖಾತೆ ವಿವರ: ಲಿಖಿತಾ ಸಿ.ಎನ್., ಕರ್ಣಾಟಕ ಬ್ಯಾಂಕ್, ಖಾತೆ ಸಂಖ್ಯೆ: 0942500104680901. ಐಎಫ್‌ಎಸ್‌ಸಿ ಸಂಖ್ಯೆ: ಕೆಎಆರ್‌ಬಿ0000094.

ಲಿಖಿತಾ ಸಿ.ಎನ್., ಬೆಂಗಳೂರು

ಚಾಟಿ

ಮಾತಿನ ಔಚಿತ್ಯ

ಸಭೆಗಳಲ್ಲಿ ಉಪನ್ಯಾಸ ಮಾಡುವವರಿಗೆ ನಿರ್ದಿಷ್ಟ ವಿಷಯ ಇಲ್ಲದೆ ಇದ್ದಾಗ ಕರೆದವರನ್ನು ಹೊಗಳುವ ಉಪನ್ಯಾಸ ಸಹಜ. ನಿರ್ದಿಷ್ಟವಾಗಿ ವಿಷಯವನ್ನು ಕೊಟ್ಟಿದ್ದಾಗಲೂ, ಮುಕ್ಕಾಲು ಗಂಟೆಯಲ್ಲಿ ನಲವತ್ತು ನಿಮಿಷ ಕರೆದವರನ್ನು ಹೊಗಳುವ ಭಾಷಣವನ್ನೇ ಮಾಡಿದರೆ ಕೇಳುಗರು ವಿಷಯ ಕೇಳಲು ಬಂದಿರುತ್ತಾರಾ? ಸಂಘಟಕರ ಹೊಗಳಿಕೆ ಕೇಳಲು ಬಂದಿರುತ್ತಾರಾ?

ಅರವಿಂದ ಚೊಕ್ಕಾಡಿ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಜನಕಲ್ಯಾಣ ಕಾರ್ಯಕ್ರಮಕ್ಕೆ ಹಣವಿಲ್ಲವೆಂದು ರಾಜ್ಯ ಸರ್ಕಾರ ನೆಪ ಹೇಳುತ್ತದೆ. ಆದರೆ, ಮತಬ್ಯಾಂಕ್ ಗುರಿಯಾಗಿಸಿಕೊಂಡು ಒಂದು ಸಮುದಾಯಕ್ಕೆ ಮಾತ್ರ ಅನುದಾನ ಬಿಡುಗಡೆ ಮಾಡುತ್ತದೆ. ಅದು, ಸಂವಿಧಾನದ ಸಮಾನತೆಯ ತತ್ತ್ವಗಳಿಗೆ ವಿರುದ್ಧವಾಗಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಬುಧವಾರ, 22-11-2000

• 'ಕೆಪಿಎಸ್‌ಸಿ ಭ್ರಷ್ಟಾಚಾರದ ಗಂಗೋತ್ರಿ'

ಬೆಂಗಳೂರು, ನ. 21– ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಮಿತಿ ಮೀರಿರುವ ಭ್ರಷ್ಟಾಚಾರವನ್ನು ಕವಿ ಸಿದ್ಧಲಿಂಗಯ್ಯ, ತಮ್ಮದೇ ಆದ ವಿಶಿಷ್ಟ ಧಾಟಿಯಲ್ಲಿ ಸ್ವಂತ ಅನುಭವದ ಮೂಲಕ ಇಂದು ವಿಧಾನಪರಿಷತ್ತಿನಲ್ಲಿ ಬಿಚ್ಚಿಟ್ಟರು.

'ನನಗೆ ಕೆಲವು ದಿನಗಳ ಹಿಂದೆ ಮೌಲ್ಯಮಾಪನಕ್ಕಾಗಿ ಉತ್ತರಪತ್ರಿಕೆಗಳ ಒಂದು ಬಂಡಲ್ (ಕಟ್ಟು) ಬಂತು. ಎಲ್ಲಿದ್ದರೊ ಆ ಜನಗಳು, ಬಂದ್ರು ನೋಡಿ ಬಂಡಲ್‌ನ ಹಿಂದೆಯೇ' ಎಂದು ಹೇಳಿದ ಸಿದ್ಧಲಿಂಗಯ್ಯ, ತಮಗೆ ಅಭ್ಯರ್ಥಿಗಳು ಒಡ್ಡಿದ ಆಮಿಷವನ್ನು ವಿಷಾದದಿಂದ ಪ್ರಸ್ತಾಪಿಸಿದರು.

'ನಿಮಗೆ ನನ್ನ ಬಳಿ ಈ ಬಂಡಲ್ ಬಂದಿರುವುದು ಹೇಗೆ ಗೊತ್ತಾಯ್ತು?' ಎಂದು ಕೇಳಿದರೆ, ನಮಗೆಲ್ಲ ಗೊತ್ತಾಗುತ್ತದೆ– ಎಂಬ ಉತ್ತರ ಬಂತು. ನಾನು ತಡಮಾಡದೇ ಸ್ವಂತ ಖರ್ಚಿನಲ್ಲಿ ಆಟೊರಿಕ್ಷಾದಲ್ಲಿ ಆ ಬಂಡಲ್ ಹಾಕಿಕೊಂಡು ಲೋಕಸೇವಾ ಆಯೋಗಕ್ಕೆ ಹೋಗಿ, ಅವನ್ನು ವಾಪಸ್ ಕೊಟ್ಟು, ಆದದ್ದನ್ನು ವಿವರಿಸಿ ಪತ್ರ ಕೊಟ್ಟು ಬಂದೆ' ಎಂದರು.

• ದಲಿತ ಮಹಿಳೆಗೆ ಅರೆ ಬೆತ್ತಲೆ ಶಿಕ್ಷೆ

ಚಿತ್ರದುರ್ಗ, ನ. 21– ಹೊಳಲ್ಕೆರೆ ತಾಲ್ಲೂಕು ಉಪ್ಪರಿಗೇನಹಳ್ಳಿಯಲ್ಲಿ ದಲಿತ ಮಹಿಳೆಯನ್ನು ಅರೆ ಬೆತ್ತಲೆಯಾಗಿ ಗ್ರಾಮದ ದೇವಸ್ಥಾನದ ಮುಂದೆ ನಿಲ್ಲಿಸಿದ ಅಮಾನುಷ ಪ್ರಕರಣ ನಡೆದಿದೆ. ಪ್ರಮುಖ ಆರೋಪಿ ಶಾಲಾ ಶಿಕ್ಷಕ ತಿಪ್ಪೇಸ್ವಾಮಿ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 22-11-1950

• ಮೈಸೂರಿನಲ್ಲಿ ಕಚ್ಚಾ ಫಿಲಂ ತಯಾರಿಕೆ

ಬೆಂಗಳೂರು, ನ. 21– ಭಾರತದಲ್ಲೇ ಪ್ರಥಮವಾಗಿ ಮೈಸೂರಿನಲ್ಲಿ ಕಚ್ಚಾ ಫಿಲಂ ತಯಾರಿಕೆ ಪ್ರಾರಂಭವಾಗುವುದು.

ಈ ಸಂಬಂಧ 2 ಕೋಟಿ ರೂ. ಯೋಜನೆಯನ್ನು ಇಂದು ಕೈಗಾರಿಕಾ ಸಚಿವ ಎಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕಚ್ಚಾ ಫಿಲಂ ಸಲಹಾ ಸಮಿತಿಯ ಸಭೆ ಪರಿಶೀಲಿಸಿತು.

ಸಭೆಗೆ ಸರ್ಕಾರದ ಕೆಲವು ಅಧಿಕಾರಿಗಳು, ಚಲನಚಿತ್ರ ತಯಾರಿಕಾಗಾರರ ಪ್ರತಿನಿಧಿಗಳು ಮತ್ತು ಬಂಡವಾಳಗಾರರು ಭಾಗ ವಹಿಸಿದ್ದರು.

ಸದ್ಯದಲ್ಲಿ ಭಾರತ ಒಂದೂವರೆ ಕೋಟಿ ರೂ.ನಷ್ಟು ಕಚ್ಚಾ ಫಿಲಂ ಅನ್ನು ಪರದೇಶಗಳಿಂದ ತರಿಸಿಕೊಳ್ಳುತ್ತಿದೆ.

ಚುರುಮುರಿ

ಬಂಡೆ ಸಿಡಿವ ಸಮಯ!

• ತುರುವೇಕೆರೆ ಪ್ರಸಾದ್

'ಬಂಡೆ ಕೊರೆದರೆ ಮೊದ್ಲು ಹಿಟ್ ಸಿಗುತ್ತೆ ಅಲ್ವಾ? ಅದ್ರಲ್ಲಿ ಏನೇನ್ ಮಾಡ್ಬಹುದು?' ಕೇಳಿದ ಗುದ್ಲಿಂಗ.

'ಹಿಟ್ಟು ಸ್ಮೂತ್ ಆಗಿರುತ್ತೆ. ಟಾಲ್ಕಂ ಪೌಡ್ರು ಮಾಡಿ ಜನ್ರ ಮುಖಕ್ಕೆ ಮೆತ್ತಬಹುದು. ಸೂಪರ್ ಹಿಟ್ ಅನಿಸ್ಕೊಬಹುದು'.

'ಸ್ವಲ್ಪ ಕೆಳಕ್ಕೆ ಇಳುದ್ರೆ?'

'ಗಟ್ಟಿ ಕಲ್ಲು ಸಿಗುತ್ತೆ. ಚೂರು ಚೂರಾಗಿ ಈಚೆ ಬರುತ್ತೆ. ಕೈ ಪಕ್ಷದ ಭವನದ ಬಿರುಕಲ್ಲಿ ಫಿಲ್ ಮಾಡ್ಕೊಬಹುದು' ಎಂದ ಕಲ್ಲೇಶಿ.

'ಇನ್ನೂ ಸ್ವಲ್ಪ ಆಳಕ್ಕೆ ತೋಡುದ್ರೆ?'

'ಸ್ವೀಟ್ ವಾಟರ್ ಬರುತ್ತೆ. ಗ್ರೇಟರ್ ಬೆಂಗ್ಳೂರು ಪೂರಾ ಖುಷಿಯಾಗಿ ಕುಡೀಬಹುದು. ನಮ್ ಬಂಡೆ, ನಮ್ ಬೋರು ಅನ್ನೋ ಹೆಮ್ಮೆ ಇರುತ್ತೆ'.

'ಇನ್ನೂ ಒಂದು ಪದರ ಕೆಳಕ್ಕೆ ಹೋಯ್ತು ಅಂತ ಇಟ್ಕೊ... ಆಗ?'

'ಸಿಹಿ ನೀರು ಕಮ್ಮಿ ಆಗುತ್ತೆ. ಅಕ್ಕಪಕ್ಕದ ಆನೆಕಲ್ಲು, ಕುದುರೆಗಲ್ಲು ಪದರಗಳಿಂದ ಸೋಸ್ಕೊಳೋ ಕಲ್ಮಶ, ಉಪ್ಪುಪ್ಪು ಅನಿಸಕ್ಕೆ ಶುರುವಾಗುತ್ತೆ. ಕುಡಿಯೋ ಹಾಗೂ ಇಲ್ಲ, ತೊಳೆಯೋ ಹಾಗೂ ಇಲ್ಲ, ಹಳೇ ಗುಟ್ಟು, ಹೈಕಮಾಂಡ್ ಜುಟ್ಟು ಅಂತ ಸಹಿಸ್ಕೊಬೇಕು'.

'ಸಾವಿರಾರು ಅಡಿ ಆಳಕ್ಕೆ ಹೋಯ್ತು ಅಂದ್ಕೊ. ಅವಾಗ ಏನಾಗ್ಬಹುದು?'

'ಲಾವಾರಸ ಧಗಧಗ ಕುದೀತಿರುತ್ತೆ. ಅದರ ಮಧ್ಯೆ ಜ್ವಾಲಾಮುಖಿಯಾಗಿ ಸಿಡಿಯೋ ಒಳಒಪ್ಪಂದಗಳು ನಿಗೂಢವಾಗಿರುತ್ವೆ'.

'ನೀನು ಹೇಳ್ತಿರೋದು ಸ್ಲೋ ರಿಗ್ಗಾ? ಫಾಸ್ಟ್ ರಿಗ್ಗಾ?'

'ಸ್ಲೋ ರಿಗ್ಗೇ! ಎರಡೂವರೆ ವರ್ಷ ಆದ್ರೂ ಸಹಿಸ್ಕೊಂಡೇ ಇದೆ. ಕೊರಸ್ಕೊಂಡಿದ್ದು ಸಾಕಾಗಿ, ಕೆತ್ತಿಸ್ಕೊಂಡು ಸಿಎಂ ಶಿಲ್ಪ ಆಗ್ಬೇಕು ಅನ್ನೋ ಯೋಚನೇಲಿದೆ'.

'ಅದಾಗಲ್ಲ, ಇನ್ನೊಂದು ಬೇರೆ ಬಿಟ್ ಹಾಕಿ ಮತ್ತೆ ಕೊರೀತೀವಿ ಅಂದ್ರೆ?'

'ಅವಾಗ ಬಂಡೆ ಸುಮ್ನಿರುತ್ತಾ? ಕಲ್ಲು ಕರಗುವ ಸಮಯ ಹೋಗಿ ಬಂಡೆ ಸಿಡಿವ ಸಮಯ ಬರುತ್ತೆ. ಆತುಕೊಂಡು ಆಡಳಿತದ ಚಕ್ಕಡಿ ಹೂಡಿದ್ದು ತಲೆ ಹತ್ಕಂಡು ಚಪ್ಪಡಿ ಆಗುತ್ತೆ' ಎಂದ ಪರ್ಮೇಶಿ. ಎಲ್ಲಾ ಗಹಿಗಹಿಸಿ ನಕ್ಕರು.

ಸಂಗತ

ದೃಶ್ಯಮಾಧ್ಯಮಕ್ಕೆ ಹೊಣೆಗಾರಿಕೆ ಬೇಡವೆ?

ಮದ್ಯಪಾನ, ಧೂಮಪಾನಕ್ಕೆ ಯುವಜನರನ್ನು ದೂಡುವಲ್ಲಿ ದೃಶ್ಯಮಾಧ್ಯಮಗಳು ಹಾಗೂ ತಾರಾವರ್ಚಸ್ಸಿನ ಕಲಾವಿದರ ಹೊಣೆಗೇಡಿತನದ ಪಾತ್ರವೂ ಇದೆ.

• ಡಿ.ಎಂ. ಘನಶ್ಯಾಮ

'ಮದ್ಯಪಾನದಿಂದ ಸಾವು ಸಂಭವಿಸುತ್ತದೆ. ಧೂಮಪಾನದಿಂದ ಕ್ಯಾನ್ಸರ್ ಬರುತ್ತದೆ'. ಶಾಸನ ವಿಧಿಸಿದ ಈ ಎಚ್ಚರಿಕೆ ಸಿನಿಮಾ ಆರಂಭದಲ್ಲಿ ತೆರೆಯ ಮೇಲೆ ಬರುತ್ತದೆ; ನಂತರ ಸಿನಿಮಾದಲ್ಲಿ ಏನೆಲ್ಲ ತೋರಿಸಲಾಗುತ್ತದೆ ಎನ್ನುವ ಪ್ರಶ್ನೆಯನ್ನು ಕೇಳುವುದೇ ಬೇಡ.

ಧಾರಾವಾಹಿಗಳಲ್ಲಿ 'ಹೆಲ್ಮೆಟ್ ಇಲ್ಲದ ವಾಹನ ಚಾಲನೆ ಕಾನೂನುಬಾಹಿರ' ಎನ್ನುವ ಅಡಿಟಿಪ್ಪಣಿಯೊಂದಿಗೆ ನಾಯಕನಟನ ಚಂದದ ಹೇರ್‌ಸ್ಟೈಲ್ ತೋರಿಸಲಾಗುತ್ತದೆ. ಜೂಜಾಟದ ಆ್ಯಪ್‌ಗಳನ್ನು ಸ್ಟಾರ್‌ಗಳು ಎಗ್ಗಿಲ್ಲದೆ ಪ್ರಚಾರ ಮಾಡುತ್ತಿದ್ದಾರೆ. ಅಂಥ ಜಾಹೀರಾತುಗಳ ಕೊನೆಯಲ್ಲಿಯೂ 'ಜೂಜಾಟವು ಗೀಳಾಗಬಹುದು' ಎನ್ನುವ ಸಾಲು ಇರುತ್ತದೆ.

'ಶಾಸನ ವಿಧಿಸಿದ ಎಚ್ಚರಿಕೆ' ಎನ್ನುವ ಸಾಲಿನೊಂದಿಗೆ ಅದರ ಉಲ್ಲಂಘನೆಯನ್ನೂ ಒಟ್ಟಾಗಿ ತೋರಿಸುವುದರಿಂದ ಸಮಾಜದ ಮೇಲಾಗುತ್ತಿರುವ ಪರಿಣಾಮ ಯಾವ ರೀತಿಯದು? ಒಂದು ಉದಾಹರಣೆ ನೋಡಿ:

ದೊಡ್ಡಬಳ್ಳಾಪುರದ ರಮೇಶ ಅವರ ಮನೆಯಲ್ಲಿ ನಾಲ್ಕು ಮಗ್ಗಗಳಿದ್ದವು. ಅಪ್ಪ ತೀರಿಹೋದ ನಂತರ ಮಗ್ಗ ಬಿಡುತ್ತಲೇ ತಂಗಿಯ ಮದುವೆಗೆ ಆತ ಹಣ ಹೊಂದಿಸಿದ್ದ. ನಂತರದ ದಿನಗಳಲ್ಲಿ ಅವನೂ ಮದುವೆಯಾದ; ಇಬ್ಬರು ಮುದ್ದಾದ ಹೆಣ್ಣುಮಕ್ಕಳು ಮನೆಗೆ ಬಂದರು. ಐದು ವರ್ಷಗಳ ಹಿಂದೆ ಅಮ್ಮ, ಹೆಂಡತಿ, ಇಬ್ಬರು ಮಕ್ಕಳ ಜೊತೆಗೆ ನೆಮ್ಮದಿಯಾಗಿದ್ದ ಕುಟುಂಬ ಈಗ ಊರು ಬಿಟ್ಟು ಹೊರಟುಹೋಗಿದೆ.

ಗೆಳೆಯರ ಸಹವಾಸದಲ್ಲಿ ರಮೇಶ ಕುಡಿತ ಕಲಿತ. ಅವನು ಆರಾಧಿಸುತ್ತಿದ್ದ ಸಿನಿಮಾ ನಟ ಸಹ ತೆರೆಯ ಮೇಲೆ, ತೆರೆಯ ಹಿಂದೆ ಹೀಗೆಯೇ ಕುಡಿತವನ್ನು ಮೆಚ್ಚಿಕೊಳ್ಳುವ ಮಾತುಗಳನ್ನೇ ಆಡುತ್ತಿದ್ದ. ರಮೇಶನಿಗೂ ಅಷ್ಟೇ, ಈ ಚಟವು ವ್ಯಸನವಾಗಲು ಅವನ ಇಷ್ಟದ ನಟನ ವರ್ತನೆಯೇ ವೇಗವರ್ಧಕವಾಯಿತು. ಕುಡಿತ ಹೆಚ್ಚಾದಂತೆ ದುಡಿಮೆ ಕಡಿಮೆಯಾಯಿತು. ಸಾಲಗಾರರು ಮನೆ ಮುಂದೆ ನಿಲ್ಲತೊಡಗಿದರು. ಮನೆಗೆ ವಿದ್ಯುತ್ ಸರಬರಾಜು ಸ್ಥಗಿತಗೊಂಡಾಗ, ರಮೇಶನ ತಾಯಿ ನಡುಬೀದಿಯಲ್ಲಿಯೇ ಕಣ್ಣೊರೆಸಿಕೊಂಡಿದ್ದರು. ಕರೆಂಟ್ ಹೋದ ಮೇಲೆ ಮಗ್ಗಗಳಿಗೇನು ಕೆಲಸ? ಆರುಕಾಸು, ಮೂರುಕಾಸಿಗೆ ಮಗ್ಗಗಳನ್ನು ಮಾರಲಾಯಿತು. ರಮೇಶನ ಹೆಂಡತಿ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗಲು ಶುರು ಮಾಡಿದರು.



ಸ್ವಲ್ಪ ದಿನಕ್ಕೆ ರಮೇಶನ ತಾಯಿ ಮಗನನ್ನು ಉಪಾಯವಾಗಿ ಬೆಂಗಳೂರಿಗೆ ಕರೆದೊಯ್ದು, ಅಲ್ಲೊಂದು 'ವ್ಯಸನ ಮುಕ್ತಿ ಕೇಂದ್ರ'ಕ್ಕೆ ದಾಖಲಿಸಿದರು. ಅಲ್ಲಿ ತಿಂಗಳಿಗೆ ₹30 ಸಾವಿರ ಶುಲ್ಕ. ಅಡ ಇಟ್ಟಿದ್ದ ಒಡವೆಗಳು ವಾಪಸ್ ಬರಲಿಲ್ಲ. ರಮೇಶನ ಅಮ್ಮ ಮನೆಯನ್ನು ಮಾರಾಟಕ್ಕೆ ಇಟ್ಟರು. ಇದೆಲ್ಲ ಆಗಿ ಸುಮಾರು 3 ತಿಂಗಳಾಗಿದೆ. ಈಗ ರಮೇಶ ಕುಡಿತ ಬಿಟ್ಟಿದ್ದಾನೆ. ಅವನು ವಾಪಸ್ ಊರಿಗೆ ಬಂದರೆ ಮತ್ತೆ ಕುಡಿಯಲು ಶುರು ಮಾಡುತ್ತಾನೆಂದು ಇಡೀ ಕುಟುಂಬ ಊರು ಬಿಟ್ಟು ಹೊರಟುಬಿಟ್ಟಿದೆ.

ಯಾವುದು ಅಸಹಜವಾಗಬೇಕಿತ್ತೋ ಅದನ್ನು ಸಹಜಗೊಳಿಸಿದ್ದಕ್ಕೆ, ಯಾವುದನ್ನು ಹೀಗಳೆಯಬೇಕಿತ್ತೋ ಅದನ್ನು ವಿಜೃಂಭಿಸಿದ ಪರಿಣಾಮ ಇದು. ಸಮಾಜ ಜಾಗೃತವಾಗಿದ್ದರೆ, ಸಿನಿಮಾ–ಧಾರಾವಾಹಿಗಳ ಮಂದಿಗೆ ಸ್ವಲ್ಪವಾದರೂ ತಮ್ಮ ಕಂಟೆಂಟ್ ಬಗ್ಗೆ, ಅದರಲ್ಲಿ ಅಡಗಿರುವ ಮೆಸೇಜುಗಳು ಸಮಾಜದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಎಚ್ಚರವಿದ್ದಿದ್ದರೆ, ತಪ್ಪಿಸಬಹುದಾಗಿದ್ದ ದುರಂತ ಇದು. ನಾವೆಲ್ಲರೂ 'ನಮ್ಮ ನೆಲದ ಸಿನಿಮಾಗಳು' ಎಂದು ಸಂಭ್ರಮಿಸುತ್ತಿರುವ ಸಿನಿಮಾಗಳಲ್ಲಿಯೂ ಕುಡಿತದ ವಿಜೃಂಭಣೆ ಇದೆ.

ತೆರೆಯ ಮೇಲೆ ಧೂಮಪಾನ, ಮದ್ಯಪಾನ ಮಾಡುವ ದೃಶ್ಯಗಳಿಂದ ದೂರವಿದ್ದ ರಾಜ್‌ಕುಮಾರ್ ಅವರ ವೃತ್ತಿ ಬದುಕಿನ ಬಗ್ಗೆ ಇನ್ನಾದರೂ ನಮ್ಮ ಸಿನಿಮಾ ಮಂದಿ ತಿರುಗಿ ನೋಡಬೇಕಿದೆ. 'ಬಂಗಾರದ ಮನುಷ್ಯ'ದಂಥ ಸಿನಿಮಾಗಳು ಮತ್ತೆ ಬರಬೇಕಿದೆ, ಗೆಲ್ಲಬೇಕಿದೆ.

ಧಾರಾವಾಹಿ ಸೇರಿದಂತೆ ಎಲ್ಲ ಬಗೆಯ ಕಂಟೆಂಟ್ ಮತ್ತು ಮೆಸೇಜ್ ವಿಚಾರದಲ್ಲಿ ಈ ಉದ್ಯಮದಲ್ಲಿರುವವರು ಇನ್ನಾದರೂ ಸಮಾಜದ ಮೇಲೆ ಏನು ಪರಿಣಾಮವಾದೀತು ಎನ್ನುವ ಎಚ್ಚರದ ಕಣ್ಣು ಬೆಳೆಸಿಕೊಳ್ಳಬೇಕಾಗಿದೆ. ಹೆಲ್ಮೆಟ್ ಧರಿಸದ ಧಾರಾವಾಹಿ ಹೀರೊಗಳಿಗೆ ಟ್ರಾಫಿಕ್ ಪೊಲೀಸರು ದಂಡ ವಿಧಿಸಿದ ರಸೀದಿಗಳು ಬಹಿರಂಗವಾಗಬೇಕಿದೆ. 'ಶಾಸನ ವಿಧಿಸಿದ ಎಚ್ಚರಿಕೆ'ಯ ಸಾಲು ಹಾಕಿದರೆ ಸಾಲದು, ಶಾಸನ ಹೇಳಿದಂತೆಯೂ ಇವರು ನಡೆದುಕೊಳ್ಳಬೇಕು. ಸರ್ಕಾರಗಳು ಅದನ್ನು ಖಾತರಿಪಡಿಸಬೇಕು.

ಇಂಥದ್ದೇ ಇನ್ನೊಂದು ದುರಂತದಲ್ಲಿ ನಮ್ಮೂರಿನ ಓರ್ವ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ. 6 ವರ್ಷದ ಹೆಣ್ಣುಮಗು, ಹೆಂಡತಿ, ಅಪ್ಪ, ಅಮ್ಮ, ಅಣ್ಣ ಎಲ್ಲರೂ ಇದ್ದ ತುಂಬು ಕುಟುಂಬ ಅದು. ಐಪಿಎಲ್ ಬೆಟ್ಟಿಂಗ್ ಚಟಕ್ಕೆ ಬಿದ್ದಿದ್ದ ಹುಡುಗನನ್ನು ಒಮ್ಮೆ ಅವನ ಕುಟುಂಬದವರು ಸಾಲದ ಬಲೆಯಿಂದ ಕಾಪಾಡಿದ್ದರು. ಮತ್ತದೇ ವರ್ತುಲದಲ್ಲಿ ಸಿಲುಕಿಕೊಂಡಾಗ ಬಿಡಿಸಲು ಬೇಕಾಗುವಷ್ಟು ಸಂಪನ್ಮೂಲ ಹೊಂದಿಸಲು ಅವರಿಗೆ ಸಾಧ್ಯವಾಗಲಿಲ್ಲ. ನಳನಳಿಸಬೇಕಿದ್ದ ಕುಟುಂಬವನ್ನು ಬೆಟ್ಟಿಂಗ್ ಭೂತ ನುಂಗಿಹಾಕಿದ ಪರಿಯಿದು. ದೊಡ್ಡಬಳ್ಳಾಪುರದಂಥ ಪಟ್ಟಣದಲ್ಲಿ ಹೆಜ್ಜೆಗೊಂದರಂತೆ ಇಂಥ ಉದಾಹರಣೆಗಳು ಸಿಗುವಾಗ ರಾಜ್ಯ, ದೇಶದಲ್ಲಿ ಅದೆಷ್ಟು ಕುಟುಂಬಗಳು ಈ ಪಿಡುಗುಗಳಿಂದ ಹಿಂಸೆ ಅನುಭವಿಸಿರಬಹುದು.

ಯಾವುದು ಅಸಹಜವೋ, ವ್ಯಸನವೋ ಅದೆಂದಿಗೂ ಸಹಜವಾಗಬಾರದು. ಕುಡಿತ, ಬೆಟ್ಟಿಂಗ್, ಕಾನೂನು ಉಲ್ಲಂಘನೆಯನ್ನು ಮನರಂಜನೆಯ ನೆಪದಲ್ಲಿ ಪ್ರೋತ್ಸಾಹಿಸಬಾರದು ಎನ್ನುವ ಬದ್ಧತೆಯನ್ನು ದೃಶ್ಯ ಮಾಧ್ಯಮಗಳು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಶಿಕ್ಷಣ ನೀತಿ ಹೇಳುವುದೇನು?

ಮಾತೃಭಾಷೆಗೆ ಒತ್ತು, ಖಾಸಗೀಕರಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಕೇಂದ್ರದ ಎನ್‌ಡಿಎ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ-2020) ಬದಲಿಗೆ ರಾಜ್ಯಕ್ಕೆ ಪ್ರತ್ಯೇಕವಾದ ಶಿಕ್ಷಣ ನೀತಿಯನ್ನು (ಎಸ್‌ಇಪಿ) ರೂಪಿಸುವುದಾಗಿ ಕಾಂಗ್ರೆಸ್ ಪಕ್ಷವು ಚುನಾವಣಾ ಪೂರ್ವದಲ್ಲಿ ಭರವಸೆ ನೀಡಿತ್ತು. ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಎಸ್‌ಇಪಿ ರೂಪಿಸಲು ಶಿಕ್ಷಣ ತಜ್ಞ ಪ್ರೊ.ಸುಖ್‌ದೇವ್ ಥೋರಟ್ ನೇತೃತ್ವದಲ್ಲಿ 2023ರ ಅಕ್ಟೋಬರ್ 11ರಂದು ಆಯೋಗವನ್ನು ರಚಿಸಿತ್ತು. ಆಯೋಗವು 2024ರ ಮೇನಲ್ಲಿ ಮಧ್ಯಂತರ ವರದಿ ಸಲ್ಲಿಸಿತ್ತು. ಈ ವರ್ಷದ ಆಗಸ್ಟ್ 9ರಂದು ಆಯೋಗವು ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿದೆ.

ಉನ್ನತ ಶಿಕ್ಷಣ ಇಲಾಖೆಯು ಮಧ್ಯಂತರ ವರದಿಯಲ್ಲಿ ಮಾಡಲಾಗಿದ್ದ ಕೆಲವು ಶಿಫಾರಸುಗಳನ್ನು 2024–25ನೇ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತಂದಿದೆ. ನಾಲ್ಕು ವರ್ಷದ ಪದವಿ ಕೋರ್ಸ್‌ಗಳನ್ನು ರದ್ದು ಮಾಡಿ ಮೊದಲಿನಂತೆ ಮೂರು ವರ್ಷಗಳ ಕೋರ್ಸ್ ಪದ್ಧತಿಯನ್ನು ಜಾರಿಗೊಳಿಸಿ ಆದೇಶ ಹೊರಡಿಸಿದೆ.

ಈಗ, ಆಯೋಗದ ಅಂತಿಮ ವರದಿ ಬಂದು ಮೂರು ತಿಂಗಳಾದರೂ ಸರ್ಕಾರವು ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಮುಂದಾಗಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಇದರ ನಡುವೆಯೇ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಆಯೋಗದ ವರದಿಯನ್ನು ಸಚಿವ ಸಂಪುಟದ ಮುಂದೆ ಸಲ್ಲಿಸಲು ಸಮಿತಿ ರಚಿಸಲಾಗುವುದು ಎಂದು ಹೇಳಿದ್ದಾರೆ.

ಆಯೋಗವು ಮಾಡಿರುವ ಶಿಫಾರಸುಗಳನ್ನೊಳಗೊಂಡ ವರದಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಕನ್ನಡವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದು, ಖಾಸಗಿ ಶಾಲೆಗಳಿಗೆ ಅಂಕುಶ ಹಾಕುವುದು, ಶಿಕ್ಷಣದ ಖಾಸಗೀಕರಣ ತಡೆಯುವುದು, ಸಂವಿಧಾನದ ಮೌಲ್ಯಗಳನ್ನು ಪಠ್ಯದಲ್ಲಿ ಅಳವಡಿಸುವುದು, ಪಠ್ಯಪುಸ್ತಕಗಳಿಗಾಗಿ ಎನ್‌ಸಿಇಆರ್‌ಟಿ ಅವಲಂಬನೆ ಕಡಿಮೆ ಮಾಡುವುದು, ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಹಣ ಮೀಸಲಿಡುವುದು ಸೇರಿದಂತೆ ಆಯೋಗವು ಹಲವು ಸಲಹೆಗಳನ್ನು ನೀಡಿದೆ.

ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾಡಿರುವ ಪ್ರಮುಖ ಶಿಫಾರಸುಗಳು ಇಲ್ಲಿವೆ.



ಪ್ರೊ.ಸುಖದೇವ್ ಥೋರಟ್ ನೇತೃತ್ವದ ಆಯೋಗ ಆಗಸ್ಟ್ 9ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದೆ. ಸಚಿವರಾದ ಮಧು ಬಂಗಾರಪ್ಪ, ಸುಧಾಕರ್ ಇದ್ದರು

ಶಾಲಾ ಶಿಕ್ಷಣ

- 2 + 8 + 4 ಪದ್ಧತಿ ಅನುಸರಿಸುವುದು; 2 ವರ್ಷ ಪೂರ್ವಪ್ರಾಥಮಿಕ, 8 ವರ್ಷ ಪ್ರಾಥಮಿಕ ಮತ್ತು ನಾಲ್ಕು ವರ್ಷ ಪ್ರೌಢಶಿಕ್ಷಣ (9, 10, 11, 12)
- ಶಿಕ್ಷಣ ಎಲ್ಲರಿಗೂ ಸಮಾನವಾಗಿ ಲಭ್ಯವಾಗುವ ದಿಸೆಯಲ್ಲಿ ಸಣ್ಣ ಶಾಲೆಗಳನ್ನು ಮುಚ್ಚದೇ ಉಳಿಸಿಕೊಳ್ಳಬೇಕು
- ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ವಯಸ್ಸು ನಿಗದಿಪಡಿಸುವುದು (ಮೂರು ತಿಂಗಳು ಹೆಚ್ಚು ಕಡಿಮೆ ಇದ್ದರೂ ಪರಿಗಣಿಸುವುದು)
- ವಲಸೆ ಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ನಿರ್ಮಿಸುವುದು
- ರಾಜ್ಯದಲ್ಲಿ ಪ್ರೌಢಶಿಕ್ಷಣವನ್ನು (9–12) ಸಾರ್ವತ್ರೀಕರಣಗೊಳಿಸುವುದು
- ವಿವಿಧ ಇಲಾಖೆಗಳ ಅಡಿಯಲ್ಲಿನ ಶಾಲೆಗಳ ನಡುವೆ ಸಮನ್ವಯ ಸಾಧಿಸುವುದು
- ಪೂರ್ವಪ್ರಾಥಮಿಕ ಶಿಕ್ಷಣದ (ಇಸಿಸಿಇ) ಸಮಗ್ರ ಉಸ್ತುವಾರಿಗಾಗಿ ಒಂದು ಸಮಿತಿ ರಚಿಸುವುದು
- ಪ್ರತ್ಯೇಕ ವ್ಯವಸ್ಥೆ ರೂಪಿಸುವ ಮೂಲಕ ಪೂರ್ವಪ್ರಾಥಮಿಕ ಹಂತದಲ್ಲಿ ಖಾಸಗಿ ಶಾಲೆಗಳನ್ನು ನಿಯಂತ್ರಿಸುವುದು
- ಐದು ವರ್ಷದಲ್ಲಿ ನಿಯಮಕ್ಕೆ ತಕ್ಕಂತೆ ಶಿಕ್ಷಣ ಹಕ್ಕು ಕಾಯ್ದೆಯನ್ನು (ಆರ್‌ಟಿಇ) ಸಂಪೂರ್ಣವಾಗಿ ಜಾರಿ ಮಾಡುವುದು
- ಆರ್‌ಟಿಇ ಅನ್ನು ಹಂತ ಹಂತವಾಗಿ 4–18 ವಯಸ್ಸಿನವರೆಗೆ ವಿಸ್ತರಿಸುವುದು
- ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಕೇಂದ್ರೀಯ ವಿದ್ಯಾಲಯಗಳ ಮಟ್ಟಕ್ಕೆ ಬೆಳೆಸುವುದು
- ಅತಿಥಿ ಶಿಕ್ಷಕರ ಮೇಲಿನ ಅವಲಂಬನೆಯಿಂದ ಮುಕ್ತವಾಗುವುದು; ಕಾಲಕ್ಕೆ ತಕ್ಕಂತೆ ನೇಮಕಾತಿ ಮಾಡಿಕೊಳ್ಳುವುದು
- ಮುಕ್ತ ತಂತ್ರಾಂಶದ ಡಿಜಿಟಲ್ ಸಾಧನಗಳ ಬಳಕೆಯನ್ನು ಉತ್ತೇಜಿಸುವುದು; ನಿರ್ದಿಷ್ಟ ಕಂಪನಿಯ ತಂತ್ರಾಂಶ ಆಧಾರಿತ ಸಾಧನಗಳ ಬಳಕೆ ನಿಷೇಧಿಸುವುದು
- ಶೈಕ್ಷಣಿಕ ರಂಗದ ಪರಿಣತರನ್ನು ಒಳಗೊಳ್ಳುವ ಮೂಲಕ ಪರೀಕ್ಷಾ ಮಂಡಳಿಯನ್ನು ಪುನರ್‌ರಚಿಸುವುದು
- ಕಲಿಕೆಯ ಅವಧಿಯಲ್ಲಿ ಮತ್ತು ನಿರ್ದಿಷ್ಟ ಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಮಾಪನ ಮಾಡುವುದು
- ಅತಿಥಿ ಶಿಕ್ಷಕರ ಗುತ್ತಿಗೆ ರದ್ದುಪಡಿಸುವುದು, ಎಲ್ಲ ಖಾಲಿ ಹುದ್ದೆಗಳಿಗೆ ಸಮರ್ಥರನ್ನು ನೇಮಕ ಮಾಡುವುದು
- ಖಾಸಗಿ ಶಾಲೆಗಳಲ್ಲಿ ಕೆಲಸದ ವಾತಾವರಣವನ್ನು ಉತ್ತಮಪಡಿಸುವುದು
- ಆಡಳಿತವನ್ನು ಸರಳೀಕರಣಗೊಳಿಸುವುದು ಮತ್ತು ಅಧಿಕಾರಿಶಾಹಿಯ ಹಂತಗಳನ್ನು ಕಡಿತಗೊಳಿಸುವುದು
- ಶೈಕ್ಷಣಿಕ ಪ್ರಗತಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಬಿಇಒ) ಬಲ ತುಂಬುವುದು
- ಸಮಾನಾಂತರ ಸಂಸ್ಥೆಗಳನ್ನು ವಿಲೀನಗೊಳಿಸಿ, ಸಮಗ್ರ ಆಯುಕ್ತ ವ್ಯವಸ್ಥೆ (ಇಂಟಿಗ್ರೇಟೆಡ್ ಕಮಿಷನರೇಟ್) ರೂಪಿಸುವುದು
- ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯನ್ನು (ಡಿಎಸ್‌ಇಆರ್‌ಟಿ) ಸಂಶೋಧನೆ ಮತ್ತು ಅಭಿವೃದ್ಧಿಯ (ಆರ್ ಆ್ಯಂಡ್ ಡಿ) ದೃಷ್ಟಿಯಿಂದ ಸ್ವಾಯತ್ತ ಸಂಸ್ಥೆಯನ್ನಾಗಿ (ಎಸ್‌ಸಿಇಆರ್‌ಟಿ) ಪರಿವರ್ತಿಸುವುದು
- ಜೀವನಪೂರ್ತಿ ಕಲಿಕೆಗಾಗಿ ನಿರ್ದೇಶನಾಲಯವನ್ನು ಪುನಶ್ಚೇತನಗೊಳಿಸುವುದು
- ಹಿಂದುಳಿದ, ಅಂಚಿನ ಸಮುದಾಯಗಳ ಸಬಲೀಕರಣಕ್ಕಾಗಿ ವಯಸ್ಕರ ಶಿಕ್ಷಣದತ್ತ ಲಕ್ಷ್ಯ ಹರಿಸುವುದು
- ಸಾಂವಿಧಾನಿಕ ಮತ್ತು ವೈಜ್ಞಾನಿಕ ಮೌಲ್ಯಗಳ ಪ್ರಚಾರಕ್ಕಾಗಿ ಸಾರ್ವಜನಿಕ ಗ್ರಂಥಾಲಯಗಳಲ್ಲಿನ ವಿಷಯಗಳನ್ನು ದೃಶ್ಯ ಮಾಧ್ಯಮದಲ್ಲಿ ಪ್ರದರ್ಶಿಸುವುದು
- 'ಸಾಂವಿಧಾನಿಕ ಮೌಲ್ಯ ಶಿಕ್ಷಣ'ವನ್ನು ಸಾಂಸ್ಥೀಕರಣಗೊಳಿಸಿ, ಕಡ್ಡಾಯಗೊಳಿಸುವುದು
- ಸಂವಿಧಾನದ ಪ್ರಸ್ತಾವನೆಯಲ್ಲಿರುವ ಮೌಲ್ಯಗಳು, ಮೂಲಭೂತ ಹಕ್ಕುಗಳು, ಕರ್ತವ್ಯಗಳು ಮತ್ತು ರಾಜ್ಯ ನಿರ್ದೇಶಿತ ತತ್ವಗಳನ್ನು ಪಠ್ಯದಲ್ಲಿ ಅಳವಡಿಸುವುದು
- ಜಾಗೃತಿ ಮೂಡಿಸುವ ಮೂಲಕ ಮತ್ತು ಸಮಾನ ಅವಕಾಶಗಳ ಘಟಕ ಸ್ಥಾಪಿಸುವ ಮೂಲಕ ಶಾಲೆಗಳನ್ನು ತಾರತಮ್ಯಮುಕ್ತ ಅಥವಾ ಶೂನ್ಯ ತಾರತಮ್ಯದ ತಾಣಗಳನ್ನಾಗಿಸುವುದು
- ಕರ್ನಾಟಕ ರಾಜ್ಯ ಮುಕ್ತ ಕಲಿಕಾ ವ್ಯವಸ್ಥೆ (ಕೆಎಸ್‌ಒಎಸ್) ಸ್ಥಾಪಿಸುವುದು
- ಕನ್ನಡ ಕೇಂದ್ರಿತ ಪಠ್ಯ ಮತ್ತು ಡಿಜಿಟಲ್ ಕಂಟೆಂಟ್ ರೂಪಿಸುವುದು
- ಪ್ರಾದೇಶಿಕ ಕೇಂದ್ರಗಳು ಮತ್ತು ಪೂರಕ ಸೇವೆಗಳ ಮೂಲಕ ಲಭ್ಯತೆಯನ್ನು ಉತ್ತಮಪಡಿಸುವುದು

ಮುಂದಿನ ವರ್ಷದಿಂದ ಅನುಷ್ಠಾನ

ರಾಜ್ಯ ಶಿಕ್ಷಣ ನೀತಿ ಆಯೋಗದ ವರದಿಯನ್ನು ಸಚಿವ ಸಂಪುಟದ ಮುಂದೆ ಮಂಡಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ಉಪ ಸಮಿತಿ ರಚಿಸಲಿದ್ದಾರೆ. ವರದಿಯನ್ನು ಸಮಿತಿ ಕೂಲಂಕಷವಾಗಿ ಪರಿಶೀಲಿಸಿ, ಶಿಫಾರಸು ಮಾಡಲಿದೆ. ನಂತರ 2026–27ನೇ ಸಾಲಿನಿಂದ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಎಐ ಚಿತ್ರ

ಅನುದಾನ, ಬಜೆಟ್ ಹಂಚಿಕೆ ಹೆಚ್ಚಿಸಿ

ರಾಜ್ಯ ಸರ್ಕಾರವು ಶಾಲಾ ಶಿಕ್ಷಣಕ್ಕೆ ನೀಡುವ ಅನುದಾನ ಮತ್ತು ಬಜೆಟ್ ಹಂಚಿಕೆಯನ್ನು ಹೆಚ್ಚಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

- ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 3ರಷ್ಟು ಹಂಚಿಕೆ ಮಾಡಬೇಕು
- ವಾರ್ಷಿಕ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಮಾಡಲಾಗುತ್ತಿರುವ ಹಂಚಿಕೆಯನ್ನು ಶೇ 30ಕ್ಕೆ ಹೆಚ್ಚಿಸಬೇಕು. 2022–23ರಲ್ಲಿ ರಾಜ್ಯದ ಒಟ್ಟು ವೆಚ್ಚದಲ್ಲಿ ಶಿಕ್ಷಣಕ್ಕೆ ಮಾಡಲಾದ ವೆಚ್ಚ ಶೇ 14ರಷ್ಟಿತ್ತು. ದೇಶದ 12ಕ್ಕೂ ಹೆಚ್ಚು ರಾಜ್ಯಗಳು ಶಿಕ್ಷಣಕ್ಕೆ ಒಟ್ಟು ಬಜೆಟ್‌ನ ಶೇ 20ರಷ್ಟು ಹಣವನ್ನು ಮೀಸಲಿಡುತ್ತಿವೆ. ಕರ್ನಾಟಕವೂ ಹೆಚ್ಚು ಹಂಚಿಕೆ ಮಾಡಲು ಕ್ರಮವಹಿಸಬೇಕು. ವರ್ಷಕ್ಕೆ ಕನಿಷ್ಠ ಶೇ 5ರಷ್ಟು ಹೆಚ್ಚಿಸಬೇಕು. ಮುಂದಿನ 10ರಿಂದ 15 ವರ್ಷಗಳಿಗೆ ಇದಕ್ಕಾಗಿ ವರ್ಷವಾರು ಯೋಜನೆ ರೂಪಿಸಬೇಕು
- ಪ್ರತಿ ವಿದ್ಯಾರ್ಥಿಯ ಮೇಲೆ ವಾರ್ಷಿಕವಾಗಿ ಮಾಡಲಾಗುತ್ತಿರುವ ವೆಚ್ಚವನ್ನು ಹೆಚ್ಚಿಸಬೇಕು. ವಾರ್ಷಿಕವಾಗಿ ಶೇ 5ರಿಂದ ಶೇ 10ರಷ್ಟು ಹೆಚ್ಚು ಖರ್ಚು ಮಾಡುವಂತೆ ನೋಡಿಕೊಳ್ಳಬೇಕು
- ಸಮಾನತೆ, ಗುಣಮಟ್ಟ ಮತ್ತು ತರಬೇತಿಗಾಗಿ ಪ್ರತ್ಯೇಕ ಬಜೆಟ್ ಹಂಚಿಕೆ ಮಾಡಬೇಕು
- ಆರ್‌ಟಿಐ ಅಡಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಣ ಹಂಚಿಕೆ ನೀಡುವುದರ ಬದಲು ಶಾಲೆಗಳಿಗೆ ಮೂಲಸೌಕರ್ಯ ಕಲ್ಪಿಸಲು ಬಂಡವಾಳ ಹೂಡಲು ಆದ್ಯತೆ ನೀಡಬೇಕು
- ಸರ್ಕಾರವು ತನ್ನ ಜವಾಬ್ದಾರಿ ನಿರ್ವಹಿಸುವುದರ ಜೊತೆಗೆ ಶಾಲಾ ಶಿಕ್ಷಣದ ಅಭಿವೃದ್ಧಿಗಾಗಿ ಕಾರ್ಪೊರೇಟ್ ಸಂಸ್ಥೆಗಳು, ದಾನಿಗಳು ಸೇರಿದಂತೆ ಸರ್ಕಾರೇತರ ಸಂಘ ಸಂಸ್ಥೆಗಳು, ವ್ಯಕ್ತಿಗಳಿಂದ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಪ್ರಯತ್ನಿಸಬೇಕು



ಮಾತೃಭಾಷೆ ಶಿಕ್ಷಣ, ದ್ವಿಭಾಷಾ ನೀತಿ

ಐದನೇ ತರಗತಿವರೆಗೆ, ಸಾಧ್ಯವಾಗುವುದಾದರೆ 12ನೇ ತರಗತಿವರೆಗೆ, ಕನ್ನಡ/ಮಾತೃಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ. ಜತೆಗೆ, ದ್ವಿಭಾಷಾ ನೀತಿಯನ್ನು (ಕನ್ನಡ/ಮಾತೃಭಾಷೆ ಮತ್ತು ಇಂಗ್ಲಿಷ್) ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದೆ. ದ್ವಿಭಾಷಾ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳಲು ಶಿಕ್ಷಕರಿಗೆ ತರಬೇತಿ ನೀಡುವುದು ಮತ್ತು ಭಾಷಾ ಬೋಧನಾ ಕೇಂದ್ರ ಸ್ಥಾಪಿಸಬೇಕು ಎಂದೂ ಆಯೋಗ ಹೇಳಿದೆ.

ಎನ್‌ಸಿಇಆರ್‌ಟಿ ಅವಲಂಬನೆ ಬೇಡ

ಶಾಲಾ ಶಿಕ್ಷಣಕ್ಕಾಗಿ ಸಮಗ್ರ ಪಠ್ಯಕ್ರಮ (ಸಿಸಿಎಸ್‌ಇ) ರೂಪಿಸುವಂತೆ ಆಯೋಗವು ಶಿಫಾರಸು ಮಾಡಿದೆ. ಮುಖ್ಯವಾಗಿ, ಪಠ್ಯಪುಸ್ತಕಗಳಿಗಾಗಿ ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಮೇಲಿನ ಅವಲಂಬನೆಯಿಂದ ಹೊರಬರಬೇಕು. ಎಲ್ಲ ವಿಷಯಗಳಲ್ಲಿಯೂ (ಸಬ್ಜೆಕ್ಟ್) ಸ್ಥಳೀಯ ಪಠ್ಯವಸ್ತುಗಳನ್ನು ಅಳವಡಿಸಬೇಕು. ಐದನೇ ತರಗತಿಯವರೆಗೆ ಬುನಾದಿ ಶಿಕ್ಷಣಕ್ಕೆ ಒತ್ತು ನೀಡಬೇಕು. ಮೌಲ್ಯಗಳು, ಸುಸ್ಥಿರತೆ ಮತ್ತು ಸಮಗ್ರ ಅಭಿವೃದ್ಧಿಗೆ ಕಲಿಕೆಯಲ್ಲಿ ಆದ್ಯತೆ ನೀಡಬೇಕು ಎಂದು ಆಯೋಗ ಸಲಹೆ ನೀಡಿದೆ.

ಖಾಸಗಿ ಶಾಲೆಗಳ ನಿಯಂತ್ರಣ

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಾಲೆಗಳು ಪಾರಮ್ಯ ಸಾಧಿಸಿದ್ದು, ಪೋಷಕರು ದುಬಾರಿ ಶುಲ್ಕ ತೆರಬೇಕಿದೆ. ಈ ದಿಸೆಯಲ್ಲಿ, ಶಾಲಾ ಶಿಕ್ಷಣವು ಮತ್ತಷ್ಟು ಖಾಸಗೀಕರಣವಾಗುವುದನ್ನು ತಪ್ಪಿಸಬೇಕು ಎಂದು ಆಯೋಗ ಸೂಚಿಸಿದೆ. ಶಾಲೆಗಳ ಶುಲ್ಕ ನಿಯಂತ್ರಿಸಬೇಕು ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳ (ಇಡಬ್ಲ್ಯುಎಸ್) ಪೋಷಕರ ಮಕ್ಕಳ ಪ್ರವೇಶವನ್ನು ಸುಗಮಗೊಳಿಸಬೇಕು ಎಂದಿದೆ. ಮುಖ್ಯವಾಗಿ, ಖಾಸಗಿ ಶಾಲೆಗಳ ನಿಯಂತ್ರಣಕ್ಕಾಗಿ ಪ್ರತ್ಯೇಕ ಸಂಸ್ಥೆಯನ್ನು ರೂಪಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಉನ್ನತ ಶಿಕ್ಷಣ

- ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ 3 + 2 ವರ್ಷಗಳ (ಮೂರು ವರ್ಷ ಪದವಿ ಮತ್ತು 2 ವರ್ಷಗಳ ಸ್ನಾತಕೋತ್ತರ ಕೋರ್ಸ್) ಮಾದರಿಯನ್ನು ಅಳವಡಿಸಿಕೊಳ್ಳಬೇಕು. ಪಿಎಚ್‌ಡಿ ಅವಧಿಯನ್ನು ಯುಜಿಸಿ ಮಾರ್ಗಸೂಚಿಯಲ್ಲಿರುವಂತೆ ನಿಗದಿ ಮಾಡಬೇಕು. ಶಿಕ್ಷಣ ಸಂಸ್ಥೆಗಳು ವಿಶ್ವ ವಿದ್ಯಾಲಯಗಳ ಸಂಯೋಜನೆಗೆ ಒಳಪಡುವ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು
- ಉತ್ತಮ ಸಾಧನೆ ಮಾಡುವ ಕಾಲೇಜುಗಳನ್ನು 'ರಾಜ್ಯದ ಉತ್ಕೃಷ್ಟ ಶಿಕ್ಷಣ ಸಂಸ್ಥೆ' ಎಂದು ಗುರುತಿಸಿ ಅವುಗಳಿಗೆ ಪದವಿಗಳನ್ನು ನೀಡುವ ಅಧಿಕಾರ ಸೇರಿದಂತೆ ಶೈಕ್ಷಣಿಕ, ಆಡಳಿತಾತ್ಮಕ ಸ್ವಾಯತ್ತೆ ನೀಡಬೇಕು
- ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸಲು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ವಿಶೇಷ ಪ್ರೋತ್ಸಾಹಧನ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಪಿಎಚ್‌ಡಿ ದಾಖಲಾತಿಗೆ ಉತ್ತೇಜನ ನೀಡಲು ಜೂನಿಯರ್ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಪರಿಚಯಿಸಬೇಕು. ಪ್ರವೇಶಾತಿ ಕಡಿಮೆಯಾಗುತ್ತಿರುವ ವಿಜ್ಞಾನ ವಿಷಯಗಳಿಗೆ ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸುವುದಕ್ಕಾಗಿ ಹಣಕಾಸಿನ ಪ್ರೋತ್ಸಾಹ ವ್ಯವಸ್ಥೆಯನ್ನು ರೂಪಿಸಬೇಕು
- ಸಂವಿಧಾನದ 15(5) ಕಲಂ ಅನುಸಾರ ಖಾಸಗಿ ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಲು ಪ್ರಸ್ತಾಪಿಸಲಾದ ನಿಯಮಗಳನ್ನು ಜಾರಿಗೊಳಿಸಬೇಕು
- ಕೇರಳದಂತಹ ರಾಜ್ಯಗಳ ಮಾದರಿಯಲ್ಲಿ ರಾಜ್ಯದಲ್ಲೂ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಪ್ರಮಾಣವನ್ನು ಈಗಿರುವುದಕ್ಕಿಂತ ಮೂರನೇ ಒಂದರಷ್ಟು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಕಡಿಮೆ ಪ್ರವೇಶಾತಿ ಇರುವ ಪ್ರದೇಶಗಳಿಗೆ ಗಮನ ನೀಡುವುದರಿಂದ ಹಾಗೂ ಎಸ್‌ಸಿ, ಎಸ್‌ಟಿ, ಮುಸ್ಲಿಮರು ಮತ್ತು ಮಹಿಳೆಯರು ಸೇರಿದಂತೆ ಕಡಿಮೆ ಆದಾಯದವರು ಮತ್ತು ಸಾಮಾಜಿಕವಾಗಿ ದುರ್ಬಲವಾಗಿರುವ ಸಮುದಾಯಗಳ ಜನರಿಗೆ ಶಿಕ್ಷಣ ಲಭ್ಯವಾಗುವಂತೆ ಮಾಡುವುದರಿಂದ ಇದನ್ನು ಸಾಧಿಸಬಹುದು
- ಕಲ್ಯಾಣ ಕರ್ನಾಟಕದಂತಹ ಹಿಂದುಳಿದ ಪ್ರದೇಶಗಳಲ್ಲಿ ಪ್ರವೇಶಾತಿಯನ್ನು ಹೆಚ್ಚಿಸಬೇಕು. ಎಸ್‌ಸಿ, ಎಸ್‌ಟಿ, ಮುಸ್ಲಿಮರು, ಮಹಿಳೆಯರು ಸೇರಿದಂತೆ ಕಡಿಮೆ ಆದಾಯ ಮತ್ತು ಸಾಮಾಜಿಕವಾಗಿ ದುರ್ಬಲರಾಗಿರುವ ಸಮುದಾಯಗಳಿಂದ ಹೆಚ್ಚಿನ ಜನರು ಹಾಗೂ ಗ್ರಾಮೀಣ ಭಾಗದವರು ಉನ್ನತ ಶಿಕ್ಷಣ ಪಡೆಯುವಂತೆ ಪ್ರೇರೇಪಿಸಬೇಕು. ಕುಶಲಕರ್ಮಿಗಳು, ಸಣ್ಣ ರೈತರು ಮತ್ತು ಕಾರ್ಮಿಕರ ಬಗ್ಗೆ ಹೆಚ್ಚು ಗಮನ ಹರಿಸಬೇಕು. ವಿದ್ಯಾರ್ಥಿ ವೇತನ, ಶುಲ್ಕ ರಿಯಾಯಿತಿ ಮತ್ತು ಹಾಸ್ಟೆಲ್ ಸೌಲಭ್ಯಗಳಂತಹ ಬೆಂಬಲ ನೀಡಬೇಕು. ಹೆಣ್ಣುಮಕ್ಕಳು, ವಿವಾಹಿತ ಮಹಿಳೆಯರಿಗೆ ಪ್ರೋತ್ಸಾಹಧನ ನೀಡಬೇಕು
- ಐದು ವರ್ಷಗಳ ಒಳಗಾಗಿ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು ಭರ್ತಿ ಮಾಡಬೇಕು. ಇದಕ್ಕಾಗಿ ನಿಯಮಿತ ಮತ್ತು ನಿಗದಿತ ನೇಮಕಾತಿ ಪ್ರಕ್ರಿಯೆ ಅನುಸರಿಸಬೇಕು. ಅಪರೂಪದ ಸನ್ನಿವೇಶಗಳನ್ನು ಬಿಟ್ಟು, ಉಳಿದ ಸಂದರ್ಭಗಳಲ್ಲಿ ಅತಿಥಿ ಬೋಧಕರನ್ನು ನೇಮಕ ಮಾಡಬಾರದು. ಕಾಲೇಜುಗಳಲ್ಲಿ ಸ್ಥಿರ ನಾಯಕತ್ವ ಖಾತರಿ ಪಡಿಸಲು ಪ್ರಾಂಶುಪಾಲರ ಹುದ್ದೆಗೆ ಶಾಶ್ವತ ನೇಮಕಾತಿ ಮಾಡಬೇಕು
- ನಾಲ್ಕು ವಿಭಾಗೀಯ ಕೇಂದ್ರ ಸ್ಥಾನಗಳಲ್ಲಿ ಶಿಕ್ಷಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಇವುಗಳು ಸ್ವತಂತ್ರವಾಗಿರಬೇಕು ಅಥವಾ ಉನ್ನತ ಶಿಕ್ಷಣ ಅಕಾಡೆಮಿಯ ಅಡಿಯಲ್ಲಿ ಕಾರ್ಯಾಚರಿಸಬೇಕು. ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ 'ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಮಾಪನ ಮಂಡಳಿ' ಸ್ಥಾಪಿಸಬೇಕು
- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿರುವ ಬೋಧಕರು ಸಂಶೋಧನೆ ನಡೆಸುವುದಕ್ಕೆ ಉತ್ತೇಜನ ಮತ್ತು ಅವರು ಮಾಡುವ ಸಂಶೋಧನೆಗಳಿಗೆ ಬೆಂಬಲ ನೀಡುವುದಕ್ಕಾಗಿ 'ರಾಜ್ಯ ಸಂಶೋಧನಾ ಪ್ರತಿಷ್ಠಾನ' ಸ್ಥಾಪಿಸಬೇಕು
- ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಭೌತಿಕ ಮತ್ತು ಡಿಜಿಟಲ್ ಶಿಕ್ಷಣ ಮೂಲಸೌಕರ್ಯಗಳನ್ನು ಸುಧಾರಿಸಬೇಕು
- ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗಾಗಿ ಹಂತ ಆಧಾರಿತ ಅಭಿವೃದ್ಧಿ ಮತ್ತು ಹೆಚ್ಚು ರಚನಾತ್ಮಕವಾದ ಕೋರ್ಸ್‌ಗಳ ಸಂಯೋಜನೆಯನ್ನು ಒಳಗೊಂಡ ಸುಧಾರಿತ ಪಠ್ಯಕ್ರಮ ಚೌಕಟ್ಟನ್ನು ರೂಪಿಸಬೇಕು
- ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ಸಾಮಾಜಿಕ ನ್ಯಾಯ ಮತ್ತು ನಾಗರಿಕ ಜವಾಬ್ದಾರಿಗಳನ್ನು ತುಂಬಲು 'ಸಾಂವಿಧಾನಿಕ ಮೌಲ್ಯ ಶಿಕ್ಷಣ'ವನ್ನು ಒಂದು ಕಡ್ಡಾಯ ವಿಷಯವನ್ನಾಗಿ ಸಾಂಸ್ಥೀಕರಿಸಬೇಕು. ಎಲ್ಲ ಪಠ್ಯಗಳಲ್ಲಿ ಸಂವಿಧಾನ ಪೀಠಿಕೆಯಲ್ಲಿನ ಮೂಲ ಅಂಶಗಳು, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ಆಶಯಗಳನ್ನು ಸೇರ್ಪಡೆಗೊಳಿಸಬೇಕು
- ಉನ್ನತ ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆಗಳು ತಾರತಮ್ಯ ಮುಕ್ತ ವಾತಾವರಣ ಹೊಂದಿರಬೇಕು
- ಮುಕ್ತ ಕಲಿಕೆ ಮತ್ತು ಆನ್‌ಲೈನ್ ಕಲಿಕೆಗೆ ಪ್ರೋತ್ಸಾಹ ನೀಡಬೇಕು. ಇಂಟರ್‌ನೆಟ್ ಸೌಲಭ್ಯ ಇಲ್ಲದ ಬಡ ವಿದ್ಯಾರ್ಥಿಗಳೂ ಆನ್‌ಲೈನ್ ಮೂಲಕ ಕಲಿಯಲು ಬೇಕಾದ ವ್ಯವಸ್ಥೆ ಕಲ್ಪಿಸಬೇಕು
- ತನ್ನದೇ ಆದ ಶಿಕ್ಷಣ ನೀತಿಗಳನ್ನು ರೂಪಿಸಲು ತನಗಿರುವ ಸಾಂವಿಧಾನಿಕ ಸ್ವಾಯತ್ತೆಯನ್ನು ಗೌರವಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ರಾಜ್ಯವು ಮನವರಿಕೆ ಮಾಡಿಕೊಡಬೇಕು. ನೀತಿ ರೂಪಿಸುವ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸದಂತೆ ಸ್ಪಷ್ಟವಾಗಿ ತಿಳಿಸಬೇಕು
- ಉನ್ನತ ಶಿಕ್ಷಣದಲ್ಲಿರುವ ಖಾಸಗಿ ವಲಯದ ನಿಯಂತ್ರಣಕ್ಕಾಗಿ ಶಿಕ್ಷಣ ಇಲಾಖೆಯಲ್ಲಿಯೇ ಪ್ರತ್ಯೇಕವಾದ ವ್ಯವಸ್ಥೆ ಇರಬೇಕು
- ಉನ್ನತ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದಕ್ಕಾಗಿ 10 ವರ್ಷಗಳ ಸಮಗ್ರ ಯೋಜನೆಯೊಂದನ್ನು ರೂಪಿಸಬೇಕು. ಸದ್ಯ ಉನ್ನತ ಶಿಕ್ಷಣಕ್ಕೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 0.23ರಷ್ಟು ಅನುದಾನ ನೀಡಲಾಗುತ್ತಿದ್ದು, ಅದನ್ನು ಶೇ 1ಕ್ಕೆ ಹೆಚ್ಚಿಸಬೇಕು. ಇದನ್ನು 2025–26ನೇ ಸಾಲಿನಿಂದ ಆರಂಭಿಸಿ ಹಂತ ಹಂತವಾಗಿ ಏರಿಸಬೇಕು. 2027–28ರ ಹೊತ್ತಿಗೆ ಉನ್ನತ ಶಿಕ್ಷಣಕ್ಕೆ ₹16,691 ಕೋಟಿ ಹಂಚಿಕೆ ಮಾಡಬೇಕು. ಅನುದಾನದ ಕೊರತೆ ತಪ್ಪಿಸಲು ಹೆಚ್ಚುವರಿಯಾಗಿ ₹10 ಸಾವಿರ ಕೋಟಿ ಲಭ್ಯವಿರುವಂತೆ ನೋಡಿಕೊಳ್ಳಬೇಕು
- ಅಗತ್ಯವಿರುವ ಸಂಪನ್ಮೂಲವನ್ನು ಕ್ರೋಡೀಕರಿಸುವುದಕ್ಕಾಗಿ ಪರೋಕ್ಷ ತೆರಿಗೆಯ ಮೇಲೆ ಶೇ 2ರಷ್ಟು ಉಪಕರ (ಸರ್‌ಚಾರ್ಜ್) ವಿಧಿಸಬಹುದು. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ನೀಡಲಾಗುವ ಅನುದಾನದ ಅನುಪಾತವನ್ನು (ವೇತನ:ಅಭಿವೃದ್ಧಿ) ಈಗಿರುವ 90:10ರಿಂದ 75:25ಕ್ಕೆ ಬದಲಾಯಿಸಬೇಕು
- ಅಗತ್ಯವಿರುವಾಗ ಅನುದಾನ ನೀಡುವ ವ್ಯವಸ್ಥೆಯ ಬದಲಿಗೆ ತತ್ವಾಧಾರಿತ ಹಣಕಾಸಿನ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಅನುದಾನವನ್ನು (1) ಬೋಧಕರ ಹುದ್ದೆಗಳ ಭರ್ತಿ (2) ಮೂಲಸೌಕರ್ಯಗಳ ಕೊರತೆ ನೀಗಿಸುವುದು (3) ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತರಿಪಡಿಸುವ ಉದ್ದೇಶಕ್ಕೆ ಬಳಸಲು ಅವಕಾಶ ನೀಡಬೇಕು
- ಎಲ್ಲ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಮತ್ತು ನೀತಿಯ ಅನುಷ್ಠಾನವನ್ನು ಸುಧಾರಿಸಲು ಉನ್ನತ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಂತರ ಇಲಾಖೆ ಸಮನ್ವಯ ಸಮಿತಿ ಸ್ಥಾಪಿಸಬೇಕು

ಸಂಪುಟ ಸಮ್ಮತಿ ನಂತರ ಚರ್ಚೆಗೆ

ಎಸ್‌ಇಪಿ ಆಯೋಗದ ಮಧ್ಯಂತರ ವರದಿ ಶಿಫಾರಸಿನಂತೆ 2024–25ನೇ ಸಾಲಿನಿಂದಲೇ ಉನ್ನತ ಶಿಕ್ಷಣದಲ್ಲಿ ರಾಜ್ಯ ಶಿಕ್ಷಣ ನೀತಿ ಅಳವಡಿಸಿಕೊಂಡಿದ್ದೇವೆ. ನಾಲ್ಕು ವರ್ಷಗಳ ಪದವಿ, ಬಹು ಪ್ರವೇಶ–ನಿರ್ಗಮನ, ಇತರೆ ವಿಭಾಗಗಳ ವಿಷಯ ಆಯ್ಕೆ ರದ್ದು ಮಾಡಿದ್ದೇವೆ. ಅಂತಿಮ ವರದಿ ಆಧರಿಸಿ, ಅಳವಡಿಸಿಕೊಳ್ಳಬೇಕಿರುವುದು ಕೆಲ ಅಂಶಗಳಷ್ಟೇ ಬಾಕಿ ಇವೆ. ಸಂಪುಟದ ಅನುಮೋದನೆ ಪಡೆದ ನಂತರ ಸಾರ್ವಜನಿಕ ಚರ್ಚೆಗೆ ಬಿಡಲಾಗುವುದು

ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ

ಖಾಸಗೀಕರಣ ಬೇಡ

ಶಿಕ್ಷಣದ ಖಾಸಗೀಕರಣವನ್ನು ತಡೆಯಬೇಕು. ಸರ್ಕಾರಿ ಸಂಸ್ಥೆಗಳು ಮತ್ತು ಜನಹಿತ ಬಯಸುವ ಅನುದಾನಿತ ಸಂಸ್ಥೆಗಳನ್ನು ಬಲಪಡಿಸಲು ಹೆಚ್ಚು ಒತ್ತು ನೀಡಬೇಕು. ಅನುದಾನಿತ ಸಂಸ್ಥೆಗಳಿಗೆ ಪ್ರವೇಶ ಪಡೆದ ಕಡಿಮೆ ಆದಾಯದ ಕುಟುಂಬಗಳ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ, ವಿದ್ಯಾರ್ಥಿ ವೇತನ, ಹಾಸ್ಟೆಲ್ ವ್ಯವಸ್ಥೆಯಂತಹ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಆಯೋಗ ಹೇಳಿದೆ.

ದ್ವಿಭಾಷೆಗೆ ಪ್ರೋತ್ಸಾಹ

ಭಾಷಾ ಕೌಶಲ ವೃದ್ಧಿ ಮತ್ತು ಶಿಕ್ಷಣದ ಲಭ್ಯತೆಯನ್ನು ಹೆಚ್ಚಿಸುವುದಕ್ಕಾಗಿ 1ನೇ ತರಗತಿಯಿಂದ ಪದವಿ ಕೋರ್ಸ್‌ನ ಅಂತಿಮ ವರ್ಷದವರೆಗೆ ಇಂಗ್ಲಿಷ್ ಭಾಷೆ ಕಲಿಸಲು ರಚನಾತ್ಮಕ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸಬೇಕು. ಇದರ ಜೊತೆಗೆ ದ್ವಿಭಾಷಾ ಕಲಿಕೆಯನ್ನು ಪ್ರೋತ್ಸಾಹಿಸಬೇಕು. ಭಾಷೆಯ ಬೋಧನೆ ಮತ್ತು ತರಬೇತಿಗಾಗಿ ಪ್ರತ್ಯೇಕ ಕೇಂದ್ರವೊಂದನ್ನು ಸ್ಥಾಪಿಸಲೇಬೇಕು. ಶೈಕ್ಷಣಿಕ ಜ್ಞಾನವನ್ನು ಹೆಚ್ಚು ವಿದ್ಯಾರ್ಥಿಗಳಿಗೆ ಸಿಗುವಂತೆ ಮಾಡಲು ದ್ವಿಭಾಷಾ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದರ ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಪ್ರಮುಖ ಕಲಿಕಾ ಪರಿಕರಗಳು ಮತ್ತು ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಬೇಕು. ಕನ್ನಡದಲ್ಲಿ ಉತ್ಕೃಷ್ಟ ಶೈಕ್ಷಣಿಕ ಸಂಪನ್ಮೂಲ ಸೃಷ್ಟಿಸುವುದಕ್ಕಾಗಿ 'ಜ್ಞಾನ ಭಾಷಾಂತರ ಕೇಂದ್ರ' ಸ್ಥಾಪಿಸಬೇಕು ಎಂದು ಆಯೋಗ ಹೇಳಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

22 ನವೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದ್ವಿತೀಯ ಗಂ 17-12 ನಕ್ಷತ್ರ: ಜ್ಯೇಷ್ಠ ಗಂ 16-47 ಯೋಗ: ಸುಕರ್ಮಾ ಗಂ. 11-30 ಕರಣ: ಕೌಲವ ಗಂ. 17-12 ವೃಶ್ಚಿಕ ಮಾಸದ 07 ನೇ ದಿನ. ಮಳೆ ನಕ್ಷತ್ರ : ಅನುರಾಧ 2ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-37 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 30 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 6, 7,

ಮೇಷ: ಧೈರ್ಯವೇ ಕೆಲಸಕ್ಕೆ ಸಾಧನ ಆಗುವುದು. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ. ಕಾರ್ಯನಿಮಿತ್ತ ದೂರದ ಸಂಚಾರ ಅಗತ್ಯ. ಹಣಕಾಸಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರೆಯಲಿದೆ.

ವೃಷಭ: ಆತ್ಮೀಯರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ ದೊರಕುವುದು. ಅತಿಯಾದ ಆಲಸ್ಯ, ಬೇಜವಾಬ್ದಾರಿತನ ಅಭಿವೃದ್ಧಿಯನ್ನು ಕುಂಠಿತವಾಗಿ ಮಾಡುತ್ತದೆ. ಆರೋಗ್ಯ ಸಮಸ್ಯೆಗಳು ಎದುರಾಗಬಹುದು.

ಮಿಥುನ: ಸಂತಾನ ಪ್ರಾಪ್ತಿಯಾಗಲಿದ್ದು, ಸಂತೃಪ್ತ ಜೀವನ ನಡೆಸುವಂತಾಗುತ್ತದೆ. ಆತ್ಮವಿಶ್ವಾಸ ಹೆಚ್ಚಿಸಿಕೊಂಡು ಪರಿಶ್ರಮದಿಂದ ಪ್ರಗತಿಯಾಗುವುದು. ಹಾಳು ವ್ಯಸನಗಳಿಗೆ ಒಳಗಾಗುವ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಿರಿ.

ಕರ್ಕಾಟಕ: ಮೂರನೇ ವ್ಯಕ್ತಿಯ ಮಾತುಗಳನ್ನು ಕೇಳಿಕೊಂಡು ಸಂಬಂಧಿಗಳಲ್ಲಿ ಇಲ್ಲಸಲ್ಲದ ವಿಚಾರಗಳಿಗೆ ಜಗಳನ್ನು ತೆಗೆಯದಿರಿ. ಹಳೆಯ ಸಮಸ್ಯೆಗಳೇ ಹೊಸ ರೂಪ ಪಡೆದು ನಿಮ್ಮೆದುರು ಬರಲಿವೆ. ಗಣಪತಿಯ ಆರಾಧನೆ ಶುಭ ತರುತ್ತದೆ.

ಸಿಂಹ: ನಿನ್ನೆ ಇದ್ದಂಥ ವಸ್ತುಗಳು ಕಾಣೆಯಾಗುವುದು ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಮೇಲೆ ಅನುಮಾನವನ್ನು ತರಿಸುತ್ತದೆ. ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆ ಕಾಣುವ ಸಾಧ್ಯತೆ ಇದೆ. ಇತರರ ವಿಷಯದಲ್ಲಿ ತಲೆಹಾಕದಿರಿ.

ಕನ್ಯಾ: ಮಾಡುವ ಕೆಲಸಗಳನ್ನೇ ಅಧಿಕಾರಿಗಳ ಕಣ್ಣೆದುರಿಗೆ ಮಾಡಬೇಕಾದ ಸಂದರ್ಭ ಬಂದಾಗ ಗುಣಮಟ್ಟದ ಬದಲಾವಣೆಯಾಗುವುದು. ವಿಚಲಿತರಾಗಬೇಡಿ. ಅನುಭವದಿಂದಾಗಿ ಉತ್ತೀರ್ಣರಾಗುವುದರಲ್ಲಿ ಸಂಶಯಬೇಡ.

ತುಲಾ: ಗುರುವಿನ ಸಾನ್ನಿಧ್ಯ ಹಾಗೂ ನಿಶ್ಚಲವಾದ ಭಕ್ತಿಯು ಮನಶ್ಶಾಂತಿಯನ್ನು ತಂದುಕೊಡುವುದು. ಹಿಂದಿನ ದಿನಗಳಿಗೆ ಹೋಲಿಸಿದರೆ ಸಂಸಾರ ನಿರ್ವಹಣೆ ಸುಲಭವೆನಿಸುವುದು. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸ ಒಪ್ಪಿಕೊಳ್ಳುವಿರಿ.

ವೃಶ್ಚಿಕ: ವೃತ್ತಿ ಜೀವನದಲ್ಲಿ ದೊರೆಯಬೇಕಾದ ಬಡ್ತಿಯು ಅನಿವಾರ್ಯ ಕಾರಣಗಳಿಂದ ಮುಂದೂಡಿಕೆ ಆಗುವುದು. ನಿಮ್ಮ ಸ್ವಂತ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡಬಹುದು. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ಧನು: ವ್ಯಸನಕ್ಕೆ ತುತ್ತಾಗಿರುವವರಿಂದ ತೊಂದರೆಯನ್ನು ಅನುಭವಿಸಬೇಕಾದೀತು. ವಿಷಜಂತುಗಳ ಕಡಿತಕ್ಕೆ ಒಳಗಾಗುವಂತಹ ಸಾಧ್ಯತೆ ಇರುವದರಿಂದ ಅತ್ಯಂತ ಎಚ್ಚರದಲ್ಲಿರಿ. ಕೆಲಸಗಳತ್ತ ಮನಸ್ಸು ಹರಿಸುವಿರಿ.

ಮಕರ: ಹಣ ಕಾಸಿನ ಪರಿಸ್ಥಿತಿಯು ನಿಮ್ಮ ಆಲೋಚನೆಗಿಂತಲೂ ಮಿಗಿಲಾಗಿ ನಿಯಂತ್ರಣ ತಪ್ಪಿಹೋಗುವುದು. ಮಕ್ಕಳಿಗಾಗಿ ಇಷ್ಟದ ವಿಚಾರಗಳನ್ನು ತ್ಯಾಗ ಮಾಡಬೇಕಾಗಿ ಬರುತ್ತದೆ. ವೈವಾಹಿಕ ಸಂಬಂಧಗಳು ಗಟ್ಟಿಗೊಳ್ಳಲಿವೆ.

ಕುಂಭ: ಮನೆಯಲ್ಲಿ ವಿವಾಹಕ್ಕೆ ಸಂಬಂಧ ಮಾತುಕತೆಗಳು ಹಿರಿಯರಲ್ಲಿ ಚರ್ಚೆಗೆ ಬರಲಿವೆ. ಮತ್ತೊಬ್ಬರನ್ನು ಗೌರವಿಸುವುದರಿಂದ ಗೌರವ ಕೂಡ ಹೆಚ್ಚುವುದು. ಮನೆಯವರ ಆರೋಗ್ಯದ ಬಗೆಗೆ ಕಾಳಜಿ ವಹಿಸಿ.

ಮೀನ: ಯಶಸ್ಸಿಗೆ ಏಕಾಗ್ರತೆ ಮತ್ತು ಪ್ರಯತ್ನ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ನಿಮಗೆ ಬರುವುದು. ಮನೆಯಲ್ಲಿನ ಗೋಸಂಪತ್ತಿನಲ್ಲಿ ತೊಂದರೆಗಳು ಉಂಟಾಗಬಹುದು.

ಪದಬಂಧ 6231

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕರು ಹಾಕದಿರುವ ಹಸು (3)
3.ಪ್ರಿಯತಮನಲ್ಲಿರುವ ಅಜ್ಞಾನ! (2)
5.ರೇಷ್ಮೆ ನಗರ ಎಂದು ಹೆಸರು ಪಡೆದ ಊರು (5)
7.ಅರಿವೆಗೊಂದು ಪರ್ಯಾಯ ಪದ (2)
8.ಕಾಳಿನದಿ ದಡದಲ್ಲಿರುವ ಉತ್ತರಕನ್ನಡ ಜಿಲ್ಲೆಯ ಕಡಲತೀರದ ಸುಂದರ ನಗರ (4)
10.ವಿಷ್ಣುವಿನ ದಶಾವತಾರದಲ್ಲಿ ಎರಡನೆಯದು (2)
11.ಹಾವುಗೆ ಹತ್ತಿರವಿರುವ ಉರಗ (2)
12.ಹೆರಿಗೆಯ ಸೆತ್ತೆ (2)
13.ಮಮತಾಮಯಿ ಈ ಮಾತೆ! (2)
14.ಬುದ್ಧಿವಂತಿಕೆ ಇಲ್ಲಿ ಕಾಣುತ್ತಿದೆ (4)
16.ಮಂಗಳಾರತಿ ಮಾಡುವಾಗ ಕಾಣಿಸಿದ ಕೋತಿ (2)
17.ಅತಿಶಯವಾದ ಸೌಂದರ್ಯವುಳ್ಳವಳು (5)
19.ಮೋಸಕ್ಕೊಂದು ಪರ್ಯಾಯ ಪದ (2)
20.ವ್ಯಾಕರಣದಲ್ಲಿ ಪುರುಷವಾಚಕ ಲಿಂಗ (3)

ಮೇಲಿಂದ ಕೆಳಕ್ಕೆ

1.ಕರದಲ್ಲಿರುವ ಚಿನ್ನ! (4)
2.ಉಲ್ಟಾ ಕಾಣುತ್ತಿರುವ ಜಾನುವಾರು (2)
4.ಮನಸ್ಸಿನ ಗುಣಸ್ವಭಾವವು ಮರ್ಮದಲ್ಲಿದೆ! (4)
6.ಬೆಟ್ಟದ ಗವಿ (3)
8.ಡಿಕಾವು ತೋರುವಾಗ ತಾಕಿದ ಬಿಸಿ! (2)
9.ವಾರಕ್ಕೆ ಮೊದಲೇ ಕಾಣಿಸಿದ ಆನೆ! (3)
10.ಕೂರಿಸುವಾಗ ಅಡ್ಡಿಪಡಿಸಿದ ಮಗು! (2)
11.ದೋಣಿಯ ಕಂಬಕ್ಕೆ ಕಟ್ಟುವ ಬಟ್ಟೆ (2)
12.ಮಾವನ ಮರ್ಯಾದೆ (2)
13.ಘರ್ಷಣೆಯನ್ನು ಹೀಗೂ ಹೇಳುವರು (4)
14.ನವಿಲಿನ ಕುಣಿತವಿದು (3)
15.ಸುಗಂಧ ಲೇಪನ ದ್ರವ್ಯ (4)
18.ಪುರಿಯಲ್ಲಿರುವ ಶತ್ರುಕಾಣಿಸುತ್ತಿದ್ದಾನೆಯೇ? (2)



6230ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ವಿವಾದ 3.ಪ್ರವಾಸ 5.ವ್ಯಕ್ತಿ
6.ಸದ್ಭಾವ 7.ಕಲಿ 9.ನಗ
11.ಹೂದಾನಿ 13.ದ್ವಾರ
14.ಸುಗುಣ 15.ನಗರ

ಮೇಲಿಂದ ಕೆಳಕ್ಕೆ:

1.ವಿಮುಕ್ತಿ 2.ದವಸ
3.ಪ್ರಭಾವ 4.ಸರೀಕ
5.ವ್ಯವಕಲನ 8.ಲಿಲಾವುದಾರ
10.ಗವಸು 11.ಹೂಬಾಣ
12.ನಿಧಾನ 13.ದ್ವಾಪರ

ಸುಡೊಕು 6615

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		1			7		3	
			2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

6614 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಡಿ.2ಕ್ಕೆ ಸಿ.ಟಿ.ರವಿ ವಿರುದ್ಧ ಪ್ರತಿಭಟನೆ

ಬೆಂಗಳೂರು: ಸವಿತಾ ಸಮಾಜದ ಬಗ್ಗೆ ಅವಹೇಳನಕಾರಿ ಪದ ಬಳಕೆಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಬಂಧಿಸುವಂತೆ ಆಗ್ರಹಿಸಿರುವ ರಾಜ್ಯ ಸವಿತಾ ಸಮಾಜ, ಡಿ.2ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾಜದ ಉಪಾಧ್ಯಕ್ಷ ಡಿ.ಆರ್.ಕೃಷ್ಣ, 'ಅಂದು ಬೆಳಿಗ್ಗೆ 10 ಗಂಟೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವರೆಗೆ ಮೆರವಣಿಗೆ ನಡೆಸಿ, ಪ್ರತಿಭಟನೆ ನಡೆಸಲಾಗುವುದು. ಜಾತಿ ನಿಂದನೆ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಅನೇಕ ಕಡೆ ಮತ್ತು ಮಡಿವಾಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಕೂಡಲೇ ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು.

ಸವಿತಾ ಸಮಾಜದ ಮಾಜಿ ಅಧ್ಯಕ್ಷ ಯು.ಕೃಷ್ಣಮೂರ್ತಿ, ಸವಿತಾ ಸಮಾಜದ ಮುಖಂಡರಾದ ವೇಣು ಗೋಪಾಲ, ಸೌಭಾಗ್ಯ, ಲಕ್ಷ್ಮೀ, ಮಂಜೇಶ್ ಗಾಂಧಿ, ರಾಘವೇಂದ್ರ ಶಿಕಾರಿಪುರ ಇದ್ದರು.

ನಗರದೊಳಗೆ ಬಾರದ 'ವಂದೇ ಭಾರತ್'

ಕಲಬುರಗಿ– ಬೆಂಗಳೂರು ನಡುವಿನ ರೈಲು ಬೈಯಪ್ಪನಹಳ್ಳಿಯಿಂದಲೇ ಸಂಚಾರ

• ಬಾಲಕೃಷ್ಣ ಪಿ.ಎಚ್.

ಮುಖ್ಯಾಂಶಗಳು

- ಕಂಟೋನ್ಮೆಂಟ್, ಕಲಬುರಗಿ, ನಿಲ್ದಾಣದಲ್ಲಿ ಪಿಟ್‌ಲೈನ್ ಇಲ್ಲ
- 18 ತಿಂಗಳಿನಿಂದಲೂ ಎಸ್‌ಎಂವಿಟಿ ನಿಲ್ದಾಣ ದಿಂದಲೇ ಸಂಚಾರ
- ಪ್ರಯಾಣಿಕರಿಗೆ ಸಂಕಷ್ಟ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಬರಬೇಕಿದ್ದ ಕಲಬುರಗಿ–ಬೆಂಗಳೂರು ವಂದೇಭಾರತ್ ರೈಲು ಒಂದೂವರೆ ವರ್ಷಗಳಿಂದ ಎಸ್‌ಎಂವಿಟಿಯಿಂದಲೇ ಚಲಿಸುತ್ತಿದೆ. ನಗರದ ಒಳಗೆ ಬಾರದೇ ಇರುವುದರಿಂದ ಪ್ರಯಾಣಿಕರಿಗೆ ಸಮಸ್ಯೆಯಾಗಿದೆ.

ಈ ವಂದೇ ಭಾರತ್ ರೈಲಿಗೆ ಅನುಮೋದನೆ ನೀಡುವಾಗ ಕಲಬುರಗಿ–ಕಂಟೋನ್ಮೆಂಟ್ ನಡುವೆ ಎಂದೇ ನಮೂದಿಸಲಾಗಿತ್ತು. ಆದರೆ, ಕಲಬುರಗಿಯಲ್ಲಿ ಪಿಟ್‌ಲೈನ್ ಮತ್ತು ಚಾರ್ಜಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ ಕಂಟೋನ್ಮೆಂಟ್ ನಿಲ್ದಾಣದಲ್ಲಿಯೂ ಇಲ್ಲದಿರುವುದರಿಂದ ತಾತ್ಕಾಲಿಕವಾಗಿ ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ)–ಕಲಬುರಗಿ ನಡುವೆ ವಂದೇ ಭಾರತ್ ಸಂಚರಿಸಲಿದೆ ಎಂದು ತಿಳಿಸಲಾಗಿತ್ತು.

2024ರ ಮಾರ್ಚ್ 12ರಂದು ವಂದೇ ಭಾರತ್ ರೈಲು ಆರಂಭವಾಗಿದ್ದು, ಒಂದೂವರೆ ವರ್ಷಗಳ ಬಳಿಕವೂ ತಾತ್ಕಾಲಿಕ ವ್ಯವಸ್ಥೆ ಮುಂದುವರಿದಿದೆ. ನಗರದ ಹೊರಗೆ ಬೈಯಪ್ಪನಹಳ್ಳಿ ಎಸ್‌ಎಂವಿಟಿ ನಿಲ್ದಾಣ ಇರುವುದರಿಂದ ಬೆಂಗಳೂರು ದಕ್ಷಿಣ, ಪಶ್ಚಿಮ ಸೇರಿದಂತೆ ನಗರದ ಬಹುತೇಕ ಭಾಗದ ಜನರಿಗೆ ತೊಂದರೆಯಾಗಿದೆ.

ಶುಕ್ರವಾರ ಹೊರತುಪಡಿಸಿ ವಾರಕ್ಕೆ ಆರುದಿನ ಸಂಚರಿಸುವ ರೈಲು ಬೆಳಿಗ್ಗೆ 5.15ಕ್ಕೆ ಕಲಬುರಗಿಯಿಂದ ಹೊರಡುತ್ತಿದೆ. ಮಧ್ಯಾಹ್ನ 2ಕ್ಕೆ ಎಸ್‌ಎಂವಿಟಿಗೆ ತಲುಪುತ್ತಿದೆ. ಮಧ್ಯಾಹ್ನ 2.40ಕ್ಕೆ ಎಸ್‌ಎಂವಿಟಿಯಿಂದ ಹೊರಟು ರಾತ್ರಿ 11.30ಕ್ಕೆ ಕಲಬುರಗಿಗೆ ತಲುಪುತ್ತಿದೆ. ಮಧ್ಯೆ ಯಲಹಂಕ ಜಂಕ್ಷನ್, ಅನಂತಪುರ, ಗುಂತಕಲ್ ಜಂಕ್ಷನ್, ಮಂತ್ರಾಲಯ ರಸ್ತೆ, ರಾಯಚೂರು ಜಂಕ್ಷನ್, ಯಾದಗಿರಿಯಲ್ಲಿ ನಿಲುಗಡೆಯನ್ನು ಹೊಂದಿದೆ.

ಮಂತ್ರಾಲಯ ರಸ್ತೆ ನಿಲ್ದಾಣದಲ್ಲಿ ನಿಲುಗಡೆ ಹೊಂದಿರುವುದರಿಂದ ಬೆಂಗಳೂರಿನಿಂದ ಮಂತ್ರಾಲಯಕ್ಕೆ ಹೋಗುವವರಿಗೆ ಈ ರೈಲು ಅನುಕೂಲವಾಗಿದೆ. ಮಧ್ಯಾಹ್ನ ಬೆಂಗಳೂರಿನಿಂದ ಹೊರಟರೆ ರಾತ್ರಿ 8.15ಕ್ಕೆ ಮಂತ್ರಾಲಯದಲ್ಲಿ ಇರಬಹುದು. ಹಾಗಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಈ ಪ್ರಯಾಣಿಕರ ಅನುಕೂಲಕ್ಕಾಗಿ ಕಂಟೋನ್ಮೆಂಟ್‌ನಿಂದಲೇ ವಂದೇಭಾರತ್ ರೈಲು ಸಂಚರಿಸುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

'ಜನಪ್ರತಿನಿಧಿಗಳು, ಅಧಿಕಾರಿಗಳ ನಿರ್ಲಕ್ಷ್ಯ'

ರಾಜ್ಯದ ಪ್ರಯಾಣಿಕರಿಗೆ ಅನುಕೂಲವಾಗದ ತಮಿಳುನಾಡು, ಕೇರಳದ ಪ್ರಯಾಣಿಕರಿಗೆ ಪ್ರಯೋಜನವಾಗುವ ಎರ್ನಾಕುಲಂ-ಬೆಂಗಳೂರು ವಂದೇ ಭಾರತ್ ರೈಲಿಗೆ ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಆದರೆ, ಕನ್ನಡಿಗರಿಗೆ ಅನುಕೂಲವಾಗುವ ಕಲಬುರಗಿ–ಬೆಂಗಳೂರು ವಂದೇಭಾರತ್ ರೈಲಿಗೆ ಕಂಟೋನ್ಮೆಂಟ್‌ನಲ್ಲಿ ಅವಕಾಶ ನೀಡಿಲ್ಲ. ಈ ಬಗ್ಗೆ ರೈಲ್ವೆ ಖಾತೆ ರಾಜ್ಯ ಸಚಿವರು, ರೈಲ್ವೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ನೈರುತ್ಯ ರೈಲ್ವೆಗೆ ಈ ರೈಲನ್ನು ಹಸ್ತಾಂತರಿಸಲು ಸೆಂಟ್ರಲ್ ರೈಲ್ವೆ ತಯಾರಿದ್ದರೂ ಈ ಪ್ರಕ್ರಿಯೆ ನಡೆದಿಲ್ಲ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ತಿಳಿಸಿದರು.

ಸುದ್ದಿ 2 ನಿಮಿಷ

ಫ್ಲೆಕ್ಸ್ ತಗುಲಿ ಯುವಕ ಸಾವು

ನೆಲಮಂಗಲ: ಮುಖ್ಯರಸ್ತೆಯ ವಿಭಜಕದ ದೀಪದ ಕಂಬಕ್ಕೆ ಅಳವಡಿಸಿದ್ದ ಫ್ಲೆಕ್ಸ್ ತಗುಲಿ ಬೈಕ್ ಸವಾರ ಮೃತಪಟ್ಟ ಘಟನೆ ಪಟ್ಟಣದಲ್ಲಿ ನಡೆದಿದೆ.

ತೇಜಸ್(27) ಮೃತ ಯುವಕ.

ಪಟ್ಟಣದ ಕೆ.ಇ.ಬಿ ಎದುರು ವಿಭಜಕದ ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಫ್ಲೆಕ್ಸ್ ಸ್ವಲ್ಪ ರಸ್ತೆಯ ಕಡೆ ವಾಲಿದ್ದು, ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದಾಗ ಫ್ಲೆಕ್ಸ್ ಬೆನ್ನಿಗೆ ತಗುಲಿತ್ತು. ಆಗ ನಿಯಂತ್ರಣ ಕಳೆದುಕೊಂಡು ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೇಜಸ್ ಅವರು ರಸ್ತೆಗೆ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ.

ಮೃತ ತೇಜಸ್ ಅವರು ಜರ್ಮನಿಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದರು. ಕಳೆದವಾರ ನೆಲಮಂಗಲಕ್ಕೆ ಬಂದಿದ್ದರು. ಎರಡು ದಿನದ ಹಿಂದೆ ಸ್ನೇಹಿತರೊಬ್ಬರ ಮದುವೆ ಸಮಾರಂಭಕ್ಕೂ ಹೋಗಿಬಂದಿದ್ದರು.

ತುಮಕೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಫ್ಲೆಕ್ಸ್ ತೆರವು ಕಾರ್ಯ ಮೇಲೆ ಬಿದ್ದು ಪ್ರಾಣಾಪಾಯದಿಂದ ಪಾರಾದ ಘಟನೆ ಕೆಲವು ತಿಂಗಳ ಹಿಂದೆ ನಡೆದಿತ್ತು.

ಸ್ಥಳೀಯ ಆಡಳಿತ ಫ್ಲೆಕ್ಸ್‌ಗಳನ್ನು ತೆರವುಗೊಳಿಸಬೇಕು. ಅನಧಿಕೃತವಾಗಿ ಫ್ಲೆಕ್ಸ್‌ಗಳನ್ನು ಅಳವಡಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮೃತ ತೇಜಸ್‌ನ ಸ್ನೇಹಿತ ಸೈಯದ್ ಇರ್ಫಾನ್ ಆಗ್ರಹಿಸಿದ್ದಾರೆ.

ಅಪಘಾತ: ಮಹಿಳೆ ಸಾವು

ಬೆಂಗಳೂರು: ಹುಳಿಮಾವು ಬಳಿಯ ಸರಸ್ವತಿಪುರದಲ್ಲಿ ದ್ವಿಚಕ್ರ ವಾಹನ ಹಾಗೂ ಟಿಪ್ಪರ್ ವಾಹನಗಳ ನಡುವೆ ಗುರುವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಮಹಿಳೆ ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಶಾಂತಮ್ಮ(46) ಮೃತ ಮಹಿಳೆ.

ನಗರದ ಚಿಕ್ಕಬೇಗೂರಿನಲ್ಲಿ ಶಾಂತಮ್ಮ ಅವರು ನೆಲಸಿದ್ದರು. ಖಾಸಗಿ ಕಂಪನಿಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದ ಅವರು ಸಹೋದ್ಯೋಗಿಯ ಜತೆಗೆ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸರಸ್ವತಿಪುರದ ಆರ್‌ಟಿಒ ಕಚೇರಿ ರಸ್ತೆಯಲ್ಲಿ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ವಾಹನವು ಹಿಂಬದಿಯಿಂದ ಬಂದು ಡಿಕ್ಕಿ ಹೊಡೆದಿದೆ. ಆಗ ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದ ಶಾಂತಮ್ಮ ಅವರ ಮೇಲೆ ಟಿಪ್ಪರ್ ಚಕ್ರಗಳು ಹರಿದಿವೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಟಿಪ್ಪರ್ ಚಾಲಕನ ಅಜಾಗರೂಕತೆ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ. ಆತನನ್ನು ಬಂಧಿಸಿ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಹುಳಿಮಾವು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾಭಿಮಾನ, ಸ್ವಂತಿಕೆಯ ಜೆಡಿಎಸ್: ಟಿ.ಎ ಶರವಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇವಲ ರಾಜಕಾರಣಕ್ಕಾಗಿ ಜನತಾ ಪರಿವಾರ ಹುಟ್ಟಿದ್ದಲ್ಲ. ದೇಶದಲ್ಲಿ ಕಾಂಗ್ರೆಸ್ ಸರ್ವಾಧಿಕಾರ ರಾಜಕಾರಣದ ವಿರುದ್ಧ ಸೆಡ್ಡು ಹೊಡೆದು ಹೋರಾಟದ ಹೊಸ ಇತಿಹಾಸ ಬರೆದ ದಾಖಲೆ ಜನತಾ ಪರಿವಾರದ್ದು' ಎಂದು ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಹೇಳಿದ್ದಾರೆ.

ಟಿ.ಎ.ಶರವಣ

ಜೆಡಿಎಸ್ ರಜತ ಮಹೋತ್ಸವ ಆಚರಣೆಯ ಹಿನ್ನಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಕ್ಷ ಬೆಳೆದು ಬಂದ ಹಾದಿ ಹಾಗೂ ಗುರಿಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದ್ದಾರೆ.

'ತುರ್ತು ಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಪರಿಸ್ಥಿತಿ ಬಂದಾಗ ಜನತಾ ಪರಿವಾರ ಹುಟ್ಟು ಪಡೆಯಿತು. ಲೋಕನಾಯಕ ಜಯಪ್ರಕಾಶ ನಾರಾಯಣ್ ಅವರ ಸೈದ್ಧಾಂತಿಕ ಹೋರಾಟದ ಫಲವಾಗಿ ಜನತಾ ಪರಿವಾರ ಪರ್ಯಾಯ ರಾಜಕಾರಣದ ಶಕ್ತಿಯಾಗಿ ಬೆಳೆದಿದೆ' ಎಂದರು.

'ಚಳವಳಿ, ಹೋರಾಟದ ಮೂಲಕ ಪ್ರವರ್ಧಮಾನಕ್ಕೆ ಬಂದಿರುವುದು ಜನತಾದಳ, ರಾಷ್ಟ್ರೀಯ ಜನತಾ ದಳ, ಜೆಡಿಯು, ಸಮಾಜವಾದಿ ಪಕ್ಷ ಎಲ್ಲವೂ ಇದೇ ಜನತಾ ಪರಿವಾರದ ಪಕ್ಷಗಳೇ ಆಗಿವೆ. ಇವೆಲ್ಲ ಪ್ರಮುಖ ಪಕ್ಷಗಳ ಹುಟ್ಟಿಗೆ ಕರ್ನಾಟಕ ನೆಲವಾಗಿದೆ. ಇಂಥ ಕರ್ನಾಟಕದಲ್ಲಿ ಜನತಾ ಪರಿವಾರದಿಂದ ಗುಂಪುಗಳು ಕಾಂಗ್ರೆಸ್, ಬಿಜೆಪಿಗೆ ವಲಸೆ ಹೋದರೂ ತನ್ನದೇ ಆದ ಹೊಸ ರಾಜಕೀಯ ಶಕ್ತಿಯಾಗಿ ಚೈತನ್ಯ ಪಡೆದು ಪ್ರಾದೇಶಿಕ ಶಕ್ತಿಯಾಗಿ ಎಚ್.ಡಿ. ದೇವೇಗೌಡರ ಸಾರಥ್ಯದಲ್ಲಿ ತಲೆ ಎತ್ತಿ ನಿಂತ ಸ್ವಾಭಿಮಾನದ ಪಕ್ಷವೇ ಜಾತ್ಯತೀತ ಜನತಾ ದಳ' ಎಂದು ಬಣ್ಣಿಸಿದ್ದಾರೆ.

'ದೇವೇಗೌಡರು ದಿಟ್ಟತನದಿಂದ ಪಾದಯಾತ್ರೆಗಳ ಮೂಲಕ ಕಟ್ಟಿದ ಪಕ್ಷ ಜೆಡಿಎಸ್. ರೈತ ಮಕ್ಕಳಿಗೆ ಈ ರಾಜ್ಯದ ಸಾಮಾನ್ಯ ಜನರಿಗೆ ಅವರ ಹಕ್ಕುಗಳಿಗೆ, ಬದುಕುಗಳಿಗೆ ಧಕ್ಕೆ ಬಂದಾಗ ಅವರು ಹೋರಾಡಿದ್ದಾರೆ. ಗೆಜ್ಜಲಗೆರೆ, ಕುಣಿಗಲ್ ಗೋಲಿಬಾರ್, ವಿಠಲೇನಹಳ್ಳಿ ಹೋರಾಟ ಇರಬಹುದು, ಪ್ರಾದೇಶಿಕ ಪಕ್ಷದ ನಾಯಕರಾಗಿ ಪ್ರಧಾನಿ ಪಟ್ಟ ಅಲಂಕರಿಸುವ ಮಟ್ಟಿಗೆ ಬೆಳೆದರು' ಎಂದು ತಿಳಿಸಿದ್ದಾರೆ.

'ದೇವೇಗೌಡರು ಹಾಕಿ ಕೊಟ್ಟ ಹೆಜ್ಜೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಸಾರಥ್ಯದಲ್ಲಿ ಜೆಡಿಎಸ್ ಜನಮಾನಸದ ಪಕ್ಷವಾಗಿ ಹೊರ ಹೊಮ್ಮಿದೆ. ಬದಲಾದ ರಾಜಕೀಯ ಸ್ಥಿತಿಯಲ್ಲಿ ಕುಮಾರಣ್ಣ ಪಕ್ಷಕ್ಕೆ, ನಾಯಕರಿಗೆ, ಕಾರ್ಯಕರ್ತರಿಗೆ ಪೂರಕವಾದ ರಾಜಕೀಯ ನಿರ್ಧಾರ ಕೈಗೊಂಡು ಪಕ್ಷದ ಸಾರಥಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಪೊರೆಗಳನ್ನು, ವೈಫಲ್ಯಗಳನ್ನು ಕಳಚುತ್ತಾ ಆ ಪಕ್ಷದ ಗುಲಾಮಗಿರಿ ರಾಜಕಾರಣದ ವಿರುದ್ಧ ಈ ರಜತ ಮಹೋತ್ಸವ ಸಂದರ್ಭದಲ್ಲಿ ಬಲಿಷ್ಠ ನಾಯಕರಾಗಿ ಹೋರಾಟದ ಹೆಜ್ಜೆಗಳನ್ನು ದಾಖಲಿಸುತ್ತಾ ಮುಂದೆ ಹೋಗಿದ್ದಾರೆ' ಎಂದಿದ್ದಾರೆ.

ಕಾರ್ಮಿಕ ಸಂಹಿತೆ ಜಾರಿಗೆ ವಿರೋಧ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು, ಕಾರ್ಮಿಕರ ಹಕ್ಕು ಹಾಗೂ ರಕ್ಷಣೆಯನ್ನು ಮೊಟಕುಗೊಳಿಸಲಿದೆ ಎಂದು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ) ಹೇಳಿದೆ.

ವಜಾ ಮತ್ತು ಮುಚ್ಚುವಿಕೆ ಸುಲಭಗೊಳಿಸುವ ಕೈಗಾರಿಕಾ ಸಂಬಂಧಗಳ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ, ವೇತನ ಸಂಹಿತೆ, ವ್ಯವಹಾರ ಸುಲಭಗೊಳಿಸುವ ಸಂಹಿತೆಗಳು, ಕಾರ್ಮಿಕರ ವಿರೋಧಿಯಾಗಿದ್ದು, ಕಾರ್ಪೊರೇಟ್ ವಲಯಕ್ಕೆ ಅನುಕೂಲ ಮಾಡಿಕೊಡುವಂತಿದೆ ಎಂದು ಸೆಂಟರ್‌ನ ರಾಜ್ಯ ಅಧ್ಯಕ್ಷ ಕೆ.ಸೋಮಶೇಖರ್, ರಾಜ್ಯ ಕಾರ್ಯದರ್ಶಿ ಕೆ.ಸೋಮಶೇಖರ್ ಯಾದಗಿರಿ ಆರೋಪಿಸಿದ್ದಾರೆ.

ಮತ್ಸ್ಯ ಮೇಳ

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ವಿಶ್ವ ಮೀನುಗಾರಿಕೆ ದಿನಾಚರಣೆ ಅಂಗವಾಗಿ ಮೀನುಗಾರಿಕೆ ಇಲಾಖೆಯು ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮತ್ಸ್ಯ ಮೇಳದಲ್ಲಿ ವಿವಿಧ ಬಗೆಯ ಮೀನುಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು

ಕಂದಾಯ ಪಾವತಿ ಮರುಪರಿಶೀಲನೆ

ಇಂದಿರಾ ನಗರ 100 ಅಡಿ ರಸ್ತೆಯಲ್ಲಿ ಸರ್ವೆ: 49 ವಾಣಿಜ್ಯ ಕಟ್ಟಡಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 100 ಅಡಿ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆ ಪಾವತಿಯ ಮರುಪರಿಶೀಲನೆ ಹಾಗೂ ಪರಿಷ್ಕರಣೆಯ ಸರ್ವೆ ನಡೆಸಲಾಗಿದೆ. ವ್ಯತ್ಯಾಸ ಕಂಡುಬಂದ ಸ್ವತ್ತುಗಳಿಗೆ ನೋಟಿಸ್ ನೀಡಲಾಗಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಹಲವು ಕಟ್ಟಡಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ಕೇಂದ್ರ ನಗರ ಪಾಲಿಕೆಯ ಎಲ್ಲ ಕಂದಾಯ ವಿಭಾಗಗಳ 9 ಕಂದಾಯ ಅಧಿಕಾರಿಗಳ ತಂಡದಿಂದ 120ಕ್ಕೂ ಹೆಚ್ಚು ಸಿಬ್ಬಂದಿ 197 ಸ್ವತ್ತುಗಳ ಕಂದಾಯ ಪರಿಶೀಲನೆ ನಡೆಸಿದ್ದು, 147 ಸ್ವತ್ತುಗಳ ತೆರಿಗೆ ಸರಿಯಾಗಿದೆ. 49 ಕಟ್ಟಡಗಳ ಆಸ್ತಿ ತೆರಿಗೆಯಲ್ಲಿ ವ್ಯತ್ಯಾಸ ಕಂಡು ಬಂದಿದೆ. ಹೀಗಾಗಿ ಆ ಕಟ್ಟಡಗಳ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಹೇಳಿದರು.

ಜೀವನ್‌ಬಿಮಾ ನಗರ ಕಂದಾಯ ವಿಭಾಗ ಹಾಗೂ ದೊಮ್ಮಲೂರಿನ ಕಂದಾಯ ವಿಭಾಗಗಳ ಸ್ವತ್ತುಗಳ ಕಂದಾಯ ಪಾವತಿಯ ಮರುಪರಿಶೀಲನೆ ಮಾಡಿದಾಗ ₹7.21 ಕೋಟಿ ವ್ಯತ್ಯಾಸ ಕಂಡು ಬಂದಿದೆ. 15 ದಿನಗಳ ಕಾಲಾವಧಿಯಲ್ಲಿ ಸ್ವತ್ತಿನ ಮಾಲೀಕರು ಹಿಂಬರಹ ನೀಡಬೇಕು. ಆಕ್ಷೇಪಣೆಗಳು ಇಲ್ಲದಿದ್ದರೆ ಬೇಡಿಕೆ ನೋಟಿಸ್ ನೀಡಿ ಬಾಕಿ ತೆರಿಗೆಯನ್ನು ನಿಯಮಾನುಸಾರ ವಸೂಲಿ ಮಾಡಲಾಗುವುದು ಎಂದರು.

ಇಂದಿರಾನಗರದ 100 ಅಡಿ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಗಳ ಕಂದಾಯ ಪಾವತಿಯ ಮರುಪರಿಶೀಲನೆಯನ್ನು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಮತ್ತು ಅಧಿಕಾರಿಗಳು ನಡೆಸಿದರು

ವಿಧಾನಸೌಧ ಎದುರು ಗಲಾಟೆ: 11 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಎದುರಿನ 'ನಮ್ಮ ಮೆಟ್ರೊ' ನಿಲ್ದಾಣದ ಬಳಿ ಎರಡು ಗುಂಪುಗಳ ಯುವಕರ ಮಧ್ಯೆ ನಡೆದಿದ್ದ ಗಲಾಟೆಗೆ ಸಂಬಂಧಿಸಿದಂತೆ ನೇಪಾಳದ 11 ಯುವಕರನ್ನು ಕೇಂದ್ರ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ಉಪೇಂದ್ರ ಚುಲ್‌ಗೈ, ಗೋಪಾಲ್, ಮನೋಜ್ ಶಾಹಿ, ಚಾವಿ ಖಾತ್ರಿ, ಸುದೀಪ್, ದಿನೇಶ್ ಕನ್ವಾರ್, ಧರ್ಮೇಂದ್ರ , ರಾಹುಲ್ ಸಿಂಗ್, ನಿರ್ಮಲ್, ಮನೋಜ್ ಕತಾಯತ್, ಪರ್ಶ್ ಬೋರಾ ಬಂಧಿತ ಆರೋಪಿಗಳು.

ಆರೋಪಿಗಳು ಕೆಲವು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದರು. ಹತ್ತು ದಿನಗಳ ಹಿಂದೆ ವಿಧಾನಸೌಧದ ಬಳಿಗೆ ಬಂದಿದ್ದಾಗ ಎರಡು ಗುಂಪುಗಳ ಮಧ್ಯೆ ಗಲಾಟೆ ಆಗಿತ್ತು. ಗಲಾಟೆಯ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಆ ದೃಶ್ಯ ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಗುರುತಿಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪ್ರಕರಣದ ತನಿಖೆಗೆ ಕೇಂದ್ರ ವಿಭಾಗದ ಎಸಿಪಿ ನೇತೃತ್ವದಲ್ಲಿ ಕಬ್ಬನ್‌ಪಾರ್ಕ್, ವಿಧಾನಸೌಧ ಠಾಣೆಯ ಸಿಬ್ಬಂದಿಯ ನೇತೃತ್ವದಲ್ಲಿ ಐದು ವಿಶೇಷ ತಂಡ ರಚಿಸಲಾಗಿತ್ತು.

'ಒಂದು ಗುಂಪಿನ ಯುವಕರಿಗೆ ರೀಲ್ಸ್ ಮಾಡುವ ಅಭ್ಯಾಸವಿತ್ತು. ಕಬ್ಬನ್‌ಪಾರ್ಕ್ ಹಾಗೂ ವಿಧಾನಸೌಧ–ಹೈಕೋರ್ಟ್ ಎದುರು ಬಂದು ರೀಲ್ಸ್ ಮಾಡುತ್ತಿದ್ದರು. ಈ ತಂಡ ಮಾಡುತ್ತಿದ್ದ ರೀಲ್ಸ್‌ಗಳಿಗೆ ನೇಪಾಳದಲ್ಲಿ ಹೆಚ್ಚು ಫಾಲೊವರ್ಸ್‌ಗಳು ಇದ್ದರು. ಮೊಬೈಲ್ ವಿಚಾರಕ್ಕೆ ಕೆಲವು ದಿನಗಳ ಹಿಂದೆ ಮತ್ತೊಂದು ತಂಡದ ಯುವಕರ ಗುಂಪಿನ ಮಧ್ಯೆ ಗಲಾಟೆ ನಡೆದಿತ್ತು. ಇದೇ ವಿಚಾರವಾಗಿ ವಿಧಾನಸೌಧದ ಎದುರು ಎರಡು ತಂಡಗಳು ಪರಸ್ಪರ ಗಲಾಟೆ ಮಾಡಿಕೊಂಡಿದ್ದರು. ಇದಕ್ಕೂ ಮುನ್ನ ಕಬ್ಬನ್‌ಪಾರ್ಕ್‌ನಲ್ಲೂ ಯುವತಿಯ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

ದರೋಡೆ: ಕಾನ್‌ಸ್ಟೆಬಲ್, ಮಾಜಿ ಉದ್ಯೋಗಿಯೇ ಸೂತ್ರಧಾರರು

ಮೊದಲ ಪುಟದಿಂದ...

ಸಂಚಿಗೆ ಯುವಕರ ಬಳಕೆ: 'ಅಣ್ಣಪ್ಪ ನಾಯ್ಕ ಗೋವಿಂದಪುರ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದಾರೆ. ಈ ಹಿಂದೆ ಬಾಣಸವಾಡಿ ಪೊಲೀಸ್ ಠಾಣೆಯ ಅಪರಾಧ ಪತ್ತೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನಂತರ, ಅವರನ್ನು ಹೊಯ್ಸಳ ಗಸ್ತು ವಾಹನಕ್ಕೆ ನಿಯೋಜಿಸಲಾಗಿತ್ತು. ಗಸ್ತು ವೇಳೆ ಕ್ಸೇವಿಯರ್ ಹಾಗೂ ರವಿ ಅವರ ಪರಿಚಯವಾಗಿತ್ತು. ಪ್ರತಿನಿತ್ಯ ಮೂವರೂ ಭೇಟಿಯಾಗಿ ಚರ್ಚಿಸುತ್ತಿದ್ದರು. ಕ್ಸೇವಿಯರ್ ಅವರು ಸಿಎಂಎಸ್ ಏಜೆನ್ಸಿ ವಾಹನದಲ್ಲಿ ಹಣ ರವಾನೆಯ ಬಗ್ಗೆ ಹೇಳಿಕೊಂಡಿದ್ದರು. ಟ್ರಾವೆಲ್ ಏಜೆನ್ಸಿ ನಡೆಸಿ ನಷ್ಟಕ್ಕೆ ಒಳಗಾಗಿದ್ದೇನೆ ಎಂದೂ ರವಿ ಅಳಲು ತೋಡಿಕೊಂಡಿದ್ದರು. ಮೂವರು ಸೇರಿಕೊಂಡು ಕಲ್ಯಾಣನಗರ, ಕಮ್ಮನಹಳ್ಳಿಯ ಯುವಕರನ್ನು ಬಳಸಿಕೊಂಡು ದರೋಡೆ ನಡೆಸಲು ಸಂಚು ರೂಪಿಸಿದ್ದರು ಎಂಬುದು ಈಗ ನಡೆದಿರುವ ತನಿಖೆಯಿಂದ ಪತ್ತೆಯಾಗಿದೆ. ಅಣ್ಣಪ್ಪ ನಾಯ್ಕ, ಕ್ಸೇವಿಯರ್ ಹಾಗೂ ರವಿ ಅವರ ಪತ್ನಿಯನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ತನಿಖೆ ಸ್ವರೂಪ ತಿಳಿಸಿದ್ದ ಕಾನ್‌ಸ್ಟೆಬಲ್: 'ಯಾವ ಸಮಯದಲ್ಲಿ ದರೋಡೆ ನಡೆಸಬೇಕು, ದರೋಡೆ ನಂತರ ಪೊಲೀಸರಿಂದ ಹೇಗೆ ಪಾರಾಗಬೇಕು? ಪೊಲೀಸರ ತನಿಖೆ ಯಾವ ರೀತಿ ಸಾಗುತ್ತದೆ ಎಂಬ ವಿಚಾರವನ್ನು ಅಣ್ಣಪ್ಪ, ಹುಡುಗರಿಗೆ ತಿಳಿಸಿ ಸಂಚು ರೂಪಿಸಿದ್ದರು. ಅಲ್ಲದೇ ಸಿ.ಸಿ. ಟಿ.ವಿ ಕ್ಯಾಮೆರಾವಿಲ್ಲದ ಸ್ಥಳಗಳಲ್ಲಿ ಕೃತ್ಯ ಎಸಗಬೇಕು ಎಂಬುದನ್ನೂ ಹೇಳಿಕೊಟ್ಟಿದ್ದರು. ಕಾನ್‌ಸ್ಟೆಬಲ್ ಸೂಚನೆಯಂತೆ ಹುಡುಗರು, ₹ 7.11 ಕೋಟಿ ದರೋಡೆ ನಡೆಸಿದ್ದಾರೆ. ಅಲ್ಲದೆ,

ದರೋಡೆ ಪ್ರಕರಣ ಸಂಬಂಧ ಮಹತ್ವದ ಸುಳಿವು ಸಿಕ್ಕಿದೆ. ಹೆಚ್ಚಿನ ಮಾಹಿತಿ ಬಹಿರಂಗ ಪಡಿಸಿದರೆ ಉಳಿದವರು ತಲೆಮರೆಸಿಕೊಳ್ಳುವ ಸಾಧ್ಯತೆ ಇದೆ
ಜಿ.ಪರಮೇಶ್ವರ, ಗೃಹ ಸಚಿವ

ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಮಾಜಿ ಉದ್ಯೋಗಿಗಳು ಕೃತ್ಯಕ್ಕೆ ಬೆಂಬಲ ನೀಡಿರುವುದಕ್ಕೆ ಸುಳಿವು ಸಿಕ್ಕಿದೆ. ದರೋಡೆ ನಡೆಸಿದ ಸ್ವಲ್ಪ ಹಣವನ್ನು ರಾಜ್ಯದ ಗಡಿಭಾಗದಲ್ಲಿ ಬಚ್ಚಿಟ್ಟು ತಂಡ ಪರಾರಿಯಾಗಿದೆ' ಎಂದು ಮೂಲಗಳು ಹೇಳಿವೆ.

ದರೋಡೆ ಹಣದ ಆಸೆಗಾಗಿ ಸಂಸ್ಥೆಯ ಗೋಪ್ಯ ಮಾಹಿತಿಯನ್ನು ಹಂಚಿಕೊಂಡ ಆರೋಪದ ಮೇಲೆ ಸಿಎಂಎಸ್ ಏಜೆನ್ಸಿಯ ಕೆಲವರನ್ನು ವಶಕ್ಕೆ ಪಡೆಯಲಾಗಿದೆ. ಸಿಎಂಎಸ್ ಸಂಸ್ಥೆಯ ವಾಹನದ ಎರಡು ಬದಿಯಲ್ಲೂ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಆದರೆ, ಈ ವಾಹನಕ್ಕೆ ಅಳವಡಿಸಿದ್ದ ಸಿ.ಸಿ. ಟಿ.ವಿ ಕ್ಯಾಮೆರಾವನ್ನು ತೆಗೆಯಲಾಗಿದೆ. ಹೀಗಾಗಿ ಸಿಎಂಎಸ್ ಸಂಸ್ಥೆಯ ಭದ್ರತಾ ವಿಭಾಗದ ಸಿಬ್ಬಂದಿಯನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'ಅಣ್ಣಪ್ಪ ನಾಯ್ಕ ಅವರು ಕುಂಬಳಗೋಡು ಹಾಗೂ ಭಾರತೀನಗರ ಪೊಲೀಸ್ ಠಾಣೆಯಲ್ಲೂ ಕೆಲಸ ಮಾಡಿದ್ದರು. ಅವರ ಮೇಲೆ ಸಾಕಷ್ಟು ಆರೋಪಗಳಿವೆ. ಕ್ರಿಕೆಟ್ ಬುಕಿಗಳಿಗೆ ಬೆದರಿಕೆ ಹಾಕಿ ಹಣ ವಸೂಲಿ, ಜೈಲಿನಿಂದ ಬಿಡುಗಡೆಯಾದ ಹುಡುಗರನ್ನು ಬಳಸಿಕೊಂಡು ಅಪರಾಧ ಕೃತ್ಯ ಎಸಗಿರುವುದು ಪತ್ತೆಯಾಗಿದೆ' ಎಂದು ಮೂಲಗಳು ಹೇಳಿವೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220436, ಇಮೇಲ್: aigrcomp@karnataka.gov.in
ಸಂಖ್ಯೆ: Comp/65/2025-26 ದಿನಾಂಕ: 19–11–2025

ಟೆಂಡರ್ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ "ಐಟಿ ಮಾನವ ಸಂಪನ್ಮೂಲವನ್ನು ಒದಗಿಸಲು ಏಜೆನ್ಸಿಯನ್ನು ಆಯ್ಕೆ ಮಾಡಲು" ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 19–12–2025ರ ಸಂಜೆ 5.00 ಗಂಟೆಯವರಗೂ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ) ಮತ್ತು ಯೋಜನಾ ನಿರ್ದೇಶಕರು, ಕಾವೇರಿ (ಇ–ಮೇಲ್: aigrcomp@karnataka.gov.in) ಇವರನ್ನು ಸಂಪರ್ಕಿಸಿ.

ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು
DIPR/CP/YC/3957/2025-26

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ಮೈಸೂರು ಜಿಲ್ಲೆ. ದೂ: 08227–261232
ಇ–ಮೇಲ್: itstaff_ulb_tnarasipura@yahoo.com
ವೆಬ್‌ಸೈಟ್: www.tmarasipuratown.gov.in
ಸಂಖ್ಯೆ: ಪುಸ/ತಿನಪುರ/ಕಿಅ/ಟೆಂಡರ್‌ಎಸ್‌ಎಫ್‌ಸಿ&ಸಾ.ಅ./2025–26 ದಿನಾಂಕ: 18.11.2025

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ ಮತ್ತು ಪುರಸಭೆ ಸಾಮಾನ್ಯ ನಿಧಿಯಡಿ **ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿನ ಮುಖ್ಯ ವೃತ್ತಗಳಲ್ಲಿ ಹಾಗೂ ಮುಖ್ಯ ರಸ್ತೆಗಳಲ್ಲಿ** ಸಿ.ಸಿ **ಕ್ಯಾಮೆರಾ ಅಳವಡಿಸಲು** ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 1ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ KW-1, KG-1 & KW-3 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು http://kppp.karnataka.gov.inನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜ್‌ನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1) ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 06.12.2025 ಸಂಜೆ 5:30 ಗಂಟೆವರೆಗೆ.** 2) ಟೆಂಡರ್ ತೆರೆಯುವ **ದಿನಾಂಕ: 08.12.2025 ಬೆಳಿಗ್ಗೆ 11:00 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ.	ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	DMA/2025-26/OW/WORK_INDENT51619	5.00	12500
2.	DMA/2025-26/OW/WORK_INDENT51618	5.00	12500
3.	DMA/2025-26/OW/WORK_INDENT51617(SC)	5.00	6250
4.	DMA/2025-26/OW/WORK_INDENT51616 (ST)	5.00	6250
5.	DMA/2025-26/OW/WORK_INDENT51615 (II-A)	5.00	6250
6.	DMA/2025-26/OW/WORK_INDENT51614	5,00	12500
7.	DMA/2025-26/OW/WORK_INDENT47943/CALL-2	60.00	101700
8.	DMA/2025-26/OW/WORK_INDENT47947/CALL-2	55.00	46650
9.	DMA/2025-26/RD/WORK_INDENT48007 (Cat-1)	70.00	59350
10.	DMA/2025-26/IND5606	15.00	37500
11.	DMA/2024-25/EL/WORK_INDENT 23790/CALL-3	35.00	59180.00

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು http://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಆಡಳಿತಾಧಿಕಾರಿ, ಪುರಸಭೆ, ತಿ.ನರಸೀಪುರ
DIPR/MYS/1266/SA/2025-26
ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.16/ಐ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052, ದೂ: 080–2226 0932
E-mail: admnkfcsc123@yahoo.com
ಸಂಖ್ಯೆ: ಕಆನಾಸನಿನಿ/ಆಡಳಿತ/ನೇ.ನೇ/746/2025–26/ ದಿನಾಂಕ: 21.11.2025

ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಕರ್ನಾಟಕ ಆಹಾರ ಮತ್ತು ನಾಯಿಗರಿಕ ಸರಬರಾಜು ನಿಗಮ ನಿಯಮಿತದ ಕಿರಿಯ ಸಹಾಯಕರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ 1:3 ಅಂತಿಮ ಪಟ್ಟಿಯನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, 1:3 ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ದಿನಾಂಕ 01, 02 ಮತ್ತು 03 ಡಿಸೆಂಬರ್ 2025 ರಂದು ನಡೆಸಲಿದ್ದು, ಸ್ಥಳ, ದಿನಾಂಕ ಹಾಗೂ ಸಮಯದ ಮಾಹಿತಿಗಾಗಿ ನಿಗಮದ ವೆಬ್ ಸೈಟ್ https://kfcsc.karnataka.gov.in ಅನ್ನು ವೀಕ್ಷಿಸುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029. ದೂ.: 080–29753354/56
ಇ–ಮೇಲ್: karbuildworkerswelfare@gmail.com
ಸಂಖ್ಯೆ: ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ/2025–26/ಕಾಮಗಾರಿ_ಪ್ರಕಟಣೆ ದಿನಾಂಕ: 21.11.2025

ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಟೆಂಡರನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಕೆಳಗೆ ತಿಳಿಸಿರುವ ಟೆಂಡರ್‌ಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ.

(1) **ಕಾಮಗಾರಿಯ ಹೆಸರು ಮತ್ತು ಇಂಡೆಂಟ್ ಸಂಖ್ಯೆ:** ಪ್ಯಾಕೇಜ್ (ಬಿ) ಮೈಸೂರು ವಿಭಾಗ ಕ್ಲಸ್ಟರ್ – ಶ್ರಮಿಕ ವಸತಿ ಶಾಲೆ (6ನೇ ತರಗತಿಯಿಂದ 12ನೇ ತರಗತಿವರೆಗೆ) ನಿರ್ಮಿಸುವ ಕಾಮಗಾರಿ – **KBOCWWB/2025-26/BD/WORK_INDENT32/ CALL-2 (ಅಲ್ಪಾವಧಿ ಟೆಂಡರ್). ಕಾಮಗಾರಿಯ ಅಂದಾಜು ಮೊತ್ತ** (ರೂ. ಲಕ್ಷಗಳಲ್ಲಿ): 20100.10, ಇ.ಎಂ.ಡಿ. (ರೂ. ಲಕ್ಷಗಳಲ್ಲಿ): 201.00. ಕಾಮಗಾರಿ ಪೂರ್ಣಗೊಳಿಸುವ ನಿಗದಿತ ಅವಧಿ: **18 ತಿಂಗಳು (ಮಳೆಗಾಲ ಸೇರಿ).** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **15.12.2025 ರಂದು ಸಂಜೆ 4.00 ಗಂಟೆಯವರೆಗೆ.**

(2) **ಕಾಮಗಾರಿಯ ಹೆಸರು ಮತ್ತು ಇಂಡೆಂಟ್ ಸಂಖ್ಯೆ:** ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸೋಮೇಶ್ವರ ಗ್ರಾಮದ ಸ.ನಂ 92 ರಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಹಂಚಿಕೆಯಾಗಿದ್ದು ಸದರಿ ಭೂಮಿಗೆ ಕಾಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿ – **KBOCWWB/2025-26/BD/WORK_INDENT38. ಕಾಮಗಾರಿಯ ಅಂದಾಜು ಮೊತ್ತ** (ರೂ. ಲಕ್ಷಗಳಲ್ಲಿ): 123.57, ಇ.ಎಂ.ಡಿ. (ರೂ. ಲಕ್ಷಗಳಲ್ಲಿ): 2.00. ಕಾಮಗಾರಿ ಪೂರ್ಣಗೊಳಿಸುವ ನಿಗದಿತ ಅವಧಿ: **06 ತಿಂಗಳು (ಮಳೆಗಾಲ ಸೇರಿ).** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **08.12.2025 ರಂದು ಸಂಜೆ 4:00 ಗಂಟೆಯವರೆಗೆ.**

(3) **ಕಾಮಗಾರಿಯ ಹೆಸರು ಮತ್ತು ಇಂಡೆಂಟ್ ಸಂಖ್ಯೆ:** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಹೊರಗುತ್ತಿಗೆ ಮೂಲಕ ಮಾಸಿಕ ಆಧಾರದ ಮೇಲೆ A/C ವಾಹನಗಳನ್ನು ಒದಗಿಸುವ ಏಜೆನ್ಸಿಯ ಆಯ್ಕೆ ಟೆಂಡರ್. – **KBOCWWB/2025-26/SE0149/CALL-2 (ಅಲ್ಪಾವಧಿ ಟೆಂಡರ್). ಕಾಮಗಾರಿಯ ಅಂದಾಜು ಮೊತ್ತ** (ರೂ. ಲಕ್ಷಗಳಲ್ಲಿ): 96.00, ಇ.ಎಂ.ಡಿ. (ರೂ. ಲಕ್ಷಗಳಲ್ಲಿ): 1.92. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **29.11.2025 ರಂದು ಸಂಜೆ 5:00 ಗಂಟೆಯವರೆಗೆ.**

ಟೆಂಡರ್ ದಾಖಲೆಯ ವೆಚ್ಚ (ರೂ. ಗಳಲ್ಲಿ): ಕೆ.ಪಿ.ಪಿ. ಪೋರ್ಟಲ್‌ನ ಪ್ರಕಾರ, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ. ಪೋರ್ಟಲ್ **www.kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಂಟಿ ಕಾರ್ಯದರ್ಶಿ, ಕ.ಕ.&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಎಲ್‌ಸಿ/3973/2025–26

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com
ಸಂಖ್ಯೆ: ಮಾ.ನ.ಕಾ/ತಾ.ಶಾ/33/2025–26 ದಿನಾಂಕ: 21–11–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

DULT (Directorate of Urban Land Transport) ಅನುದಾನದಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೋಕ್ಯೂರ್‌ಮೆಂಟ್ ವೇದಿಕಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಗುತ್ತಿಗೆದಾರರು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಇಂಡೆಂಟ್ ಸಂಖ್ಯೆ: **DMA/2025-26/RD/WORK_INDENT51346.**

ಟೆಂಡರ್ ದಿನಾಂಕದ ವಿವರಗಳು: 1) ಪೂರ್ವ ಬಿಡ್ ಸಭೆ ದಿನಾಂಕ: 25–11–2025 ಬೆಳಗ್ಗೆ 11.00 ಗಂಟೆಗೆ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29–11–2025 ಸಂಜೆ 5.30 ಗಂಟೆಯವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01–12–2025ರ ಬೆಳಗ್ಗೆ 11.00 ಗಂಟೆಗೆ. 4) ಯಾವುದೇ ದಿನಾಂಕಗಳಲ್ಲಿ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳನ್ನು ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ
ವಾಸಾಸಂಇ/ವಾಪ್ರ/3963/2025–26

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವೈಟ್‌ಫೀಲ್ಡ್ ವಿಭಾಗ, ಹಗದೂರು ಮುಖ್ಯರಸ್ತೆ, ಸರ್ಕಾರಿ ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು – 560066.
ಸಂಖ್ಯೆ: ಬೆಂಪೂನಪಾ/ಕಾಅ/ಡಬ್ಲ್ಯೂಎಫ್/ಟಿಎನ್/02/2025–26 ದಿನಾಂಕ: 20–11–2025

ತಿದ್ದುಪಡಿ – 1
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ವಿವರ: ವೈಟ್‌ಫೀಲ್ಡ್ ವಿಭಾಗದ ಗುಂಜೂರು – ಕೊಡತಿ ರಸ್ತೆ, ಗೇರ್ ಸ್ಕೂಲ್ ರಸ್ತೆಯಿಂದ 30.00 ಮೀಟರ್ ಸಿಡಿಪಿ ರಸ್ತೆ, ವರ್ತೂರು ನಿಂದ ಮಧುರನಗರ ವಾರ್ಡ್ ಮತ್ತು ನಲ್ಲೂರುಹಳ್ಳಿಯ ನ್ಯೂ ಟೆಂಪಲ್ ರಸ್ತೆಯಲ್ಲಿ ಚರಂಡಿಯ ಸಮಗ್ರ ಅಭಿವೃದ್ಧಿ ಮತ್ತು ಅಸ್ತಿತ್ವದಲ್ಲಿರುವ ರಸ್ತೆಗಳ ಮೇಲ್ಪದರ ಮರು ನಿರ್ಮಾಣ ಕಾಮಗಾರಿ. **(ಆ್ಯಕ್ಷನ್ ಪ್ಲಾನ್ 06, 10, 14, 15)**

ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಬೆಂಪೂನಪಾ/ಕಾಅ/ಡಬ್ಲ್ಯೂಎಫ್/ಟಿಎನ್/02/2025–26, ದಿನಾಂಕ: 13–11–2025.

ತಾಂತ್ರಿಕ ಕಾರಣಗಳಿಂದಾಗಿ ಈ ಮೇಲ್ಕಂಡ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಓದಿಕೊಳ್ಳಲು ಸೂಚಿಸಲಾಗಿದೆ, ಪರಿಷ್ಕೃತ ವೇಳಾಪಟ್ಟಿಯು ಈ ಕೆಳಗಿನಂತಿದೆ.

ಕ್ರ. ಸಂ.	ಟೆಂಡರ್ ವೇಳಾಪಟ್ಟಿ	ಹಿಂದಿನ ಪ್ರಕಟಣೆಯ ಪ್ರಕಾರ	ಮಾರ್ಪಡಿಸಿದ ದಿನಾಂಕಗಳ ಪ್ರಕಾರ
1	ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ	20–11–2025 ರ ಮಧ್ಯಾಹ್ನ 2.00 ಗಂಟೆಯೊಳಗೆ	**29–11–2025**
2	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	20–11–2025 ರ ಮಧ್ಯಾಹ್ನ 3.00 ಗಂಟೆಗೆ	**02–12–2025 ರ ಮಧ್ಯಾಹ್ನ 3.00 ಗಂಟೆಗೆ**
3	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	28–11–2025 ರ ಸಂಜೆ 4.00 ಗಂಟೆವರೆಗೆ	**08–12–2025 ರ ಸಂಜೆ 4.00 ಗಂಟೆವರೆಗೆ**
4	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	29–11–2025 ರ ಸಂಜೆ 4.30 ಗಂಟೆಗೆ	**09–12–2025 ರ ಸಂಜೆ 4.30 ಗಂಟೆಗೆ**
5	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	01–12–2025 ರ ಸಂಜೆ 4.00 ಗಂಟೆಗೆ	**11–12–2025 ರ ಸಂಜೆ 4.00 ಗಂಟೆಗೆ**

ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಇತರೆ ಷರತ್ತು ನಿಬಂಧನೆಗಳಲ್ಲಿ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ವಿಭಾಗ, ಬೆಂಪೂನಪಾ.

ಕೊಲೆ ಅಪರಾಧಿಗೆ ಜಾಮೀನು

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ದೋಷಿ ಶಿಕ್ಷೆಯನ್ನು ಅಮಾನತಿನಲ್ಲಿಟ್ಟ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೊಲೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿಯ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿರುವ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

'ನಗರದ 58ನೇ ಸೆಷನ್ಸ್ ನ್ಯಾಯಾಲಯ ನನಗೆ ವಿಧಿಸಿರುವ ಶಿಕ್ಷೆಗೆ ತಡೆ ನೀಡಬೇಕು ಮತ್ತು ಜಾಮೀನು ನೀಡಬೇಕು' ಎಂದು ಕೋರಿ ಅಪರಾಧಿ ಗಿರೀಶ್ (28) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, 'ಕೃತ್ಯವನ್ನು ಮೂವರು ಅಪರಿಚಿತರು ಬೈಕಿನಲ್ಲಿ ಬಂದು ಎಸಗಿದ್ದರು ಎಂದು ಉಲ್ಲೇಖಿಸಲಾಗಿದೆ. ಆದರೆ, ವೈದ್ಯರು ನುಡಿದ ಸಾಕ್ಷಿಯಲ್ಲಾಗಲೀ ಅಥವಾ ಇತರೆ ಸಾಕ್ಷ್ಯಗಳಲ್ಲಾಗಲೀ ನಿರ್ದಿಷ್ಟವಾಗಿ ಅರ್ಜಿದಾರರ ಹೆಸರಿಲ್ಲ' ಎಂಬ ಅಂಶಗಳ ಮೇಲಿನ ಸವಿವರ ವಾದಾಂಶವನ್ನು ಮಾನ್ಯ ಮಾಡಿದ ನ್ಯಾಯಪೀಠ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತು.

ಪ್ರಕರಣವೇನು?: '2018ರ ಜೂನ್ 26ರ ಮಧ್ಯ ರಾತ್ರಿ 3 ಗಂಟೆ ಸಮಯದಲ್ಲಿ ಸಿದ್ಧಾರ್ಥ ಕೌಶಲ್ ಮತ್ತು ಸ್ನೇಹಿತರು ತಮ್ಮ ರೆಸ್ಟೋರೆಂಟ್‌ನಿಂದ ಕೆಲಸ ಮುಗಿಸಿಕೊಂಡು ಎಲೆಕ್ಟ್ರಾನಿಕ್ ಸಿಟಿ ಕಡೆಗೆ ಹೋಗುತ್ತಿದ್ದರು. ಮಾರ್ಗಮಧ್ಯೆ ಬಿಟಿಎಂ ಲೇಔಟ್ 2ನೇ ಹಂತದಲ್ಲಿರುವ 16ನೇ ಮುಖ್ಯ ರಸ್ತೆಯ 1ನೇ ಕ್ರಾಸ್ ಬಳಿ ಮೂತ್ರ ವಿಸರ್ಜನೆಗೆಂದು ಕಾರಿನಿಂದ ಇಳಿದಿದ್ದರು. ಈ ವೇಳೆ ಬೈಕ್‌ನಲ್ಲಿ ಬರುತ್ತಿದ್ದ ಮೂವರು ಯುವಕರು ಸಿದ್ಧಾರ್ಥ ಕೌಶಲ್ ತೋಳಿಗೆ ತಾಗಿಸಿಕೊಂಡು ಹೋಗಿದ್ದರು. ಇದಕ್ಕೆ ಪ್ರತಿಯಾಗಿ ಸಿದ್ಧಾರ್ಥ ಬೈಕ್ ಸವಾರರಿಗೆ ಸರಿಯಾಗಿ ಓಡಿಸಿಕೊಂಡು ಹೋಗಿ ಎಂದು ಕೂಗಿ ಬುದ್ಧಿ ಹೇಳಿದ್ದರು. ಇದರಿಂದ ಸಿಟ್ಟಿಗೆದ್ದ ಯುವಕರು ಮರದ ದೊಣ್ಣೆಯಿಂದ ಕೌಶಲ್ ತಲೆಗೆ ಹೊಡೆದಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತಾದರೂ ನಂತರ ಮೃತಪಟ್ಟಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ವಿಚಾರಣೆ ನಡೆಸಿದ್ದ ನ್ಯಾಯಾಲಯದ 58ನೇ ನ್ಯಾಯಾಲಯದ ನ್ಯಾಯಾಧೀಶ ಬಾಲಚಂದ್ರ ಎನ್.ಭಟ್ ಅವರು, ಅರ್ಜಿದಾರರಿಗೆ ಭಾರತೀಯ ದಂಡ ಸಂಹಿತೆ-1860ರ ಕಲಂ 302 ಮತ್ತು 34ರ ಅನುಸಾರ ಕೊಲೆ ಆರೋಪಕ್ಕೆ ಜೀವಿತಾವಧಿ ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿ 2025ರ ಅಕ್ಟೋಬರ್ 24ರಂದು ತೀರ್ಪು ನೀಡಿದ್ದರು. ಅರ್ಜಿದಾರ ಏಳೂವರೆ ವರ್ಷಗಳಿಂದ ನ್ಯಾಯಾಂಗ ಬಂಧನದಲ್ಲಿದ್ದರು.

ಪತ್ನಿ ಕೊಲೆ ಆರೋಪಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಪರಪುರುಷನೊಂದಿಗೆ ಅನೈತಿಕ ಸಂಬಂಧ ಹೊಂದಿದ ಅನುಮಾನದ ಮೇಲೆ ಪತ್ನಿಗೆ ಬಲವಂತವಾಗಿ ವಿಷಪ್ರಾಶನ ಮಾಡಿಸಿ ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದ ಯುವಕನಿಗೆ ನಗರದ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.

ಬಂಡೆಬೊಮ್ಮಸಂದ್ರ ನಿವಾಸಿ ಗುಲ್ಶನ್ ಕುಮಾರ್ (26) ಶಿಕ್ಷೆಗೆ ಒಳಗಾಗಿರುವ ಯುವಕ. ಪ್ರಕರಣದ ವಿಚಾರಣೆ ನಡೆಸಿದ್ದ ಬೆಂಗಳೂರು ಗ್ರಾಮಾಂತರ 1ನೇ ಹೆಚ್ಚುವರಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಿದ್ದಲಿಂಗ ಪ್ರಭು ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು ₹20 ಸಾವಿರ ದಂಡ ವಿಧಿಸಿದ್ದಾರೆ.

'ಜೀವಾವಧಿ ಶಿಕ್ಷೆಯಲ್ಲಿ ಎರಡು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಅನುಭವಿಸಬೇಕು. ದಂಡದ ಮೊತ್ತ ಪಾವತಿಸದೇ ಇದ್ದರೆ ಮತ್ತೊಂದು ವರ್ಷ ಸಾದಾ ಜೈಲು ಶಿಕ್ಷೆ ಅನುಭವಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ಸೂರ್ಯನಾರಾಯಣ ವಾದ ಮಂಡಿಸಿದ್ದರು.

ಪ್ರಕರಣವೇನು?: 'ಹೊಸಕೋಟೆಯ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಂಡೆ ಬೊಬ್ಬಸಂದ್ರ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ಗುಲ್ಶನ್ ಕುಮಾರ್ ಮತ್ತು ಪತ್ನಿ ರೂಬಿ ನೆಲೆಸಿದ್ದರು. ಓಂ ಪ್ರಕಾಶ್ ಎಂಬಾತನೊಂದಿಗೆ ರೂಬಿ ಅನೈತಿಕ ಸಂಬಂಧ ಹೊಂದಿದ್ದಾರೆ ಎಂದು ಗುಲ್ಶನ್ ಅನುಮಾನಗೊಂಡಿದ್ದ. 2016ರ ಏಪ್ರಿಲ್ 19ರಂದು ಸಂಜೆ 4.30ಕ್ಕೆ ಓಂ ಪ್ರಕಾಶ್ ಮನೆಗೆ ಹೋಗಿದ್ದ ಗುಲ್ಶನ್, ರೂಬಿ ಜೊತೆಗೆ ಅನೈತಿಕ ಸಬಂಧ ಹೊಂದಿದ್ದೀಯಾ ಎಂದುಳಿ ಗಲಾಟೆ ಮಾಡಿದ್ದ. ರೂಬಿ ತನಗೆ ತಂಗಿ ಇದ್ದಂತೆ ಎಂದು ಓಂ ಪ್ರಕಾಶ್ ಹೇಳಿದರೂ ಕೇಳದೆ, ಆತನಿಗೆ ಕೈಗಳಿಂದ ಹೊಡೆದಿದ್ದ. ನಂತರ ಮನೆಗೆ ಬಂದು ರೂಬಿಗೆ ಬಲವಂತವಾಗಿ ವಿಷ ಕುಡಿಸಿದ್ದ.

ಇದರಿಂದ ರೂಬಿ ವಾಂತಿ ಮಾಡಿಕೊಂಡು ಪ್ರಜ್ಞೆ ತಪ್ಪಿಬಿದ್ದಿದ್ದರು. ನಂತರ ರೂಬಿಯ ಮುಖದ ಮೇಲೆ ತಲೆದಿಂಬು ಇಟ್ಟು ಅದುಮಿ, ಉಸಿರುಗಟ್ಟಿಸಿ ಕೊಲೆ ಮಾಡಿದ್ದ' ಎಂಬುದು ದೋಷಾರೋಪ ಪಟ್ಟಿಯ ವಿವರಣೆ. ಪ್ರಕರಣದ ತನಿಖೆ ನಡೆಸಿದ್ದ ಆವಲಹಳ್ಳಿ ಠಾಣಾ ಪೊಲೀಸರು ಗುಲ್ಶನ್ ವಿರುದ್ಧ ಕೊಲೆ ಅಪರಾಧದಡಿ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಒತ್ತುವರಿ ಆರೋಪ ನಿಜ: ಸರ್ಕಾರ

ಅಂಗಡಿ ನಿರ್ಮಿಸಿ ಬಾಡಿಗೆಗೆ ಕೊಟ್ಟಿದ್ದ ಎರಡು ಟ್ರಸ್ಟ್‌ಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೈಕೋರ್ಟ್‌ಗೆ ರಾಜ್ಯ ಸರ್ಕಾರದಿಂದ ಮಾಹಿತಿ
- ನ್ಯಾಯಾಲಯದ ನಿರ್ದೇಶನದಂತೆ ಸ್ಥಳ ಪರಿಶೀಲನೆ

ಬೆಂಗಳೂರು: ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಯ ಕ್ಯಾಲನೂರು ಗ್ರಾಮದಲ್ಲಿ ವಿರಾಟ್ ಹಿಂದೂ ಸೇನಾ ಚಾರಿಟಬಲ್ ಟ್ರಸ್ಟ್ ಹಾಗೂ ಜಾಮೀಯಾ ಮಸೀದಿ ಟ್ರಸ್ಟ್‌ಗಳು ಸರ್ಕಾರದ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದು ನಿಜ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಒತ್ತುವರಿ ತೆರವುಗೊಳಿಸುವಂತೆ ಕೋಲಾರ ತಹಶೀಲ್ದಾರ್ ಜಾರಿಗೊಳಿಸಿರುವ ನೋಟಿಸ್ ರದ್ದುಪಡಿಸಬೇಕು' ಎಂದು ಕೋರಿ 'ವಿರಾಟ್ ಹಿಂದೂ ಸೇವಾ ಚಾರಿಟಬಲ್ ಟ್ರಸ್ಟ್' ಹಾಗೂ 'ಜಾಮೀಯಾ ಮಸ್ಜಿದ್ ಕಮಿಟಿ' ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ನ್ಯಾಯಾಲಯದ ನಿರ್ದೇಶನದಂತೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಎರಡೂ ಸಂಸ್ಥೆಗಳು ಸರ್ಕಾರಿ ಜಾಗ ಒತ್ತುವರಿ ಮಾಡಿವೆ. ತೆರವುಗೊಳಿಸಲು ಸತತವಾಗಿ ನೋಟಿಸ್ ಕೊಡಲಾಗಿದ್ದು, ಈ ಕುರಿತಾದ ವರದಿಗಳಿವೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ವಿರಾಟ್ ಹಿಂದೂ ಸೇವಾ ಟ್ರಸ್ಟ್ ಸರ್ವೆ ನಂಬರ್ 73 ಮತ್ತು 74ರಲ್ಲಿನ 10 ಗುಂಟೆ ಸರ್ಕಾರಿ ಜಾಗದಲ್ಲಿ 5.15 ಗುಂಟೆ ಜಾಗವನ್ನು ಅತಿಕ್ರಮಿಸಿದೆ. ಇಲ್ಲಿ 15 ಅಂಗಡಿಗಳನ್ನು ನಿರ್ಮಿಸಲಾಗಿದ್ದು ಪ್ರತಿ ತಿಂಗಳೂ ತಲಾ ₹1,200 ಬಾಡಿಗೆ ವಸೂಲಿ ಮಾಡುತ್ತಿದೆ. ಅದೇ ರೀತಿ ಜಾಮೀಯಾ ಮಸೀದಿ ಕಮಿಟಿಯವರು 4.75 ಗುಂಟೆ ಜಾಗದಲ್ಲಿ 10 ಅಂಗಡಿಗಳನ್ನು ನಿರ್ಮಿಸಿ ಪ್ರತಿ ತಿಂಗಳೂ ತಲಾ ₹1,200 ಬಾಡಿಗೆ ವಸೂಲಿ ಮಾಡುತ್ತಿದ್ದಾರೆ' ಎಂದರು.

'ಬಾಡಿಗೆ ಹಣವನ್ನು ಟ್ರಸ್ಟ್ ಮತ್ತು ಸಮಿತಿಯ ಖಾತೆಗಳಲ್ಲಿ ನಿರ್ವಹಿಸಲಾಗುತ್ತಿದ್ದು, ಯಾವುದೇ ಸರ್ಕಾರಿ ಖಾತೆಗೆ ಜಮಾ ಮಾಡುತ್ತಿಲ್ಲ. ಅಂಗಡಿಗಳನ್ನು ನಿರ್ಮಿಸಿಕೊಳ್ಳಲು ಯಾವುದೇ ರೀತಿ ಅನುಮತಿಯನ್ನೂ ನೀಡಿಲ್ಲ ಎಂಬುದು ವರದಿಯಲ್ಲಿ ಕಂಡುಬಂದಿದೆ' ಎಂದು ತಿಳಿಸಿದರು.

ಅರ್ಜಿದಾರರ ಪರ ವಕೀಲರು, 'ಅರ್ಜಿದಾರರು ಅನುಭೋಗಿಸುತ್ತಿರುವ ಆಸ್ತಿ ಗ್ರಾಮ ಠಾಣಾ ಜಮೀನು. ಸರ್ಕಾರಿ ಕಂದಾಯ ಜಮೀನು ಅಲ್ಲ. ಅರ್ಜಿದಾರರಿಗೆ ಈ ಜಮೀನು ಮಂಜೂರು ಮಾಡಬೇಕು ಎಂದು ಗ್ರಾಮ ಪಂಚಾಯಿತಿಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಭೂ ಮಂಜೂರಾತಿ ಪ್ರಸ್ತಾವನೆಯು ಸದ್ಯ ಜಿಲ್ಲಾಧಿಕಾರಿ ಮುಂದೆ ಪರಿಶೀಲನೆಯಲ್ಲಿದೆ. ಜಮೀನು ಒತ್ತುವರಿ ಮಾಡಿದ್ದು ಎಂದಾದರೆ, ಸಂಘಗಳ ನೋಂದಣಿ ಕಾಯ್ದೆಯಂತೆ ತನಿಖೆ ನಡೆಸಬಹುದು' ಎಂದು ಹೇಳಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ಶನಿವಾರ (ನ.22) ಬೆಳಿಗ್ಗೆ 11.30ಕ್ಕೆ ತಹಶೀಲ್ದಾರ್ ಮುಂದೆ ಹಾಜರಾಗಿ ನೋಟಿಸ್‌ಗೆ ಆಕ್ಷೇಪಣೆ ಸಲ್ಲಿಸಬೇಕು. ಆಕ್ಷೇಪಣೆ ಪರಿಶೀಲಿಸಿ ತಹಶೀಲ್ದಾರ್ ಐದು ದಿನಗಳಲ್ಲಿ ನ್ಯಾಯಾಲಯಕ್ಕೆ ಲಿಖಿತ ವರದಿ ಸಲ್ಲಿಸಬೇಕು. ಅಂತೆಯೇ, ಅರ್ಜಿದಾರರಿಗೆ ಜಮೀನು ಮಂಜೂರು ಮಾಡುವ ಪ್ರಸ್ತಾವನೆ ಬಗ್ಗೆ ಜಿಲ್ಲಾಧಿಕಾರಿ ಯಾವ ನಿಲುವು ಹೊಂದಿದ್ದಾರೆ ಎಂಬುದನ್ನು ತಿಳಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಡಿಸೆಂಬರ್ 3ಕ್ಕೆ ಮುಂದೂಡಿತು.

'ಆಕರ್ಷಣೆ ಬಲೆ-ಪೋಕ್ಸೊಗೆ ಬಲಿ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಕೆ.ಆನಂದ್ ಮಾತನಾಡಿದರು. ಸಂಯುಕ್ತ ಪಿ.ಯು ಕಾಲೇಜಿನ ಪ್ರಾಂಶುಪಾಲ ಬಾಲು, (ಎಡದಿಂದ ಬಲಕ್ಕೆ) ಸಿ.ವಿ. ತಿರುಮಲ ರಾವ್, ಜಿಲ್ಲಾ ನ್ಯಾಯಾಧೀಶ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ, ಜಿಬಿಎ ಹಿರಿಯ ಸಹಾಯಕ ನಿರ್ದೇಶಕ ಎಂ.ಮುನಿಶಾಮಪ್ಪ ಮತ್ತು ಅಮಿತ್ ಕಾರ್ಣಿಕ್ ಇದ್ದರು

ಬೆಂಗಳೂರು: 'ವಯೋಸಹಜ ದೈಹಿಕ ಆಕರ್ಷಣೆಗೆ ಒಳಗಾಗುವ ಕೆಲವು ಯುವಕರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣಗಳಲ್ಲಿ ಸಿಲುಕಿ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ' ಎಂದು ಜಿಲ್ಲಾ ನ್ಯಾಯಾಧೀಶ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ ಕಳವಳ ವ್ಯಕ್ತಪಡಿಸಿದರು.

ನಗರದ ಮಾಗಡಿ ರಸ್ತೆಯ ಬಿಜಿಎ ಪ್ರಥಮ ದರ್ಜೆ ಕಾಲೇಜು ಮತ್ತು ಸಂಯುಕ್ತ ಪಿ.ಯು ಕಾಲೇಜಿನ ವಿದ್ಯಾರ್ಥಿಗಳಿಗಾಗಿ 'ವರ್ವ್ ಫೌಂಡೇಷನ್' ಹಾಗೂ ಜಿಬಿಎ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಒಂದು ದೇಶವನ್ನು ನಾಶ ಮಾಡಲು ಕ್ಷಿಪಣಿ ಅಥವಾ ಬಾಂಬ್ ಹಾಕಬೇಕಿಲ್ಲ. ಅಲ್ಲಿನ ಯುವಜನರಿಗೆ ಮಾದಕ ವಸ್ತುಗಳ ಚಟ ಅಂಟಿಸಿದರೆ ಸಾಕು, ಆ ದೇಶ ತನ್ನಿಂತಾನೇ ನಾಶವಾಗುತ್ತದೆ' ಎಂದರು.

'ರಾಜ್ಯದಾದ್ಯಂತ ಶಾಲಾ-ಕಾಲೇಜುಗಳಲ್ಲಿ ಕಾನೂನು ಬಗ್ಗೆ ಜಾಗೃತಿ ಮೂಡಿಸುವ ಕ್ಲಬ್‌ಗಳನ್ನು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಆರಂಭಿಸುತ್ತಿದೆ. ಈ ಮೂಲಕ ಶೋಷಿತರು, ದುರ್ಬಲರು, ಅನ್ಯಾಯಕ್ಕೆ ಒಳಗಾದವರನ್ನು ಗುರುತಿಸಿ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡುತ್ತಿದೆ. ಅಂತೆಯೇ, ವ್ಯಾಜ್ಯಗಳನ್ನು ಗ್ರಾಮ ಮಟ್ಟದಲ್ಲಿಯೇ ಬಗೆಹರಿಸುವ ಮೂಲಕ ವ್ಯಾಜ್ಯಮುಕ್ತ ಗ್ರಾಮಗಳನ್ನು ನಿರ್ಮಿಸುವ ಗುರಿ ಇದೆ' ಎಂದು ಅವರು ಹೇಳಿದರು.

ಜಿಬಿಎ ಹಿರಿಯ ಸಹಾಯಕ ನಿರ್ದೇಶಕ ಎಂ.ಮುನಿಶಾಮಪ್ಪ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕೆ.ಆನಂದ್ ಮತ್ತು ಜಿಬಿಎ ಸಂಯುಕ್ತ ಪಿ.ಯು ಕಾಲೇಜಿನ ಪ್ರಾಂಶುಪಾಲ ಬಾಲು, ವರ್ವ್ ಫೌಂಡೇಷನ್ ಅಧ್ಯಕ್ಷ ಸಿ.ವಿ. ತಿರುಮಲ ರಾವ್ ಮತ್ತಿತರರು ಇದ್ದರು.

ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿಯ ದುಂಡುಮೇಜಿನ ಸಭೆಯಲ್ಲಿ ಆಗ್ರಹ

'ಕೆಪಿಎಸ್ ರದ್ದು ಮಾಡಿ ಸರ್ಕಾರಿ ಶಾಲೆ ಉಳಿಸಿ'

ಪ್ರಜಾವಾಣಿ ವಾರ್ತೆ

ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ವತಿಯಿಂದ ದುಂಡು ಮೇಜಿನ ಸಭೆ ನಡೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಕೆಲವನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಎಂದು ಮೇಲ್ದರ್ಜೆಗೆ ಏರಿಸುವ ಮೂಲಕ ಉಳಿದವುಗಳನ್ನು ಮುಚ್ಚುವ ಸ್ಥಿತಿಗೆ ತರುವ ಹುನ್ನಾರ ನಡೆಯುತ್ತಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ದೂರಿದೆ.

ಶುಕ್ರವಾರ ಫೆಡರೇಷನ್ ಈ ಬಗ್ಗೆ ದುಂಡುಮೇಜಿನ ಸಭೆ ನಡೆಸಿತು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮುನಿರಾಜು ಎಂ., ಎಸ್‌ಎಫ್‌ಐ ಅಧ್ಯಕ್ಷ ಶಿವಪ್ಪ ಅಂಬ್ಲಿಕಲ್, ಉಪಾಧ್ಯಕ್ಷ ಬಸವರಾಜ ಎಸ್., ಬಿಜಿವಿಎಸ್ ಮುಖಂಡರಾದ ಚೇಗರೆಡ್ಡಿ, ಶುಂಭಾಂಕರ, ಚಿಂತಕರಾದ ಬಿ.ಶ್ರೀಪಾದ ಭಟ್, ಸುರೇಂದ್ರರಾವ್, ಎಐಡಿಎಸ್‌ಒ ಮುಖಂಡರಾದ ವಿನಯ ಚಂದ್ರ, ಅಭಯ ಡಿ., ಸಿಐಟಿಯುನ ವರಲಕ್ಷ್ಮೀ, ಎಐಎಸ್‌ಎ ಸಂಘಟನೆ ಅರಾತ್ರಿಕಾ, ಎಸ್‌ಡಿಎಂಸಿ ಸಂಘಟನೆಯ ಮೈನುದಿನ್, ಕೆಪಿಆರ್‌ಎಸ್‌ನ ಯಶವಂತ ಸಹಿತ ಅನೇಕರು ಭಾಗವಹಿಸಿದ್ದರು.

ಪಂಚಾಯಿತಿಗೊಂದು ಕರ್ನಾಟಕ ಪಬ್ಲಿಕ್ ಶಾಲೆ ಎಂಬುದು ಸಂಪೂರ್ಣ ಜಾರಿಯಾಗಿ, ಶಾಲೆಗಳನ್ನು ವಿಲೀನಮಾಡಿದರೆ ರಾಜ್ಯದಲ್ಲಿ ಇರುವ 47,493 ಶಾಲೆ ಪೈಕಿ 7,000 ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉಳಿಯಲಿವೆ. ಸುಮಾರು 40,000 ಸರ್ಕಾರಿ ಶಾಲೆಗಳಿಗೆ ಬೀಗ ಬೀಳಲಿದೆ ಎಂದು ಎಚ್ಚರಿಸಿದರು.

ಒಂದೇ ಸೂರಿನಡಿಯಲ್ಲಿ ಎಲ್‌ಕೆಜಿಯಿಂದ ಪದವಿ ಪೂರ್ವ ಶಿಕ್ಷಣದವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು 500 ಹೊಸ ಪಬ್ಲಿಕ್ ಶಾಲೆ ತೆರೆಯುವುದಾಗಿ ಸರ್ಕಾರ ಘೋಷಣೆ ಮಾಡಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ₹ 2,500 ಕೋಟಿ ಸಾಲ ಪಡೆಯಿತು. ಆದರೆ, ಸರ್ಕಾರವು ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯದೇ ಇರುವ ಶಾಲೆಗಳನ್ನೇ ಪಂಚಾಯಿತಿಗೊಂದು ಶಾಲೆಯಾಗಿ ಉನ್ನತೀಕರಣ ಮಾಡುತ್ತಿದೆ. ಹೇಳಿದ್ದೊಂದು ಮಾಡಿದ್ದು ಇನ್ನೊಂದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ಶಾಲೆಗಳಲ್ಲಿ ಬಡವರ ಮಕ್ಕಳಷ್ಟೇ ಓದುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕುಸಿತವಾಗುತ್ತಿದೆ. ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆಯುವವರ ಪ್ರಮಾಣ ಹೆಚ್ಚುತ್ತಿದೆ. ಮೂಲ ಸೌಲಭ್ಯ, ಅಗತ್ಯ ಶಿಕ್ಷಕರು, ಸಿಬ್ಬಂದಿಯನ್ನು ಕಲ್ಪಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಬದಲು ಮುಚ್ಚುವ ಯೋಜನೆಗಳನ್ನು ತರಲಾಗುತ್ತಿದೆ ಎಂದು ದೂರಿದರು.

'ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರ'

ಬೆಂಗಳೂರು: ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದ್ದರೆ, ಮತ್ತೊಂದೆಡೆ ಮಠಗಳು ಬಡವರಿಗೆ, ದುರ್ಬಲರಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಮ್ಮಿಕೊಂಡಿದ್ದ 17ನೇ ಬಿಜಿಎಸ್ ಸಂಸ್ಥಾಪನಾ ದಿನ ಹಾಗೂ ಬಿಜಿಎಸ್ ಉತ್ಸವದ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರು, ಬಡವರು, ಆರ್ಥಿಕ ದುರ್ಬಲರ ಮಕ್ಕಳು ವ್ಯಾಸಂಗ ಮಾಡುವ ಶಾಲೆಗಳಿಗೆ ಸರ್ಕಾರ ಬೀಗ ಹಾಕುತ್ತಿದೆ. ಇಂತಹ ಸಂದರ್ಭದಲ್ಲಿ ಮಠಗಳು ನಾಡಿನ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಕೆಲಸ ಮಾಡುತ್ತಿವೆ. ಶಿಕ್ಷಣ ಸಂಸ್ಥೆಗಳನ್ನು ಕಟ್ಟುವುದು ಸುಲಭ. ಅವುಗಳ ನಿರ್ವಹಣೆ ಸುಲಭವಲ್ಲ. ಆದರೆ, ದಕ್ಷತೆ, ಕ್ಷಮತೆಯಿಂದ ಮಠಗಳು ನಡೆಸಿಕೊಂಡು ಹೋಗುತ್ತಿವೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದ ನಾಥ ಸ್ವಾಮೀಜಿ, ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಭಾಗವಹಿಸಿದ್ದರು. ಆದಿಚುನಚಗಿರಿ ಶಿಕ್ಷಣ ಟ್ರಸ್ಟ್ ಮುಖ್ಯಸ್ಥ ಪ್ರಕಾಶನಾಥ ಸ್ವಾಮೀಜಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಪತ್ರಕರ್ತರಾದ ಎಚ್.ಆರ್. ರಂಗನಾಥ್, ಶಿವಸ್ವಾಮಿ, ನಟಿಯರಾದ ಮಾಲಾಶ್ರೀ, ಆರಾಧನಾ ಹಾಜರಿದ್ದರು.

ಚಿಟಿಕೆ ಸುದ್ದಿ

ಅಪರಂಜಿಗೆ 'ಎಚ್.ಕೆ.ರಂಗನಾಥ್ ಸ್ಮಾರಕ ಪ್ರಶಸ್ತಿ'

ಬೆಂಗಳೂರು: ಭಾರತೀಯ ವಿದ್ಯಾಭವನ ನೀಡುವ 2025ನೇ ಸಾಲಿನ 'ಡಾ. ಎಚ್.ಕೆ. ರಂಗನಾಥ್ ಸ್ಮಾರಕ ಪ್ರಶಸ್ತಿ'ಗೆ ಅಪರಂಜಿ ಪತ್ರಿಕೆ ಆಯ್ಕೆಯಾಗಿದೆ.

ಈ ಪ್ರಶಸ್ತಿಯು ₹ 30 ಸಾವಿರ ನಗದು ಒಳಗೊಂಡಿದೆ. ಎಂ.ವಿ. ಸತ್ಯನಾರಾಯಣ ಅವರು ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಇದೇ 29ರಂದು ಬೆಳಿಗ್ಗೆ 11 ಗಂಟೆಗೆ ಭಾರತೀಯ ವಿದ್ಯಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ ರಾಘವನ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ನ.23ರಂದು ಯಲಹಂಕ ಉಪಕೇಂದ್ರ ವ್ಯಾಪ್ತಿಯಲ್ಲಿ ಬೆಳಿಗ್ಗೆ 11ರಿಂದ ಸಂಜೆ 4.30ರ ವರೆಗೆ, ಅಬ್ಬಿಗೆರೆ ಉಪಕೇಂದ್ರ ಮತ್ತು ಪೀಣ್ಯ ಉಪಕೇಂದ್ರ ವ್ಯಾಪ್ತಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

'ಕೆಎಂಎಫ್, ವೈಎನ್‌ಕೆ ನ್ಯೂ ಟೌನ್, ಅಲ್ಲಾಳಸಂದ್ರ, ಶಾರದಾನಗರ, ಜನಪ್ರಿಯ, ಮಾರುತಿನಗರ, ಕೋಗಿಲು, ಬಿಬಿ ರಸ್ತೆ ಯಲಹಂಕ ಸುತ್ತಮುತ್ತ ಕಮ್ಮಗೊಂಡನಹಳ್ಳಿ, ರಾಘವೇಂದ್ರ ಬಡಾವಣೆ, ಲಕ್ಷ್ಮೀಪುರ, ವಡೇರಹಳ್ಳಿ, ಅಬ್ಬಿಗೆರೆ ಇಂಡಸ್ಟ್ರಿಯಲ್ ಏರಿಯಾ, ಸಿಂಗಾಪುರ, ಅಬ್ಬಿಗೆರೆ, ಪೈಪ್ ಲೈನ್ ರೋಡ್, ನಿಸರ್ಗ ಬಡಾವಣೆ, ಕೆಂಪೇಗೌಡ ಬಡಾವಣೆ, ವಿಶ್ವೇಶ್ವರಯ್ಯ ಬಡಾವಣೆ, ಎಚ್‌ವಿವಿ ಬಡಾವಣೆ, ಕುವೆಂಪು ನಗರ, ಕಾಶಿರಾಮ ನಗರ, ವಡೇರಹಳ್ಳಿ, ಸಿಂಹಾದ್ರಿ ಬಡಾವಣೆ ಸುತ್ತಮುತ್ತ, ಪೀಣ್ಯ 10ನೇ ಮುಖ್ಯರಸ್ತೆ, 11ನೇ ಮುಖ್ಯರಸ್ತೆ ಸಹಿತ ಹಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸಿರಿಗನ್ನಡಸಿರಿ ಪ್ರಶಸ್ತಿ

ಬೆಂಗಳೂರು: ದಾವಣಗೆರೆಯ ಕಲಾ ಕುಂಚ ಸಾಂಸ್ಕೃತಿಕ ಸಂಸ್ಥೆ ನೀಡುವ ಕರ್ನಾಟಕ ಸಿರಿಗನ್ನಡಸಿರಿ ರಾಜ್ಯ ಪ್ರಶಸ್ತಿಗೆ ಬೆಂಗಳೂರಿನ ಸೋಮಸುಂದ್ರಪಾಳ್ಯದ ಕುಮಾರ ಯಲ್ಲಾಲಿಂಗ ಅವರು ಆಯ್ಕೆಯಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಲಾಗಿದೆ.

ಬಸವನಗುಡಿಯ ಕಡಲೆಕಾಯಿ ಪರಿಷೆಯ ಕೊನೆಯ ದಿನವಾದ ಶುಕ್ರವಾರ ಭಾರಿ ಸಂಖ್ಯೆಯಲ್ಲಿ ಬಂದಿದ್ದ ಜನರು ದೊಡ್ಡ ಬಸವಣ್ಣ ರಸ್ತೆಯಲ್ಲಿ ಪರಿಷೆಯನ್ನು ಕಣ್ತುಂಬಿಕೊಂಡರು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಕಡಲೆಕಾಯಿ ಪರಿಷೆ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ತಿಕ ಮಾಸದ ಕೊನೆಯ ಸೋಮವಾರ ಆರಂಭವಾಗಿದ್ದ ಬಸವನಗುಡಿ ಕಡಲೆಕಾಯಿ ಪರಿಷೆ ಶುಕ್ರವಾರ ಮುಕ್ತಾಯವಾಯಿತು. 12 ಲಕ್ಷಕ್ಕೂ ಅಧಿಕ ಜನರು ಪರಿಷೆಗೆ ಭೇಟಿ ನೀಡಿ ಶೇಂಗಾ ಖರೀದಿಸಿದರು.

ಬಸವನಗುಡಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಕಡಲೆಕಾಯಿ ಮಾರಾಟ, ಖರೀದಿಯ ಸಂಭ್ರಮ ಮನೆಮಾಡಿತ್ತು. ಗುರುವಾರ ಒಂದೇ ದಿನ 6 ಲಕ್ಷ ಜನರು ಭೇಟಿ ನೀಡಿದ್ದರೆ, ಶುಕ್ರವಾರ ಈ ಸಂಖ್ಯೆ ದ್ವಿಗುಣಗೊಂಡಿತ್ತು.

ದೊಡ್ಡ ಬಸವಣ್ಣನೊಂದಿಗೆ ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಸವಿದರು. ಮಧ್ಯೆ ಮಳೆ ಬಂದಾಗ ಸ್ವಲ್ಪ ಹೊತ್ತು ಸಡಗರ ಕಡಿಮೆಯಾದರೂ ಮಳೆ ನಿಂತಾಗ ಮತ್ತದೇ ಸಂಭ್ರಮ ಪಡಿಮೂಡಿತು.

ಕಡಲೆಕಾಯಿ ಪರಿಷೆಯಲ್ಲಿ ಮೊದಲ ಬಾರಿಗೆ ವಿಶೇಷ ದೀಪಾಲಂಕಾರ ಹಾಗೂ ಹೂವಿನ ಅಲಂಕಾರ ಮಾಡಲಾಗಿತ್ತು. ಇದು ಭಕ್ತರನ್ನು ಸೆಳೆಯಿತು.

ನಾರ್ತ್ ರೋಡ್, ಕೆ.ಆರ್. ರಸ್ತೆ, ಆಶ್ರಮ ವೃತ್ತ, ಡಿವಿಜಿ ರಸ್ತೆ, ಗಾಂಧಿ ಬಜಾರ್ ಮುಖ್ಯರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್ ರಸ್ತೆ, ಎನ್.ಆರ್. ಕಾಲೊನಿ ರಸ್ತೆಯಲ್ಲಿನ ದೀಪಾಲಂಕಾರಗಳು ಜಗಮಗಿಸಿದವು.

4,500ಕ್ಕೂ ಅಧಿಕ ಮಳಿಗೆಗಳಿದ್ದ ಪರಿಷೆ ಮುಕ್ತಾಯವಾಗುತ್ತಿದ್ದಂತೆ ಸ್ವಚ್ಛತಾ ಕಾರ್ಯ ಆರಂಭವಾಗಿದೆ ಎಂದು ಪರಿಷೆ ಆಯೋಜಕರು ತಿಳಿಸಿದ್ದಾರೆ.

ಮೈಸೂರಿನಲ್ಲಿ ಕಂಬಳಕ್ಕೆ ಸಿದ್ಧತೆ

ಮಂಗಳೂರು: 'ಮೈಸೂರಿನಲ್ಲಿ ಕಂಬಳ ಆಯೋಜಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಂಬಳ ಅಸೋಸಿಯೇಶನ್‌ಗೆ ಮನವಿ ಮಾಡಿದ್ದಾರೆ. ಇಲ್ಲಿಯ ಕಂಬಳಗಳು ಮುಗಿದ ನಂತರ, ಮುಂದಿನ ಏಪ್ರಿಲ್ ವೇಳೆಗೆ ಅಲ್ಲಿ ಕಂಬಳ ಆಯೋಜನೆಯ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ' ಎಂದು ರಾಜ್ಯ ಕಂಬಳ ಅಸೋಸಿಯೇಶನ್ ಅಧ್ಯಕ್ಷ ಐಕಳಬಾವ ದೇವಿಪ್ರಸಾದ್ ಶೆಟ್ಟಿ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಶುಕ್ರವಾರ ಈ ಮಾಹಿತಿ ನೀಡಿದ ಅವರು, 'ಕಂಬಳ ಸಮಿತಿಯ ತಜ್ಞರು ಈಗಾಗಲೇ ಮೈಸೂರಿಗೆ ಭೇಟಿನೀಡಿ, 10 ಎಕರೆ ಸರ್ಕಾರಿ ಜಾಗವನ್ನು ಗುರುತಿಸಿ, ಅಲ್ಲಿ ಕರೆ ನಿರ್ಮಾಣ ಸೇರಿದಂತೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಬಂದಿದ್ದಾರೆ. 'ರಾಜ್ಯದ ಯಾವ ಭಾಗದಲ್ಲಾದರೂ ಕಂಬಳ ಆಯೋಜಿಸಲು ಅಡ್ಡಿ ಇಲ್ಲ' ಎಂದು ಹೈಕೋರ್ಟ್ ಈಗಾಗಲೇ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಕಂಬಳ ಆಯೋಜನೆಗೆ ತೊಂದರೆಯಾಗದು' ಎಂದರು.

ಬೆಂಗಳೂರಿನ ಆರ್‌ಟಿ.ನಗರ ಕಾವಲ್‌ಬೈರಸಂದ್ರದ ಸೌಭಾಗ್ಯ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ನಡೆದ ಶಾಲಾ ಕ್ರೀಡಾಕೂಟದಲ್ಲಿ ವಿದ್ಯಾರ್ಥಿನಿಯರ 'ಲೆಮನ್ ಸ್ಪೂನ್' ಸ್ಪರ್ಧೆ ಗಮನ ಸೆಳೆಯಿತು

'ಆಕಾಶ್' ವಾರ್ಡ್ ಹೆಸರಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಉತ್ತರ ನಗರ ಪಾಲಿಕೆಯ ಎರಡನೇ ವಾರ್ಡ್‌ಗೆ 'ಆಕಾಶ್ ವಾರ್ಡ್' ಎಂದು ಹೆಸರಿಟ್ಟಿರುವುದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಗನ ಹೆಸರು 'ಆಕಾಶ್' ಎಂದು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಆರೋಪಿಸಿದ್ದಾರೆ.

ಯಲಹಂಕ ವಿಧಾನಸಭಾ ವ್ಯಾಪ್ತಿಯಲ್ಲಿರುವ ಈ ಪ್ರದೇಶ ಹಿಂದೆ ಕೆಂಪೇಗೌಡ ವಾರ್ಡ್ ಮತ್ತು ಸುತ್ತಲಿನ ವಾರ್ಡ್‌ಗಳಿಗೆ ಹಂಚಿಹೋಗಿತ್ತು. ಪುನರ್‌ವಿಂಗಡಣೆಯ ಸಂದರ್ಭದಲ್ಲಿ ಮಾರುತಿನಗರ, ಶ್ರೀನಿವಾಸಪುರ ಮತ್ತು ವೆಂಕಟಾಲವನ್ನು ಸೇರಿಸಿ ಆಕಾಶ್ ವಾರ್ಡ್ ಎಂದು ನಮೂದಿಸಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ವಿಶ್ವನಾಥ್, 'ಆಕಾಶ್ ಯಾರು? ಅವರ ಸಾಧನೆಯಾದರೂ ಏನು? ಇದು ಯಾವ ವ್ಯಕ್ತಿಗೆ ಸಂಬಂಧಿಸಿದ ಹೆಸರು' ಎಂದು ಪ್ರಶ್ನಿಸಿದರು.

'ನನಗೆ ಬಂದ ಸುದ್ದಿಗಳ ಪ್ರಕಾರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪುತ್ರನ ಹೆಸರು ಕೂಡ ಆಕಾಶ್. ಆದರೆ, ಶಿವಕುಮಾರ್ ಈ ರೀತಿಯ ವೈಯಕ್ತಿಕ ಹೆಸರು ಇಡಲು ಒಪ್ಪುವುದಿಲ್ಲ ಎಂಬ ನಂಬಿಕೆ ನನಗಿದೆ' ಎಂದೂ ಹೇಳಿದರು.

'ಆಕಾಶ್' ಎಂಬ ಹೆಸರನ್ನು ಕೂಡಲೇ ತೆಗೆದು ಹಾಕಬೇಕು. ವೆಂಕಟಾಲ ಅಥವಾ ಮಾರುತಿ ನಗರ ವಾರ್ಡ್ ಎಂದು ಮರುನಾಮಕರಣ ಮಾಡಬೇಕು' ಎಂದು ಆಗ್ರಹಿಸಿದರು.

ಅವೈಜ್ಞಾನಿಕ ವಿಂಗಡಣೆ: ಯಲಹಂಕ ಕ್ಷೇತ್ರ ವ್ಯಾಪ್ತಿಯಲ್ಲಿ ಏಳು ವಾರ್ಡ್‌ಗಳು ಬರಲಿದ್ದು, ಇದರಲ್ಲಿ ಕೆಲವು ವಾರ್ಡ್‌ಗಳನ್ನು ಅವೈಜ್ಞಾನಿಕವಾಗಿ ವಿಂಗಡಣೆ ಮಾಡಲಾಗಿದೆ ಎಂದು ಆರೋಪಿಸಿದರು.

'ದೊಡ್ಡಬೆಟ್ಟಹಳ್ಳಿ ಇರುವುದೇ ಒಂದು ಕಡೆಯಾದರೆ ಅದಕ್ಕೆ ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಕೆಲವು ಬಡಾವಣೆಗಳನ್ನು ಸೇರಿಸಿ, ಲಕ್ಷ್ಮೀಪುರ ಕ್ರಾಸ್ ವರೆಗೆ ದೊಡ್ಡಬೆಟ್ಟಹಳ್ಳಿ ವಾರ್ಡ್ ರಚಿಸಲಾಗಿದೆ. ಅಟ್ಟೂರು ವಾರ್ಡ್‌ಗೆ ಹೊಂದಿಕೊಂಡಿರುವ ಕೆಲ ಪ್ರದೇಶಗಳನ್ನು ದೊಡ್ಡಬೆಟ್ಟಹಳ್ಳಿ ವಾರ್ಡ್‌ಗೆ ಅವೈಜ್ಞಾನಿಕವಾಗಿ ಸೇರಿಸಲಾಗಿದೆ ಎಂದು ಹೇಳಿದರು.

ಬಿಬಿಎಂಪಿ ಮಾಜಿ ಸದಸ್ಯ ಮುನಿರಾಜು, ಯಲಹಂಕ ನಗರ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಈಶ್ವರ್, ವಿ. ಪವನ್, ಬಿಜೆಪಿ ಮುಖಂಡರಾದ ವಿ.ವಿ. ರಾಮಮೂರ್ತಿ, ಮಧುಸೂದನ್, ಚಂದ್ರಯ್ಯ ಉಪಸ್ಥಿತರಿದ್ದರು.

ಅದಲು ಬದಲು

ಯಲಹಂಕ ಹಳೇನಗರವು ವೇಣುಗೋಪಾಲಸ್ವಾಮಿ ದೇವಾಲಯ, ಕೋಟೆ ಸೇರಿದಂತೆ ಕೆಂಪೇಗೌಡರು ಆಳಿದ ಐತಿಹಾಸಿಕ ಕುರುಹುಗಳಿರುವ ಜಾಗ. ಅಲ್ಲಿ ಕೆಂಪೇಗೌಡರ ಪ್ರತಿಮೆಯೂ ಇದೆ. ಈ ವಾರ್ಡಿಗೆ ಈ ಹಿಂದೆ ಕೆಂಪೇಗೌಡ ವಾರ್ಡ್ ಎಂಬ ಹೆಸರಿತ್ತು. ಈಗ ಅದರಲ್ಲಿದ್ದ ಕೆಲವು ಐತಿಹಾಸಿಕ ಮಹತ್ವವುಳ್ಳ ಸ್ಥಳಗಳನ್ನು ಸೇರಿಸಿ ಯಲಹಂಕ ಓಲ್ಡ್ ಟೌನ್ ವಾರ್ಡ್ ಎಂದು ನಾಮಕರಣ ಮಾಡಲಾಗಿದೆ. ಮೊದಲಿನ ಚೌಡೇಶ್ವರಿ ವಾರ್ಡಿನ ಕೆಲ ಸ್ಥಳಗಳನ್ನು ರಾಜಾ ಕೆಂಪೇಗೌಡ ವಾರ್ಡಿಗೆ ಸೇರಿಸುವ ಮೂಲಕ ಅದಲು ಬದಲು ಮಾಡಲಾಗಿದೆ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ದೂರಿದರು.

ಯಲಹಂಕ ಓಲ್ಡ್ ಟೌನ್ ವಾರ್ಡ್ ಹೆಸರನ್ನು ಬದಲಾಯಿಸಿ ಹಿಂದಿನಂತೆ ಚೌಡೇಶ್ವರಿ ವಾರ್ಡ್ ಎಂದೇ ಉಳಿಸಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು ರೇಸ್

ಸೀಝ್ ಕರೇಜಿಯಸ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೀಝ್ ಕರೇಜಿಯಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ಲೋಬಲ್ ಡಾಮಿನೆನ್ಸ್ 2, ಮಾನ್ಯುಮೆಂಟಲ್ 4, ಇಂಕ್ರೆಡಿಬಲ್ ಲಕ್ 3
2ನೇ ರೇಸ್: ನಾಟಿ ಕ್ರೂಝ್ 2, ಅಮಾಲ್ಯೂರ್ 4, ಎಕ್ಸೀಡ್ 1
3ನೇ ರೇಸ್: ಎಂಪೆರೆಡಾರ್ 3, ಫಿಯರಿ ಲವ್ 4, ಸೈರಾ 7
4ನೇ ರೇಸ್: ಆಲ್‌ಫೋನ್‌ಸ್ಸೈನ್ 8, ಆಲಂಗಿರ್ 9, ಸ್ವಾರ್ಮ್ ಶ್ಯಾಡೊ 6
5ನೇ ರೇಸ್: ಸೀಝ್ ಕರೇಜಿಯಸ್ 2, ಮ್ಯಾಗಿಲೆಟೊ 3, ಇಂಪೀರಿಯಲ್ ಬ್ಲ್ಯೂ 7
6ನೇ ರೇಸ್: ರೀಕೊ 5, ರೀಗಲ್ ರಿಯಾಲಿಟಿ 3, ನಾಟಿ ಚಾರ್ಮರ್ 1
7ನೇ ರೇಸ್: ಕಾಂಟೆಸ್ಸಿನ 9, ಸಸ್ಸಿ ಸಾರಾ 1, ಅಮೇಜಿಂಗ್ ಅಟ್ರ್ಯಾಕ್ಷನ್ 4

ಉತ್ತಮ ಬೆಟ್: ರೀಕೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಶಿವಗಂಗೆಯ ಮೇಲಣ ಗವಿಮಠದ ಆಶ್ರಯದಲ್ಲಿ ನಡೆದ 6ನೇ ಧರ್ಮಚಿಂತನ

ಕನ್ನಡ ದೀಪೋತ್ಸವ, ಕವಿ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಶಿವಗಂಗೆ ಮೇಲಣ ಗವಿಮಠದಲ್ಲಿ ನಡೆದ ಕನ್ನಡ ದೀಪೋತ್ಸವ ಕಾರ್ಯಕ್ರಮ ಉದ್ಘಾಟನೆಯಲ್ಲಿ ಮಠಾಧೀಶರು ಹಾಗೂ ಗಣ್ಯರು ಪಾಲ್ಗೊಂಡಿದ್ದರು

ದಾಬಸ್ ಪೇಟೆ: ಗುಣ ಸಂಪನ್ಮೂಲಗಳು ಒಂದೆಡೆ ಕಲೆತಾಗ ಸಂಸ್ಕಾರವುಂಟಾಗಿ ಕತ್ತಲೆ ದೂರವಾಗಿ ಸಾಮರಸ್ಯದ ಬದುಕು ಮೂಡುತ್ತದೆ ಎಂದು ಶಿವಗಂಗೆಯ ಮೇಲಣ ಗವಿ ಮಠಾಧೀಶ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಠದ ಆಶ್ರಯದಲ್ಲಿ ನಡೆದ 6ನೇ ಧರ್ಮಚಿಂತನ ಕನ್ನಡ ದೀಪೋತ್ಸವ, ಕವಿ ಸಮ್ಮೇಳನ ಮತ್ತು ರೇಣುಕಾಚಾರ್ಯರ ತೆಪ್ಪೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಭೂತಿಪುರ ವೀರಸಿಂಹಾಸನ ಮಠದ ಮಹಾಂತ ಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅಜ್ಞಾನವನ್ನು ತೊಡೆದು ಜ್ಞಾನದ ಬೆಳಕನ್ನು ಮಠವು ಸಾದರಪಡಿಸುತ್ತಾ ಬಂದಿದೆ. ಧರ್ಮ ಸಂದೇಶಗಳನ್ನು ದೇಶ, ವಿದೇಶಗಳಲ್ಲಿ ಸಾರಿ, ಭಕ್ತರನ್ನು ಸೆಳೆಯುವ ಮುಖೇನ ಮಠದ ಕಾರ್ಯ ತತ್ಪರತೆ ಹೆಚ್ಚಿಸುತ್ತಿರುವುದು ಸಮಾಜಕ್ಕೆ ಸಾರ್ಥಕತೆ ಬಿತ್ತರಿಸುತ್ತಿದೆ ಎಂದರು.

ಮಾಗಡಿಯ ಜಡೆದೇವರ ಮಠದ ಮಠಾಧೀಶ ಇಮ್ಮಡಿ ಬಸವರಾಜು ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಾಹಿತಿ ವಿ.ಮನೋಹರ್ ಹಾಜರಿದ್ದರು.

ಸ್ಥಳೀಯ ಶಾಸಕ ಎನ್.ಶ್ರೀನಿವಾಸ್ ಅವರು ಮಠದ ದಾಸೋಹ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ₹50 ಲಕ್ಷ ಮಂಜೂರು ಮಾಡಿಕೊಡುವ ಭರವಸೆ ನೀಡಿದರು.

ಮಾಗಡಿ ಪುರಸಭಾಧ್ಯಕ್ಷೆ ಶಿವರುದ್ರಮ್ಮ ವಿಜಯ ಕುಮಾರ್ ಮತ್ತು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಎನ್.ಜಿ.ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಕವಿಗಳು ಕವನ ವಾಚಿಸಿದರು.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಕಾಣೆಯಾಗಿದ್ದಾರೆ

ಶ್ರೀಮತಿ ಸಿ. ತುಳಸಮ್ಮ, 65 ವರ್ಷ ವಯಸ್ಸು
ಸುಮಾರು 5 ಅಡಿ ಎತ್ತರ, ದುಂಡುಮುಖ, ಎಣ್ಣೆಗೆಂಪು ಮೈಬಣ್ಣ, ಬಲಗೈನಲ್ಲಿ ಹಚ್ಚೆ ಇರುತ್ತೆ, ಕನ್ನಡಕವನ್ನು ಧರಿಸಿರುತ್ತಾರೆ. ಮನೆಯಿಂದ ಹೋಗುವಾಗ ಕಂದುಬಣ್ಣದ ಸೀರೆಯನ್ನು ಧರಿಸಿದ್ದರು. ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಯಾವುದೇ ಮಾಹಿತಿ ಸಿಕ್ಕಲ್ಲಿ ಈ ಕೆಳಕಂಡ ನಂಬರನ್ನು ಸಂಪರ್ಕಿಸಿ.
7204154343 / 9900158690/5

ಸ್ನೇಹಕ್ಕೊಂದು ಸುಂದರ ಫ್ರೇಮ್

ಸ್ನೇಹಿತೆಯರು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದು, ವಿಡಿಯೊ ಮಾಡಿಕೊಳ್ಳುವುದು ಸಾಮಾನ್ಯ. ಆದರೆ ವಿಭಿನ್ನ ಗೆಟಪ್‌ಗಳಲ್ಲಿ, ವೃತ್ತಿಪರ ವಿಡಿಯೊಗ್ರಾಫರ್‌ಗಳಿಂದ ವಿಡಿಯೊ ಶೂಟ್ ಮಾಡಿಸಿಕೊಳ್ಳುವುದು ಇದೀಗ ಹೊಸ ಟ್ರೆಂಡ್. ನಿತ್ಯ ಬದುಕಿನ ಜಂಜಡಗಳನ್ನೆಲ್ಲಾ ಮರೆತು, ಕೆಲ ಹೊತ್ತಾದರೂ ಸ್ನೇಹ ಸಿಂಚನದಲ್ಲಿ ಮೀಯಲು ಇದಕ್ಕಿಂತ ಬೇರೆ ನೆಪ ಇನ್ನೇನು ಬೇಕು?

• ಸುಮಲತಾ ಎನ್.

ಅಜ್ಜಿ ಮನೆಯಲ್ಲಿ ಅಟ್ಟ ಸೇರಿ ದೂಳು ಹಿಡಿದು ಕೂತಿದ್ದ ಟ್ರಂಕಿನಲ್ಲಿ ಹಳೆಯ ಫೋಟೊ ಆಲ್ಬಂ ನೋಡಿದ್ದೇ ಮನಸ್ಸು ಎಷ್ಟೋ ವರ್ಷಗಳ ಹಿಂದಕ್ಕೆ ಓಡಿತ್ತು. ಶಾಲೆಯಲ್ಲಿ ಸಹಪಾಠಿಗೆ ಕೀಟಲೆ ಮಾಡುವಾಗಲೇ ಅಚಾನಕ್ಕಾಗಿ ಕ್ಲಿಕ್ಕಿಸಲಾಗಿದ್ದ ಫೋಟೊವೊಂದು ನಗು ಉಕ್ಕಿಸಿ ಬಾಲ್ಯದ ಸುಮಧುರ ಕ್ಷಣಗಳ ಮೆರವಣಿಗೆ ಹೊರಡಿಸಿತ್ತು. ಹಾಗೆ ಒಂದೊಂದಾಗಿ ಚಿತ್ರಗಳನ್ನು ನೋಡುತ್ತಲೇ ಆ ನೆನಪುಗಳ ಆಲ್ಬಂ ಮನಸ್ಸನ್ನಾವರಿಸಿ ಮಂದಹಾಸ ಮೂಡಿಸಿತ್ತು.

ನೆನಪುಗಳೇ ಹಾಗೆ, ಅವುಗಳಿಗೆ ನಗಿಸುವ, ನಗಿಸುತ್ತಲೇ ಅಳಿಸುವ ಶಕ್ತಿಯಿದೆ. ಇಂಥ ಅಮೂಲ್ಯ ನೆನಪುಗಳನ್ನು ಚಿರಕಾಲ ದಾಖಲಿಸಲಲ್ಲವೇ ಛಾಯಾಗ್ರಹಣವೆಂಬ ಅದ್ಭುತ ಅನ್ವೇಷಣೆ ಒದಗಿಬಂದದ್ದು? ಜೀವನದ ಸುಂದರ ಗಳಿಗೆಗಳನ್ನು ಸವಿ ನೆನಪುಗಳಾಗಿ ಉಳಿಸುವ ಹಾದಿಯಲ್ಲಿ ಛಾಯಾಚಿತ್ರಗಳೊಂದಿಗೆ ದೃಶ್ಯಗಳನ್ನೂ ದಾಖಲಿಸುವ ವಿಡಿಯೊ ಚಿತ್ರೀಕರಣ ಜೊತೆಯಾಯಿತು. ಸಮಯದ ಜೊತೆಜೊತೆಗೆ ಛಾಯಾಗ್ರಹಣ, ವಿಡಿಯೊಗ್ರಫಿಯಲ್ಲಿ ತಾಂತ್ರಿಕತೆ ಮಾತ್ರವಲ್ಲ, ಪರಿಕಲ್ಪನೆಯಲ್ಲಿಯೂ ಹೊಸತನ ಮೇಳೈಸಿತು. ಕ್ರಿಯಾಶೀಲತೆಯೂ ಸೇರಿ ನೂತನ ಪರಿಕಲ್ಪನೆಗಳು ಹುಟ್ಟಿಕೊಂಡವು.

ಹಾಫ್ ಸ್ಯಾರಿ, ಬ್ಯಾಚುಲರ್ ಪಾರ್ಟಿ, ಬ್ರೈಡ್ ಟು ಬಿ, ಪ್ರಿ-ವೆಡಿಂಗ್, ವೆಡಿಂಗ್, ಪ್ರೆಗ್ನೆನ್ಸಿ, ಬೇಬಿ ಶೌವರ್, ನ್ಯೂ ಬಾರ್ನ್ ವಿಡಿಯೊಗ್ರಫಿ... ಹೀಗೆ ಜೀವನದ ಪ್ರಮುಖ ಘಟ್ಟಗಳಲ್ಲಿನ ಸುಮಧುರ ಕ್ಷಣಗಳನ್ನು ಕ್ಯಾಂಡಿಡ್ ಆಗಿ ದಾಖಲಿಸುವ ವಿವಿಧ ಧಾಟಿಯ ವಿಡಿಯೊಗ್ರಫಿಗಳು ಸದ್ದು ಮಾಡಿದವು. ಇದೀಗ ಸ್ನೇಹಿತರ ಸರದಿ.

ಗೆಳೆಯರೊಡನೆ ಕೂಡಿ, ಹಾಡಿ, ನಲಿದು, ಆ ಖುಷಿಯನ್ನು ದಾಖಲಿಸುವ 'ಬೆಸ್ಟ್ ಫ್ರೆಂಡ್ಸ್ ವಿಡಿಯೊಗ್ರಫಿ' ಈಗ ಯುವಜನರಿಗೆ ಅದರಲ್ಲೂ ಹೆಣ್ಣುಮಕ್ಕಳಿಗೆ ಅಚ್ಚುಮೆಚ್ಚು. ಸ್ನೇಹಿತರ ಈ ವಿಡಿಯೊಗ್ರಫಿಯಲ್ಲಿಯೂ ಹಲವು ನಮೂನೆಗಳಿವೆ. ಹಿಂದಿನ ನೆನಪುಗಳನ್ನು ಮೆಲುಕು ಹಾಕುವ ರೀತಿಯ ವಿಡಿಯೊಗಳದ್ದು ಒಂದು ವಿಧ. ಹಳೆಯ ಫೋಟೊ, ವಿಡಿಯೊಗಳನ್ನು ಇಂದಿನ ವಿಡಿಯೊ, ಫೋಟೊಗಳೊಂದಿಗೆ ಸೇರಿಸಿ, ಅದಕ್ಕೆ ಸಂಗೀತ ಸಂಯೋಜಿಸಿ ಹೊಸ ವಿಡಿಯೊ ಮಾಡುವುದು. ಎರಡನೆಯದಾಗಿ, ಪ್ರಸ್ತುತ ಚಾಲ್ತಿಯಲ್ಲಿರುವ ಹಾಡಿನೊಂದಿಗೆ ತಮ್ಮ ಛಾಯಾಚಿತ್ರಗಳನ್ನು ಪೋಣಿಸಿ ವಿಡಿಯೊ ಮಾಡುವುದು.

ಮೂರನೆಯದಾಗಿ, 'ನಮ್ಮ ಜೀವನದಲ್ಲಿನ ಒಂದು ದಿನ' (ಎ ಡೇ ಇನ್ ಅವರ್ ಲೈಫ್) ಎಂಬ ಪರಿಕಲ್ಪನೆಯೊಂದಿಗೆ ತಮ್ಮ ಹಾಗೂ ತಮ್ಮ ಸ್ನೇಹಿತರ ದೈನಂದಿನ ಚಿಕ್ಕಪುಟ್ಟ ಚಟುವಟಿಕೆಗಳನ್ನೇ ದಾಖಲಿಸಿ ವಿಡಿಯೊ ಮಾಡಿ ತಮ್ಮ ನಡುವಿನ ನಂಟನ್ನು ಇನ್ನಷ್ಟು ಬಲಪಡಿಸಿಕೊಳ್ಳುವುದು.

ನಾಲ್ಕನೆಯದಾಗಿ, ನೆನಪುಗಳನ್ನು ಮರುಸೃಷ್ಟಿಸುವುದು. ಹಿಂದಿನ ಕೆಲವು ನೆನಪುಗಳನ್ನು, ತಮ್ಮಿಷ್ಟದ ಸಂಗತಿಗಳನ್ನೇ ಮರುಸೃಷ್ಟಿಸಿ ವಿಡಿಯೊ ಮಾಡುವುದು. ಭಾವನಾತ್ಮಕ, ತಮಾಷೆ, ಸ್ಫೂರ್ತಿದಾಯಕ... ಹೀಗೆ ಯಾವುದೇ ಸಂಗತಿಯಾಗಿರಬಹುದು. ಈ ವಿಡಿಯೊಗ್ರಫಿಯಲ್ಲಿ ಮತ್ತೊಂದು ವಿಧಾನ, ಪಾತ್ರಾಧಾರಿತ ವಿಡಿಯೊ ಸೃಷ್ಟಿ. ಸ್ನೇಹಿತರ ನಿರ್ದಿಷ್ಟ ನಡವಳಿಕೆಗೆ ತಕ್ಕಂತೆ ತಮಾಷೆಯಾಗಿ ವಿಡಿಯೊ ಮಾಡುವುದು. ಮತ್ತೊಂದು, ಸಣ್ಣ ರೂಪದಲ್ಲಿ ಕಥೆ ಹೇಳುವ ವಿಡಿಯೊ ರೂಪಿಸುವುದು. ಸ್ನೇಹಿತರು ಸೇರಿ ತಮ್ಮ ಸ್ನೇಹದ ಕುರಿತಂತೆ ಚಿಕ್ಕ ಟಿಪ್ಪಣಿ ಮಾಡಿ ಜನಪ್ರಿಯ ಸಂಗೀತವನ್ನು ಸೇರಿಸಿ ವಿಡಿಯೊ ರೂಪಿಸುವುದು.

ಇವುಗಳ ಹೊರತಾಗಿ ಈಗ ಹೆಚ್ಚು ಚಾಲ್ತಿಯಲ್ಲಿರುವುದು ಥೀಮ್ ಆಧಾರಿತ ವಿಡಿಯೊ ಶೂಟ್. ಸ್ನೇಹಿತರು ಕೂಡಿ ನಿರ್ದಿಷ್ಟ ಬಣ್ಣದ, ಒಂದೇ ರೀತಿಯ ಉಡುಪು ಧರಿಸಿ ತಮ್ಮ ನೆಚ್ಚಿನ ಹಾಡಿಗೆ ಹೆಜ್ಜೆ ಹಾಕುವುದು, ಇಲ್ಲವೇ ಒಟ್ಟಾಗಿ ಕಾಲ ಕಳೆಯುತ್ತಲೇ ಆ ಕ್ಯಾಂಡಿಡ್ ಕ್ಷಣಗಳನ್ನು ದಾಖಲಿಸುವುದು.

ನೋವು ನಲಿವಿನಲ್ಲಿ ಹೆಗಲಾಗಿ ನಿಲ್ಲುವಂಥ ಭಾವ ಸ್ಫುರಿಸುವ ಈ ವಿಡಿಯೊ ಪ್ರಕಾರವು ಗೆಳೆತನದ ಐಕ್ಯತೆಯನ್ನು ಎಂದಿಗೂ ಅಚ್ಚಳಿಯದೆ ಮನದಲ್ಲಿ ಉಳಿಸುವ ಒಂದು ಭಾವುಕ ಯಾನವೆನಿಸಿದೆ.

ಸ್ನೇಹವನ್ನು, ಅದರ ಭಾವುಕತೆಯನ್ನು ಅಭಿವ್ಯಕ್ತಪಡಿಸಲು ಕಾಲಕ್ಕೆ ತಕ್ಕಂತೆ ದಾರಿ, ಆಯ್ಕೆಗಳೂ ವಿಸ್ತಾರವಾಗುತ್ತಿವೆ. ಎಲ್ಲ ಬೇಲಿಗಳನ್ನೂ ಮೀರಿ ಹಬ್ಬುವಂಥ, ನಮ್ಮೊಳಗನ್ನು ಅರಳಿಸುವಂಥ ಸ್ನೇಹವೆಂಬ ಈ ಬಳ್ಳಿಗೆ ನೀರೆರೆಯಲು ನೆಪ ಯಾವುದಾದರೇನು?

ಸಂತೋಷವೇ ಮುಖ್ಯ

ಮಮತಾ ಶೆಟ್ಟಿ

ಬೆಂಗಳೂರಿನ ಮಮತಾ ಶೆಟ್ಟಿ ತಮ್ಮ ಸ್ನೇಹಿತೆಯರ ಪುಟ್ಟದೊಂದು ವಲಯವನ್ನೇ ಹೊಂದಿದ್ದಾರೆ. ಸದಾ ನಗು ನಗುತ್ತಾ ಇರಬೇಕು ಎಂದು ಬಯಸುವ ಈ ಸ್ನೇಹಿತೆಯರ ಗುಂಪು ತಮ್ಮ ಸಂತೋಷಕೂಟಗಳ ವಿಡಿಯೊಗಳನ್ನು ಮಾಡುತ್ತಾ ಖುಷಿಪಡುತ್ತದೆ. 'ನಮ್ಮ ಸ್ನೇಹವನ್ನು ಅಭಿವ್ಯಕ್ತಪಡಿಸಲು ವಿಡಿಯೊ ಒಂದು ನೆಪವಷ್ಟೇ. ಹಳೆಯ ವಿಡಿಯೊಗಳನ್ನು ನೋಡುವಾಗ ಸುಮಧುರ ನೆನಪುಗಳು ಖುಷಿ ನೀಡುತ್ತವೆ, ಮನಕ್ಕೆ ಉತ್ಸಾಹ ತುಂಬುತ್ತವೆ' ಎನ್ನುತ್ತಾರೆ ಮಮತಾ.

ಸುಂದರ ಸ್ನೇಹವಿದು...

ಕಾವ್ಯಶ್ರೀ , ನಂದಿನಿ ಹೆಗ್ಡೆ

ಶಿವಮೊಗ್ಗದ ಕಾವ್ಯಶ್ರೀ ಹಾಗೂ ನಂದಿನಿ ಹೆಗ್ಡೆ, ಥೀಮ್ ಆಧಾರಿತ ವಿಡಿಯೊ ಶೂಟ್ ಮಾಡಿಸಿದ್ದಾರೆ. ತಮ್ಮ ಸ್ನೇಹದ ಪರಿಯನ್ನು ವಿಡಿಯೊ ಮೂಲಕ ತೆರೆದಿಟ್ಟಿದ್ದಾರೆ. ಅವರು ಹೇಳುವಂತೆ: ನಮ್ಮ 20 ವರ್ಷಗಳ ಸ್ನೇಹಬಂಧವನ್ನು ಜೀವನವಿಡೀ ನೆನಪಿಟ್ಟುಕೊಳ್ಳುವಂತೆ ಏನಾದರೂ ಹೊಸತನ್ನು ಮಾಡಬೇಕು ಎಂದು ಆಲೋಚಿಸುತ್ತಿದ್ದೆವು. ಆಗ ನಮಗೆ, ಈ ಮಾದರಿ ಸೂಕ್ತ ಎನಿಸಿತು. ಇಬ್ಬರೂ ಒಂದೇ ಬಗೆಯ ಸೀರೆ ಉಟ್ಟು 'ನಗೂ ಎಂದಿದೇ...' ಹಾಡಿಗೆ ವಿಡಿಯೊ ಮಾಡಿಸಿದೆವು. ನೈಜವಾಗಿರಬೇಕು ಎಂಬ ಕಾರಣಕ್ಕೆ, ಸುಮ್ಮನೆ ಬೀದಿಯಲ್ಲಿ ತಿರುಗಾಡುವಂತೆ, ಶಾಪಿಂಗ್ ಮಾಡುವಂತೆ, ಹರಟುತ್ತಿರುವಂತೆ ಇರುವ ದೃಶ್ಯಗಳನ್ನು ಒಟ್ಟುಗೂಡಿಸಿದೆವು. ಈ ವಿಡಿಯೊವನ್ನು ತುಂಬಾ ಜನ ಇಷ್ಟಪಟ್ಟರು. ನಮ್ಮಿಬ್ಬರಿಗೂ ಬಹಳ ಖುಷಿಯಾಯಿತು.



ಸಂಭ್ರಮ ಸೆರೆಹಿಡಿಯುವ ಖುಷಿ

ಸುಮಾರು ಒಂದು ವರ್ಷದಿಂದೀಚೆಗೆ ಫ್ರೆಂಡ್ಸ್ ಫೋಟೊಗ್ರಫಿ/ವಿಡಿಯೊಗ್ರಫಿಗೆ ಬೇಡಿಕೆ ಬರುತ್ತಿದೆ. ಸ್ನೇಹಿತರೆಲ್ಲಾ ಸೇರಿದಾಗ ಸಹಜವಾಗಿ ಯಾವ ರೀತಿ ಇರುತ್ತಾರೋ ಆ ಕ್ಯಾಂಡಿಡ್ ಕ್ಷಣಗಳನ್ನು ಸೇರಿಸಿ ವಿಡಿಯೊ ಮಾಡಬೇಕೆಂದು ಬಯಸುವವರು ಕೆಲವರಾದರೆ, ಒಂದೇ ಥರ ಉಡುಪುಗಳನ್ನು ಧರಿಸಿ ಅವರಿಗೆ ಏನು ಕ್ರೇಜ್ ಇರುತ್ತದೋ ಅದರೊಂದಿಗೆ ವಿಡಿಯೊಗ್ರಫಿ ಮಾಡಿಸಿ ಕೊಳ್ಳುವುದು ಮತ್ತೊಂದು ರೀತಿ. ಕೆಲವು ಸ್ನೇಹಿತೆಯರು ಒಟ್ಟಿಗೆ ಬೈಕ್ ಓಡಿಸುತ್ತಾ, ಕಾರು ಓಡಿಸುತ್ತಾ ಒಟ್ಟಿನಲ್ಲಿ ತಮ್ಮ ಹವ್ಯಾಸಗಳನ್ನೇ ಇಟ್ಟುಕೊಂಡು ಶೂಟ್ ಮಾಡಿಸಿಕೊಳ್ಳುತ್ತಾರೆ. ಅವರ ಖುಷಿಯನ್ನು ಸೆರೆಹಿಡಿಯುವುದು ನಮಗೂ ಖುಷಿ.

ದಿಲೀಪ್, ಛಾಯಾಗ್ರಾಹಕ

ಏನಿವರ ಬ್ಯೂಟಿ ಸೀಕ್ರೆಟ್?



ಗೌತಮಿ ಜಾಧವ್ ಕಿರುತೆರೆ ನಟಿ

ಚರ್ಮದ ಆರೋಗ್ಯಕ್ಕಾಗಿ ವೈದ್ಯರ ಸಲಹೆ ಪಡೆದಿರುವ ಕೆಲವು ಕ್ರೀಮ್‌ಗಳನ್ನು ಮಾತ್ರ ಹಚ್ಚುತ್ತೇನೆ. ಅದು ಬಿಟ್ಟರೆ ಶೂಟಿಂಗ್ ಇಲ್ಲದೆ ಮನೆಯಲ್ಲಿ ಇದ್ದಾಗ ಏನನ್ನೂ ಹಾಕದೆ ಹಾಗೇ ಬಿಡುತ್ತೇನೆ. ಇದರಿಂದ ಚರ್ಮದ ಕೋಶಗಳು ಸರಾಗವಾಗಿ ಉಸಿರಾಡಲು ಸಾಧ್ಯವಾಗುತ್ತದೆ.

ಚರ್ಮ ಟ್ಯಾನ್ ಆಗಿದ್ದಾಗ ತನ್ನಿಂತಾನೇ ಸರಿಪಡಿಸಿಕೊಳ್ಳುವ ಸಾಮರ್ಥ್ಯ ದೇಹಕ್ಕೆ ಇರುತ್ತದೆ. ಅದಕ್ಕೆ ಪೂರಕವಾಗಿ ಊಟದಲ್ಲಿ 'ಸಿ' ವಿಟಮಿನ್ ಇರುವ ಆಹಾರ ಪದಾರ್ಥಗಳು ಹೆಚ್ಚಾಗಿ ಇರುವಂತೆ ನೋಡಿಕೊಳ್ಳುತ್ತೇನೆ.

ಮೊದಲಿನಿಂದಲೂ ನನಗೆ ಎಣ್ಣೆ ಅಂಶವಿರುವ ಪದಾರ್ಥಗಳೆಂದರೆ ಇಷ್ಟವಾಗದು. ಹಾಗಾಗಿ, ಕುರುಕಲು ತಿಂಡಿಗಳನ್ನು ತಿನ್ನುವುದಿಲ್ಲ.

ಬ್ಲೂಬೆರ್ರಿ, ಸಿಟ್ರಿಕ್ ಅಂಶ ಇರುವ ಹಣ್ಣುಗಳನ್ನು ತಿನ್ನುತ್ತೇನೆ. ಬೆಳಿಗ್ಗೆ ಆಮ್ಲ, ಕರಿಬೇವು ಹಾಗೂ ನಿಂಬೆಹಣ್ಣು ಮಿಶ್ರಣದ ಐಸ್‌ಕ್ಯೂಬ್‌ಗಳನ್ನು ಬಿಸಿನೀರಿಗೆ ಹಾಕಿ ಕುಡಿಯುತ್ತೇನೆ. ನನ್ನದು ಕಾಂಬಿನೇಷನ್ ಸ್ಕಿನ್. ಕೆಲವು ಭಾಗ ಒಣಚರ್ಮವಾದರೆ, ಇನ್ನು ಕೆಲವು ಭಾಗ ಜಿಡ್ಡಿನ ಅಂಶದಿಂದ ಕೂಡಿರುತ್ತದೆ.

ಮೊದಲೆಲ್ಲ ಕಡಲೆಹಿಟ್ಟು ಹಚ್ಚುತ್ತಿದ್ದೆ. ಅದು ನನ್ನ ಚರ್ಮಕ್ಕೆ ಚೆನ್ನಾಗಿ ಒಗ್ಗುತ್ತಿತ್ತು. ಈ ಮಧ್ಯೆ ತುಂಬಾ ಮೊಡವೆಗಳಾದವು. ಹಾಗಾಗಿ, ವೈದ್ಯರು ಶಿಫಾರಸು ಮಾಡಿದ ಕ್ರೀಮ್‌ಗಳನ್ನಷ್ಟೇ ಹಚ್ಚುತ್ತೇನೆ. ಚರ್ಮ ತೇವಯುಕ್ತವಾಗಿರಲು ಚೆನ್ನಾಗಿ ನೀರು ಕುಡಿಯುತ್ತಿರಬೇಕು.

ವಾರಕ್ಕೆ ಮೂರು ಬಾರಿ ರಾತ್ರಿ ಹೊತ್ತು ಕೂದಲಿಗೆ ಚೆನ್ನಾಗಿ ಎಣ್ಣೆ ಹಚ್ಚಿ ಬೆಳಿಗ್ಗೆ ಸ್ನಾನ ಮಾಡುತ್ತೇನೆ. ಕಡಿಮೆ ರಾಸಾಯನಿಕ ಅಂಶಗಳಿರುವ, ಸಲ್ಫೇಟ್ ಮುಕ್ತವಾಗಿರುವ ಶ್ಯಾಂಪೂ ಬಳಸುತ್ತೇನೆ. ಮನೆಯಲ್ಲಿ ನಾನೇ ಸಿದ್ಧಪಡಿಸಿದ ಎಣ್ಣೆ 'ವನತೈಲಂ' ಅನ್ನು ಬಳಸುತ್ತೇನೆ. ಸಮಯವಿದ್ದಾಗ ಮೆಂತ್ಯ, ಮೊಸರು ಅಥವಾ ನೆಲ್ಲಿಕಾಯಿ ಪುಡಿ ಜತೆಗೆ ಮೊಸರು ಸೇರಿಸಿ ಹೇರ್‌ಪ್ಯಾಕ್ ಮಾಡಿಕೊಳ್ಳುತ್ತೇನೆ. ಇದು ಬಿಟ್ಟರೆ ಅಗಸೆ ಬೀಜದ ಹೇರ್‌ಪ್ಯಾಕ್ ಮಾಡಿಕೊಳ್ಳುತ್ತೇನೆ. ಸೌಂದರ್ಯ ಎನ್ನುವುದಕ್ಕೆ ನಿರ್ದಿಷ್ಟವಾದ ವ್ಯಾಖ್ಯಾನವಿಲ್ಲ. ಸಹಜವಾಗಿ ನಾವು ಹೇಗೆ ಇರುವುದಕ್ಕೆ ಬಯಸುತ್ತೇವೆಯೋ ಅದೇ ಸೌಂದರ್ಯ. ಅದು ನಮ್ಮೊಳಗೆ ಇರುವಂಥದ್ದು. ಸಕಾರಾತ್ಮಕ ಆಲೋಚನೆಗಳಲ್ಲಿ ಅಡಗಿರುವಂಥದ್ದು.

ಹದಿವಯಸ್ಸಿನಲ್ಲೂ ಬರುವುದೇ ಪಿಸಿಒಡಿ?

ಸ್ಪಂದನ
ಡಾ. ವೀಣಾ ಎಸ್. ಭಟ್

• ನನಗೆ ಒಬ್ಬಳೇ ಮಗಳು. 17 ವರ್ಷ, ಪಿಯುಸಿ ಓದುತ್ತಿದ್ದಾಳೆ. ಆರು ತಿಂಗಳ ಹಿಂದೆ ಆಗಾಗ ಸ್ವಲ್ಪ ಹೊಟ್ಟೆನೋವು ಬರುತ್ತಿತ್ತು. ಸ್ಕ್ಯಾನಿಂಗ್ ಮಾಡಿಸಿದಾಗ ಪಿಸಿಒಡಿ ಇದೆ ಎಂದು ತಿಳಿಯಿತು. ವೈದ್ಯರು ಮಾತ್ರೆ ಕೊಟ್ಟಿದ್ದರು. ಈಗ ಹೊಟ್ಟೆನೋವೇನೂ ಇಲ್ಲ. ಆದರೆ ಅವಳು ಪಿಸಿಒಡಿ ಬಗ್ಗೆ ಗೂಗಲ್‌ನಲ್ಲಿ ಹುಡುಕಾಡಿ, ತುಂಬಾ ಅಂತರ್ಮುಖಿಯಾಗಿ ಬಿಟ್ಟಿದ್ದಾಳೆ. ಈ ವಯಸ್ಸಿನಲ್ಲೇ ಪಿಸಿಒಡಿ ಆದರೆ ಮುಂದೆ ನಿಜವಾಗಿಯೂ ತೊಂದರೆಯೇ? ಅವಳು ದಪ್ಪವೂ ಇಲ್ಲ. ನನಗಂತೂ ತುಂಬಾ ಭಯವಾಗಿದೆ, ಏನು ಮಾಡುವುದು ಡಾಕ್ಟರೇ?

ಭಾರ್ಗವಿ, ಮಂಡ್ಯ

ಆತಂಕ ಪಡಬೇಡಿ. ಪಿಸಿಒಡಿ (ಪಾಲಿಸಿಸ್ಟಿಕ್ ಒವೇರಿಯನ್ ಡಿಸೀಸ್) ಇಂದು ಹತ್ತರಲ್ಲಿ ನಾಲ್ವರು ಮಹಿಳೆಯರನ್ನು ಬಾಧಿಸುವ, ಜೀವನಶೈಲಿ ಸಂಬಂಧಿತ ಆರೋಗ್ಯ ಸಮಸ್ಯೆ. ಸ್ವಲ್ಪ ಮಟ್ಟಿಗೆ ಆನುವಂಶೀಯ ಹಿನ್ನೆಲೆ, ಪರಿಸರದ ಅಂಶಗಳಿಂದಲೂ ಪ್ರಭಾವಿತವಾಗಿರುವ ಸಮಸ್ಯೆ ಇದು. ಪ್ರತಿ ತಿಂಗಳು ಅಂಡಾಶಯದಿಂದ ಅಂಡಾಣು ಸರಿಯಾಗಿ ಬಿಡುಗಡೆಯಾಗದೆ ಹಾಗೆಯೇ ಅಪಕ್ವವಾಗಿ ಇದ್ದು, ಅಂತಹ ಅಪಕ್ವ ಕೋಶಿಕೆಗಳು ಅಂಡಾಶಯದ ತೊಗಟೆಯ ಭಾಗದಲ್ಲಿ ಮುತ್ತು ಪೋಣಿಸಿದ ಹಾಗೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್‌ನಲ್ಲಿ ಕಾಣಿಸುತ್ತವೆ. ಇದರ ಜೊತೆಗೆ ಋತುಚಕ್ರದಲ್ಲಿ ಏರುಪೇರು ಆಗುವುದು, ಅಂದರೆ ಎರಡು– ಮೂರು ತಿಂಗಳಿಗೊಮ್ಮೆ ಋತುಸ್ರಾವ ಆರಂಭವಾಗಿ ದೀರ್ಘಾವಧಿ, ಅತಿಯಾಗಿ ರಕ್ತಸ್ರಾವ ಆಗಬಹುದು.

ಕೆಲವರಲ್ಲಿ ಪುರುಷರ ಹಾರ್ಮೋನಾದ ಟೆಸ್ಟೊಸ್ಟಿರಾನ್ ಹೆಚ್ಚಳ ಉಂಟಾಗಿ ಗದ್ದ, ಮೀಸೆಯ ಭಾಗ, ಎದೆ, ಹೊಟ್ಟೆಯಂತಹ ಕಡೆ ಅಸಹಜವಾಗಿ ಕೂದಲು ಕಾಣಿಸಿಕೊಂಡು (ಹರ್ಸುಟಿಸಂ), ಹಲವರು ಥ್ರೆಡಿಂಗ್, ಎಲೆಕ್ಟ್ರೋಲಿಸಿಸ್‌ನಂತಹವುಗಳಿಗೆ ಮೊರೆ ಹೋಗುವುದು ಸಾಮಾನ್ಯ. ಅತಿಯಾದ ಮೊಡವೆಯ ಕಾರಣದಿಂದ ಚರ್ಮರೋಗ ತಜ್ಞರಲ್ಲಿಗೆ ಹೋದಾಗಲೇ ಎಷ್ಟೋ ಬಾರಿ ಪಿಸಿಒಡಿ ಪತ್ತೆಯಾಗುತ್ತದೆ. ಈ ಸಮಸ್ಯೆ ಹದಿವಯಸ್ಸಿನಿಂದ ಹಿಡಿದು ವಯಸ್ಕರವರೆಗೆ ಯಾರನ್ನು ಬೇಕಾದರೂ ಬಾಧಿಸಬಹುದು. ಇದನ್ನು ಹಾಗೇ ಬಿಟ್ಟರೆ ದೀರ್ಘಾವಧಿ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡಬಹುದು. ಇದನ್ನೆಲ್ಲ ಅಂತರ್ಜಾಲದಲ್ಲಿ ಸಿಕ್ಕ ಮಾಹಿತಿಯಿಂದ ತಿಳಿದು ನಿಮ್ಮ ಮಗಳು ಖಿನ್ನತೆಗೆ ಒಳಗಾಗಿರಬಹುದು. ಆದರೆ ಹದಿವಯಸ್ಸಿನಲ್ಲಿ ಪ್ರೌಢಾವಸ್ಥೆಯ ಸಾಮಾನ್ಯ ಗುಣಲಕ್ಷಣಗಳಾದ ಮೊಡವೆ, ಮುಟ್ಟಿನ ಏರುಪೇರು ಹಾಗೆಯೇ ಸ್ಕ್ಯಾನಿಂಗ್ ಮಾಡಿಸಿದಾಗ ಸಹಜವಾಗಿಯೇ ಬಹುಪೊಳ್ಳುಗುಳ್ಳೆಗಳು (ಸಿಸ್ಟ್) ಕಂಡುಬರಬಹುದು. ಒಂದುವೇಳೆ ಹದಿವಯಸ್ಸಿನ ಹೆಣ್ಣುಮಕ್ಕಳಲ್ಲಿ ನಿಜವಾಗಿಯೂ ಪಿಸಿಒಡಿ ರೋಗಲಕ್ಷಣಗಳು ಕಂಡುಬಂದರೂ ಅವರನ್ನು ಪಿಸಿಒಡಿ ಆಗುವ ಅಪಾಯದಲ್ಲಿ ಇರುವವರು ಎಂದಷ್ಟೇ ಗುರುತಿಸಬೇಕು. ಆಗಾಗ್ಗೆ ಮರು ಮೌಲ್ಯಮಾಪನ ಮಾಡಿಸುತ್ತಾ ಅಂತಹ ಹೆಣ್ಣುಮಕ್ಕಳಿಗೆ ಕುಟುಂಬದ ಸದಸ್ಯರೇ ಆಪ್ತಸಮಾಲೋಚನೆ ನಡೆಸುತ್ತಾ, ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಜೀವನಶೈಲಿ ಬದಲಿಸಿಕೊಂಡರೆ, ಮುಂದಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂಬುದನ್ನು ಮನದಟ್ಟು ಮಾಡಿಸಬೇಕು.

ನಿಮ್ಮ ಮಗಳು ತೂಕವನ್ನೇನೂ ಕಡಿಮೆ ಮಾಡಿಕೊಳ್ಳುವುದು ಬೇಡ. ಪ್ರೋಟೀನ್ ಸೇವನೆಯನ್ನು ಹೆಚ್ಚಿಸಲಿ. ಊಟದಲ್ಲಿ ಹಸಿರುಸೊಪ್ಪು, ತರಕಾರಿ ಹೆಚ್ಚಾಗಿ ಇರಲಿ. ಪ್ರತಿದಿನ ಒಂದು ಗಂಟೆ ಸ್ನಾಯುಗಳನ್ನು ಬಲಪಡಿಸುವ ವ್ಯಾಯಾಮ ಮಾಡಲಿ. ರಾತ್ರಿ 6ರಿಂದ 8 ತಾಸು ಸುಖನಿದ್ರೆ ಅಗತ್ಯ. ಮೊಬೈಲ್, ಲ್ಯಾಪ್‌ಟಾಪ್ ಬಳಕೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಲಿ. ದೀರ್ಘ ಉಸಿರಾಟ, ಪ್ರಾಣಾಯಾಮ, ಯೋಗ ರೂಢಿಸಿಕೊಳ್ಳಲಿ. ಆಗ ಖಂಡಿತವಾಗಿಯೂ ಅವಳು ಪಿಸಿಒಡಿ ಸಮಸ್ಯೆಯನ್ನು ಜಯಿಸಬಹುದು.

ಅಮ್ಮ ಹೇಳ್ತಾಳೆ

ಶಾವಿಗೆ ಪಾಯಸ ಮಾಡುವಾಗ ಹಾಲು ಸಂಪೂರ್ಣ ಕುದಿ ಬಂದ ಬಳಿಕವೇ ಶಾವಿಗೆ ಹಾಕಬೇಕು. ಪಾಯಸ ತಯಾರಾಗಿ ಇಳಿಸುವಾಗ ಎರಡು ಲವಂಗ ಹಾಕಬೇಕು. ಆಗ ಅದರ ಘಮ ಹೆಚ್ಚುತ್ತದೆ.

ರಸಾಸ್ವಾದ

ಚೇತನ ಉಕ್ಕಿಸುವ ಪಾಕ ವೈವಿಧ್ಯ

ಚೇತನ್ ರಾವ್

ಚೇತನ್ ಹೇಳುತ್ತಾರೆ

- ಮೈಸೂರ್‌ಪಾಕ್ ತಯಾರಿಸುವುದು ಚಿಟಿಕೆ ಹೊಡೆದಷ್ಟೇ ಸುಲಭ. ಒಂದು ನೂಲು ಸಕ್ಕರೆ ಪಾಕ ಹಿಡಿದರೆ ಮೈಸೂರ್‌ಪಾಕ್ ಹದವಾಗಿ ಬಂದಂತೆಯೇ. ಒಂದು ಲೋಟ ಸಕ್ಕರೆಗೆ ಕಾಲು ಲೋಟ ನೀರು ಹಾಕಿದರೆ ಸಾಕು ಪಾಕ ಬೇಗ ಬರುತ್ತದೆ.
- ಮೈಸೂರ್‌ಪಾಕ್ ತಯಾರಿಸಲು 'ಒನ್, ಟೂ, ತ್ರೀ' ಅಳತೆ ಇಟ್ಟುಕೊಳ್ಳಿ. 1 ಕಪ್ ಕಡಲೆಹಿಟ್ಟು, 2 ಕಪ್ ಸಕ್ಕರೆ, ಮೂರು ಕಪ್‌ನಲ್ಲಿ ಎರಡು ಕಪ್ ಎಣ್ಣೆ, ಒಂದು ಲೋಟ ತುಪ್ಪ. ಇವಿಷ್ಟೇ ಪದಾರ್ಥದಲ್ಲಿ, ಇದಿಷ್ಟೇ ಅಳತೆಯಲ್ಲಿ, ಬಾಯಿಗಿಟ್ಟರೆ ಕರಗುವ ಮೈಸೂರ್‌ಪಾಕ್ ತಯಾರಿಸಬಹುದು.

ಬೆಳ್ಳಿತೆರೆಯಲ್ಲಿ ಬಣ್ಣ ಹಚ್ಚುವ ಅವಕಾಶವನ್ನು ನಯವಾಗೇ ತಿರಸ್ಕರಿಸಿದ, ಒದಗಿಬಂದ ಸರ್ಕಾರಿ ಹುದ್ದೆಯನ್ನು ಪ್ರಜ್ಞಾಪೂರ್ವಕವಾಗೇ ದೂರ ಮಾಡಿದ, ಕ್ರಿಕೆಟ್, ಕಬಡ್ಡಿಯಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಅರ್ಹತೆ ಪಡೆದರೂ ಉತ್ಸಾಹ ತೋರದೆ ಅಡುಗೆ ಮನೆಯ ಹಾದಿ ಹಿಡಿದ ಮೈಸೂರಿನ ಚೇತನ್ ರಾವ್ 'ಅಡುಗೆಯೇ ದೇವರು' ಎಂದು ನಂಬಿ, ಅದರಲ್ಲೇ ಬದುಕಿನ ಹೊಳಹುಗಳನ್ನು ಕಂಡುಕೊಂಡವರು.

ಸಾಂಪ್ರದಾಯಿಕ ಅಡುಗೆಗೆ ಹೊಸತೊಂದು ಲೇಪ ಹಚ್ಚಿ ಮೌಲ್ಯವರ್ಧನೆ ಮಾಡುವುದರಲ್ಲಿ ಚೇತನ್ ಸಿದ್ಧಹಸ್ತರು. ಮನೆಯಲ್ಲಿ ಇರುವ ಪದಾರ್ಥಗಳನ್ನೇ ಬಳಸಿ ಸುಲಭವಾಗಿ ಮಾಡಬಲ್ಲ, ಭಿನ್ನ ರುಚಿ ನೀಡುವ ಅಡುಗೆ ಕಲೆಯನ್ನು ಕರಗತ ಮಾಡಿಕೊಂಡಿರುವ ಅವರು, ಎಂಥದ್ದೇ ಪದಾರ್ಥ ಕೊಟ್ಟರೂ ಅದರಲ್ಲಿ ಹೊಸ ರುಚಿ ಅರಸುತ್ತಾರೆ.

ತಂದೆಯ ಅಡುಗೆ ಕಾಯಕವನ್ನೇ ಮುಂದುವರಿಸಿ ಮೈಸೂರಿನಲ್ಲಿ ಸಿಎಸ್‌ಆರ್ ಕೇಟರಿಂಗ್ ಮೂಲಕ ತಮ್ಮ ಪಾಕದ ಗಮ್ಮತ್ತನ್ನು 13 ವರ್ಷಗಳಿಂದ ಉಣಬಡಿಸುತ್ತಿದ್ದಾರೆ. ಚೇತನ್ ಅವರ ಫೇಣಿ, ಚಿರೋಟಿ ಎಂದರೆ ತಿನಿಸುಪ್ರಿಯರು ಬಾಯಿಚಪ್ಪರಿಸುತ್ತಾರೆ. ಮೈಸೂರಿಗಷ್ಟೇ ಅವರ ಪಾಕ ವೈವಿಧ್ಯ ಸೀಮಿತವಾಗಿಲ್ಲ, ಭಾಷೆಯ ಗಡಿ ದಾಟಿ ಆಹಾರಪ್ರಿಯರ ಮನತಟ್ಟಿದೆ. ಇದು ಸಾಧ್ಯವಾಗಿರುವುದು ಅರುಣ್ ಅಬ್ಬಿಗೆರೆ ಅವರ 'ಮನೆಮನೆ ರಸದೂಟ' ಯೂಟ್ಯೂಬ್ ಚಾನೆಲ್ ಮೂಲಕ.

'ಸಿಂಪಲ್ ಆಗಿ ಮೂರು ನಿಮಿಷದಲ್ಲೇ ಮಾಡಿಕೊಳ್ಳಿ' ಎಂದೇ ರೆಸಿಪಿ ಹೇಳಿಕೊಡಲು ಶುರುಮಾಡುವ ಚೇತನ್, ಎಂತಹ ಕಷ್ಟದ ಅಡುಗೆಯನ್ನೂ ಸುಲಭದಲ್ಲಿ ತಯಾರಿಸುವ ಗುಟ್ಟನ್ನು ಬಿಚ್ಚಿಡುತ್ತಾರೆ. ಸಾಂಪ್ರದಾಯಿಕ ಅಡುಗೆಯಿಂದ ಹಿಡಿದು ಮಕ್ಕಳಿಗೆ ಇಷ್ಟವಾಗುವ ಆರೋಗ್ಯಕರ ಸ್ನ್ಯಾಕ್ಸ್ ತಯಾರಿಯವರೆಗೆ ಅವರದು ಎತ್ತಿದ ಕೈ. ಯೂಟ್ಯೂಬ್ ಅಂಗಳದಲ್ಲಿ ಅವರು ಹಂಚಿಕೊಳ್ಳುವ ರೆಸಿಪಿಗಳಿಗಾಗಿ ತಿನಿಸುಪ್ರಿಯರು ಕಾತರಿಸುತ್ತಿರುತ್ತಾರೆ. ನಿತ್ಯದ ಅಡುಗೆಗಳಿಗೇ ಭಿನ್ನ ರುಚಿ ಕೊಡುವ ಅವರು, ಮಾತಿನ ಹದದಲ್ಲೇ ಜಿಹ್ವಾಚಾಪಲ್ಯ ಹೆಚ್ಚಿಸುತ್ತಾರೆ. ಅವರು ಹೇಳಿಕೊಟ್ಟ ಟೊಮೆಟೊ ಬಾತ್, ಪುಲಾವ್ ರೆಸಿಪಿಗಳು ಅಲ್ಪ ಸಮಯದಲ್ಲೇ 25 ಲಕ್ಷ ವೀಕ್ಷಣೆ ಪಡೆದಿರುವುದು ಅವರ ಪಾಕ ಪ್ರಾವೀಣ್ಯವನ್ನು ಸಾರುತ್ತವೆ.

ಜೇನುತುಪ್ಪದ ಕೇಸರಿಬಾತ್, ದಮ್ ವಾಂಗಿಬಾತ್, ಅವಲಕ್ಕಿ ಬಿಸಿಬೇಳೆಬಾತ್, ರಾಯಲ್ ರಸಂ, ವೆಜ್ ದಮ್ ಬಿರಿಯಾನಿ, ಕೊಳುಕಟ್ಟೈ ಇಡ್ಲಿ, ಸ್ಟಫ್ಡ್ ಇಡ್ಲಿ, ಕಾಯಿಸಾಸಿವೆ ಚಿತ್ರಾನ್ನ, ಶಾಯಿ ಮಧುರ ರಬಡಿ, ಟಿಕ್ಕಿ ಹರಬರ ಕಬಾಬ್, ಬರ್ಗರ್... ಹೀಗೆ ಅವರ ಪಾಕ ವೈವಿಧ್ಯದ ಪಟ್ಟಿ ಬೆಳೆಯುತ್ತದೆ.

ಮೈಸೂರೆಂದರೆ ಸ್ಮೃತಿಪಟಲದಲ್ಲಿ ಸುಳಿಯುವುದೇ 'ಮೈಸೂರ್‌ಪಾಕ್'. ಅದನ್ನು ಸವಿಯಲು ಸಿಹಿತಿಂಡಿಯ ಮಳಿಗೆಗೇ ಹೋಗಬೇಕೆಂದಿಲ್ಲ. ಅದೇ ಶೈಲಿಯಲ್ಲಿ ಮನೆಯಲ್ಲೇ ಸುಲಭದಲ್ಲಿ ಮಾಡಿ ಎಂದು ಅಷ್ಟೇ ಸರಳವಾಗಿ ಹೇಳಿಕೊಡುತ್ತಾರೆ ಚೇತನ್. ಆಗೆಲ್ಲ ಮದುವೆ ಮನೆಗಳೆಂದರೆ ಲಾಡು (ಬೂಂದಿ) ಹಾಜರಿ ಇದ್ದೇ ಇರುತ್ತಿತ್ತು. ಈಗ ಹೋಳಿಗೆ ಆ ಸ್ಥಾನವನ್ನು ಆಕ್ರಮಿಸಿದೆ. ಒಂದೇ ಬಗೆಯ ಹೋಳಿಗೆ ತಿಂದು ಬೇಸರ ಎನಿಸಿದರೆ ಚೇತನ್ ವೈವಿಧ್ಯಮಯ ಹೋಳಿಗೆ ತಯಾರಿಯನ್ನು ಹೇಳಿಕೊಡುತ್ತಾರೆ. ಬೇಳೆ ಹೋಳಿಗೆ, ಕಾಯಿ ಹೋಳಿಗೆ ಸಾಮಾನ್ಯವಾದವು, ಈಗ ಪೈನಾಪಲ್ ಹೋಳಿಗೆ, ಖರ್ಜೂರದ ಹೋಳಿಗೆ, ಬಾದಾಮ್ ಹೋಳಿಗೆ, ಕ್ಯಾರೆಟ್ ಹೋಳಿಗೆ, ಖೋವಾ ಹೋಳಿಗೆ, ಚಾಕೊಲೇಟ್ ಹೋಳಿಗೆ, ಗುಲ್ಕನ್ ಹೋಳಿಗೆ, ಹಲಸಿನ ಹೋಳಿಗೆ... ಹೀಗೆ ತರಹೇವಾರಿ ಹೋಳಿಗೆ ತಯಾರಿಯಲ್ಲಿ ಚೇತನ್ ಅವರದು ಎತ್ತಿದ ಕೈ. ಇವರ ಅಡುಗೆ ನೋಡಿ ಕಲಿತು ಕೆಲವರು ಹೋಟೆಲ್ ಶುರುಮಾಡಿದ್ದರೆ, ಇನ್ನು ಕೆಲವರು ಮನೆಯಲ್ಲೇ ಕೇಟರಿಂಗ್ ಆರಂಭಿಸಿದ್ದಾರೆ.

ಸುಮಾ ಬಿ.

ಸವಿದಿದ್ದೀರ ಕಾಮನಬಿಲ್ಲಿನ ಪೂರಿ?

ಆಗಸದಲ್ಲಿ ಕಾಮನಬಿಲ್ಲನ್ನು ನೋಡಿರುತ್ತೇವೆ. ಇದೇನಿದು ಪೂರಿ ಎಂದಿರಾ? ಚೇತನ್ ರಾವ್ ಅವರು ಕಾಮನಬಿಲ್ಲಿನ ಕೆಲವು ಬಣ್ಣಗಳನ್ನು ಊಟದ ತಟ್ಟೆಗೇ ಬರುವಂತೆ ಮಾಡಿದ್ದಾರೆ! ಮಕ್ಕಳನ್ನಂತೂ ಸೂಜಿಗಲ್ಲಿನಂತೆ ಸೆಳೆಯುವ ಈ ಬಣ್ಣಬಣ್ಣದ ಪೂರಿಯನ್ನು ಹೀಗೆ ಮಾಡಿ:

ಏನೇನು ಬೇಕು?: ಮೂರು ಕಪ್ ಗೋಧಿಹಿಟ್ಟು, ಮೂರು ಟೀ ಚಮಚ ಚಿರೋಟಿ ರವೆ, ಬಣ್ಣಕ್ಕೆ ಸ್ವಲ್ಪ ಅರಸಿನ. ರುಬ್ಬಿ ಸೋಸಿದ ಬೀಟ್‌ರೂಟ್ ರಸ, ಬೇಯಿಸಿ ರುಬ್ಬಿದ ಪಾಲಾಕ್ ರಸ, ರುಚಿಗೆ ಉಪ್ಪು, ಕರಿಯಲು ಎಣ್ಣೆ.

ಹೀಗೆ ಮಾಡಿ: ಒಂದೊಂದು ಕಪ್ ಗೋಧಿಹಿಟ್ಟನ್ನು ಪ್ರತ್ಯೇಕವಾಗಿ ಮೂರು ಪಾತ್ರೆಗಳಲ್ಲಿ ಹಾಕಬೇಕು. ಅದಕ್ಕೆ ಒಂದೊಂದು ಚಮಚ ಚಿರೋಟಿ ರವೆ, ಚಿಟಿಕೆ ಉಪ್ಪು ಹಾಕಬೇಕು. ಬಳಿಕ ಒಂದಕ್ಕೆ ಅರಸಿನ, ಇನ್ನೊಂದಕ್ಕೆ ಬೀಟ್‌ರೂಟ್ ರಸ, ಮಗದೊಂದಕ್ಕೆ ಪಾಲಾಕ್ ರಸ ಹಾಕಿ ಪೂರಿ ಹದಕ್ಕೆ ಕಲೆಸಿ 10 ನಿಮಿಷ ತಟ್ಟೆ ಮುಚ್ಚಿ ಇಡಬೇಕು. ಬಳಿಕ ಮೂರು ಉಂಡೆಗಳನ್ನಾಗಿ ಮಾಡಿಟ್ಟು ಚಪಾತಿಯಷ್ಟು ಅಗಲಕ್ಕೆ ಪ್ರತ್ಯೇಕವಾಗಿ ಲಟ್ಟಿಸಿ ಇಟ್ಟುಕೊಳ್ಳಬೇಕು.

ಮೂರನ್ನೂ ಒಂದರಮೇಲೆ ಒಂದು ಹಾಕಿ ಸುತ್ತಬೇಕು (ರೋಲ್ ಮಾಡಿ). ಐದು ನಿಮಿಷದ ಬಳಿಕ ರೋಲ್ ಅನ್ನು ಕತ್ತರಿಸಿ ಉಂಡೆಗಳನ್ನಾಗಿ ಮಾಡಿ, ಪೂರಿ ಅಳತೆಯಲ್ಲಿ ಲಟ್ಟಿಸಿ ಎಣ್ಣೆಯಲ್ಲಿ ಕರಿದರೆ ಕಾಮನಬಿಲ್ಲಿನ ಪೂರಿ ಸವಿಯಲು ಸಿದ್ಧ. ಬಣ್ಣಬಣ್ಣದ ಈ ಪೂರಿ ಮಕ್ಕಳಿಗಂತೂ ಅತ್ಯಾಕರ್ಷಕ. ಸಾಗೂ, ಕಾಯಿಚಟ್ನಿ ಜೊತೆ ಸವಿಯಲು ಕೊಡಬಹುದು.

ಮಂಡಿ ನೋವಿಗೆ ಸರ್ಜರಿಯಿಲ್ಲದೆ ಚಿಕಿತ್ಸೆ

ಕೇವಲ 30ರಿಂದ 60 ನಿಮಿಷ ಚಿಕಿತ್ಸೆಯಿಂದ ಮಂಡಿನೋವಿಗೆ ಉಪಶಮನ, 48 ಗಂಟೆಯಲ್ಲೇ ಮನೆಗೆ ವಾಪಸ್



ಮಂಡಿನೋವು ಮಾತ್ರವಲ್ಲದೇ ಭುಜ, ಕುತ್ತಿಗೆ ಸೇರಿದಂತೆ ವಿವಿಧ ನೋವುಗಳಿಂದ ಬಳಲುತ್ತಿರುವವರಿಗೆ ಶಸ್ತ್ರ ಚಿಕಿತ್ಸೆಯಿಲ್ಲದೇ ನೋವು ಉಪಶಮನ ಮಾಡುವ ವ್ಯವಸ್ಥೆ ನಮ್ಮಲ್ಲಿದೆ. ಸರಳ ಚಿಕಿತ್ಸೆಯೊಂದಿಗೆ ಶೀಘ್ರ ಉಪಶಮನಕ್ಕಾಗಿ ನಮ್ಮ ಚಿಕಿತ್ಸಾಲಯಕ್ಕೆ ಭೇಟಿ ನೀಡಬಹುದು.
ಡಾ.ಸ್ವಾಗತೇಶ್, ನೋವು ನಿವಾರಕ ತಜ್ಞ, ಪೇನ್ ಕ್ಲಿನಿಕ್ ಅಲೀವಿಯೇಟ್, ಬೆಂಗಳೂರು.

ಬೆಂಗಳೂರು : ದೇಹಕ್ಕೆ ವಯಸ್ಸಾದಂತೆ ಮಂಡಿ ನೋವು ದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಈ ನೋವಿನಿಂದ ತೀವ್ರ ಸಂಕಟ ಎದುರಿಸಿ, ದೊಡ್ಡ ಚಿಕಿತ್ಸೆಗಳ ಮೊರೆ ಹೋಗಬೇಕಾಗುತ್ತದೆ. ಆದರೆ, ಈ ಸಮಸ್ಯೆಗೆ ಸರ್ಜರಿಯ ಅಗತ್ಯವೂ ಇಲ್ಲದಂತೆ ಸರಳ ಚಿಕಿತ್ಸೆಯಲ್ಲೇ ಉಪಶಮನ ನೀಡುವ ವ್ಯವಸ್ಥೆ ಬೆಂಗಳೂರಿನಲ್ಲೇ ಇದೆ. ಹೌದು, ಬೆಂಗಳೂರಿನ ಪೀಣ್ಯಾ, ದಾಸರಹಳ್ಳಿ, ಸದಾಶಿವನಗರ, ಇಂದಿರಾನಗರ, ಜಯನಗರ, ವೈಟ್‌ಫೀಲ್ಡ್‌ನಲ್ಲಿ ತನ್ನ ಕ್ಲಿನಿಕ್‌ಗಳನ್ನು ಹೊಂದಿರುವ ಪೇನ್ ಕ್ಲಿನಿಕ್ ಅಲೀವಿಯೇಟ್ ಮಂಡಿ ನೋವಿಗೆ ಸುಲಭ ಪರಿಹಾರ ಒದಗಿಸುವ ಮೂಲಕ ಖ್ಯಾತಿ ಹೊಂದಿದೆ. ವಿಶೇಷವೆಂದರೆ, ಆಸ್ಪತ್ರೆಯಲ್ಲಿ ಉಳಿಯಬೇಕಾದ ಯಾವುದೇ ಅಗತ್ಯವಿಲ್ಲದೇ, ಕೆಲವೇ ಗಂಟೆಗಳಲ್ಲಿ ಚಿಕಿತ್ಸೆ ಮುಗಿಸಿ, 48 ಗಂಟೆಗಳಲ್ಲೇ ಕೆಲಸಕ್ಕೆ ಮರಳುವ ಹಂತದ ಶೀಘ್ರ ಮತ್ತು ಸರಳ ಚಿಕಿತ್ಸೆಯ ಮೂಲಕ ಮಂಡಿ ನೋವಿಗೆ ಪರಿಹಾರ ಒದಗಿಸಲಾಗುತ್ತಿದೆ.

ಏನೇನು ಚಿಕಿತ್ಸೆ?

ಮಂಡಿ ನೋವು, ಭುಜದ ನೋವು, ಸ್ನಾಯುಗಳ ವಿವಿಧ ತೊಂದರೆಗಳಿಗೆ ಜನ ಪೇನ್ ಕಿಲ್ಲರ್‌ಗಳ ಮೊರೆ ಹೋಗುತ್ತಾರೆ. ಆದರೆ, ಪೇನ್‌ಕಿಲ್ಲರ್‌ಗಳ ಅಗತ್ಯವಿಲ್ಲದೇ ಕೇವಲ 30ರಿಂದ 60 ನಿಮಿಷ ಚಿಕಿತ್ಸೆಯಿಂದ ಈ ನೋವಿಗೆ ಪರಿಹಾರ ನೀಡಲಾಗುತ್ತದೆ. ಈ ಚಿಕಿತ್ಸೆಗಳಿಂದ ಕೇವಲ 48 ಗಂಟೆಗಳಲ್ಲೇ ಕೆಲಸಕ್ಕೆ ಹೋಗುವ ಅವಕಾಶವಿದೆ. ಇಲ್ಲಿನ ಚಿಕಿತ್ಸೆಗಳ ಪೈಕಿ ಸ್ಟೆಮ್ ಸೆಲ್ ಥೆರಪಿ ಪ್ರಮುಖವಾಗಿದೆ. ಇದರಿಂದ ಹಾನಿಗೊಳಗಾದ ಕಾರ್ಟಿಲೆಜ್ ಪುನರುತ್ಪಾದನೆಗೊಳಲು ಸಹಕಾರಿಯಾಗುತ್ತದೆ ಜತೆಗೆ, ಪ್ರೊಲೋಥೆರಪಿ ವಿಧಾನದಲ್ಲಿ ಗ್ಲೂಕೋಸ್ ಇಂಜೆಕ್ಷನ್ ನೀಡುವ ಮೂಲಕ ನೈಸರ್ಗಿಕವಾಗಿ ಸಡಿಲವಾದ ಕೀಲುಗಳು ಬಲಗೊಳ್ಳುತ್ತವೆ. ಪ್ಲೇಟ್‌ಲೆಟ್ ರಿಚ್ ಪ್ಲಾಸ್ಮಾ(PRP) ವಿಧಾನವನ್ನು ಬಳಸಿ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಎಲ್ಲೆಲ್ಲಿದೆ ಕ್ಲಿನಿಕ್?
- ಪೀಣ್ಯಾ, ದಾಸರಹಳ್ಳಿ, ಸದಾಶಿವನಗರ, ಇಂದಿರಾನಗರ, ಜಯನಗರ, ವೈಟ್‌ಫೀಲ್ಡ್
- ಆಸ್ಪತ್ರೆಯ ಸಂಪರ್ಕ : 81475 50855; 080 23614888

ಪ್ರಸ್ತುತಿ ಪಿ.ವಿ ಬ್ರ್ಯಾಂಡ್ ಸ್ಪಾಟ್

ಕೆಪಿಎಸ್‌ಗೆ ಬಲ; ಮಕ್ಕಳ ಪ್ರವೇಶ ಹೆಚ್ಚಳ

ಒಂದೇ ಒಂದು ಶಾಲೆ ಮುಚ್ಚುವುದಿಲ್ಲ • ದೂರದಿಂದ ಬಂದು ಹೋಗುವ ಮಕ್ಕಳಿಗೆ ಬಸ್ ಸೌಲಭ್ಯ: ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೂರ್ವ ಪ್ರಾಥಮಿಕದಿಂದ ಪಿಯುವರೆಗೆ ಒಂದೇ ಕ್ಯಾಂಪಸ್‌ನಲ್ಲಿ ಶಿಕ್ಷಣ ಸಿಗುತ್ತಿರುವುದರಿಂದ ಕರ್ನಾಟಕ ಪಬ್ಲಿಕ್ ಶಾಲೆಗಳತ್ತ (ಕೆಪಿಎಸ್) ಪೋಷಕರು ಒಲವು ತೋರುತ್ತಿದ್ದಾರೆ. ಖಾಸಗಿ ಶಾಲೆಗಳಿಂದಲೂ ಮಕ್ಕಳು ಬಂದು ಪ್ರವೇಶ ಪಡೆಯುತ್ತಿದ್ದಾರೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

'ಪ್ರಜಾವಾಣಿ' ಕಚೇರಿಯಲ್ಲಿ ಶುಕ್ರವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

'ಕೆಪಿಎಸ್‌ಗಳಿಗೆ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಸೇರುತ್ತಿರುವುದರಿಂದ ಆ ಶಾಲೆಯ ಸುತ್ತಲ ಕೆಲ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಒಂದು ಮಗುವಿದ್ದರೂ ಆ ಶಾಲೆಗಳನ್ನು ಮುಚ್ಚುವುದಿಲ್ಲ. ಶಿಕ್ಷಕರು ಸೇರಿದಂತೆ ಇತರೆ ಎಲ್ಲ ಸೌಲಭ್ಯವನ್ನೂ ಒದಗಿಸಲಾಗುವುದು. ಕೆಪಿಎಸ್‌ಗೆ ದೂರದಿಂದ ನಿತ್ಯ ಬಂದು ಹೋಗುವ ಮಕ್ಕಳಿಗೆ ಬಸ್ ಸೌಲಭ್ಯ ಒದಗಿಸಲು ನಿರ್ಧರಿಸಲಾಗಿದೆ' ಎಂದರು.

'ಕೆಪಿಎಸ್‌ಗಳಲ್ಲಿ ದ್ವಿಭಾಷಾ ಮಾಧ್ಯಮ, ಪೂರ್ವ ಪ್ರಾಥಮಿಕ ಶಾಲೆ, ಒಂದನೇ ತರಗತಿಯಿಂದಲೇ ಕಂಪ್ಯೂಟರ್ ಕಲಿಕೆ, ಕೌಶಲ ತರಬೇತಿ, ಇಂಗ್ಲಿಷ್ ಭಾಷಾ ಸಂವಹನ ಸೇರಿದಂತೆ ಉತ್ತಮ ಕಲಿಕೆಯ ವಾತಾವರಣ ಕಲ್ಪಿಸಲಾಗಿದೆ. ಇದರಿಂದ ಮಕ್ಕಳ ಪ್ರವೇಶ ಗಣನೀಯವಾಗಿ ಹೆಚ್ಚಾಗಿದೆ. ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 1,008 ಶಾಲೆಗಳಿಗೆ ಅನುಮತಿ ನೀಡಿದ ಕೆಲ ದಿನಗಳಲ್ಲೇ 42,000 ಮಕ್ಕಳು ಪೂರ್ವ ಪ್ರಾಥಮಿಕಕ್ಕೆ ಪ್ರವೇಶ ಪಡೆದಿದ್ದರು. ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 4,137 ಶಾಲೆಗಳಲ್ಲಿ ಒಂದನೇ ತರಗತಿಯಿಂದ ದ್ವಿಭಾಷಾ ಮಾಧ್ಯಮ ತರಗತಿ ಆರಂಭಿಸಿದ್ದೇವೆ' ಎಂದರು.

ಪ್ರಜಾವಾಣಿ ಸಂವಾದ



ಬಜೆಟ್‌ನಲ್ಲಿ ಘೋಷಿಸಿದ ಅನುದಾನ, ಎಡಿಬಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ನೀಡಿದ ಹಣದಲ್ಲಿ ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲಾಗುತ್ತಿದೆ. ಮುಂದಿನ ವರ್ಷದ ಒಳಗೆ 1,000 ಕೆಪಿಎಸ್ ಆರಂಭಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದರು.

ಶಾಲೆ ತೊರೆಯುವವರ ತಡೆಗೆ ಕ್ರಮ: 'ಪ್ರೌಢಶಾಲಾ ಮಟ್ಟದಲ್ಲಿ ಶಾಲೆ ಬಿಡುವವರ ಪ್ರಮಾಣ ಕರ್ನಾಟಕದಲ್ಲೇ ಹೆಚ್ಚು ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಈ ಹಿಂದಿನ ಸರ್ಕಾರಗಳು ಶಿಕ್ಷಣ ಇಲಾಖೆಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಹೀಗಾಗಿದೆ. ಶಿಕ್ಷಕರು ಮತ್ತು ಶಾಲೆಗಳಲ್ಲಿ ಅಗತ್ಯ ಕೊಠಡಿಗಳು ಇಲ್ಲದಿರುವುದರಿಂದ ಮಕ್ಕಳು ಅರ್ಧದಲ್ಲೇ ಶಾಲೆ ಬಿಡುತ್ತಿದ್ದರು. ಈ ಅಂಶಗಳ ಆಧಾರದಲ್ಲಿ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ಮಧು ಬಂಗಾರಪ್ಪ ಹೇಳಿದರು.

'13,000 ಶಿಕ್ಷಕರ ನೇಮಕದಿಂದ ಹಲವು ಶಾಲೆಗಳಲ್ಲಿ ಪರಿಸ್ಥಿತಿ ಸುಧಾರಿಸಿದೆ. ಈ ಮೊದಲು ಶೈಕ್ಷಣಿಕ ವರ್ಷ ಆರಂಭವಾದ ನಂತರ ಅತಿಥಿ ಶಿಕ್ಷಕರನ್ನು ನೇಮಕ ಮಾಡುತ್ತಿದ್ದರು. ಈಗ ಆ ನೀತಿಯನ್ನು ಬದಲಾಯಿಸಿದ್ದು, ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲೇ ಅಗತ್ಯವಿರುವಷ್ಟು ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ. ಶೈಕ್ಷಣಿಕ ಚಟುವಟಿಕೆಗಳು ಅಡೆತಡೆ ಇಲ್ಲದೆ ನಡೆಯುತ್ತಿವೆ' ಎಂದು ವಿವರಿಸಿದರು.

ಸ್ವಸಹಾಯ ಸಂಘಗಳಿಗೆ ಶಾಲಾ ಕಟ್ಟಡ

ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ವಿಲೀನಗೊಳ್ಳುವ ಇತರೆ ಶಾಲೆಗಳ ಕಟ್ಟಡಗಳನ್ನು ಸ್ಥಳೀಯ ಸ್ವಸಹಾಯ ಸಂಘಗಳಿಗೆ ನೀಡಲಾಗುವುದು ಎಂದು ಮಧು ಬಂಗಾರಪ್ಪ ಹೇಳಿದರು.

'ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಕೆಪಿಎಸ್ ಸ್ಥಾಪಿಸುವ ಉದ್ದೇಶವಿದೆ. ಇತರೆ ಶಾಲೆಗಳ ಮಕ್ಕಳು ಅಲ್ಲಿಗೆ ಸೇರುವುದರಿಂದ ಅಂತಹ ಶಾಲೆಗಳ ಕಟ್ಟಡಗಳನ್ನು ಸಂರಕ್ಷಿಸಬೇಕಾಗುತ್ತದೆ. ಸರ್ಕಾರಿ ಶಾಲೆಗಳ ಕಟ್ಟಡ, ಜಮೀನು ಸೇರಿದಂತೆ ಯಾವುದೇ ಆಸ್ತಿಯನ್ನು ನಿರ್ಲಕ್ಷ್ಯ ಮಾಡುವುದಿಲ್ಲ' ಎಂದರು.

ಗ್ರಾಮೀಣ ಪ್ರದೇಶದ ಸ್ವಸಹಾಯ ಸಂಘಗಳು ಈಗಾಗಲೇ ಖಾಲಿ ಕಟ್ಟಡಗಳನ್ನು ಬಳಸಿಕೊಳ್ಳಲು ಅನುಮತಿ ನೀಡುವಂತೆ ಕೋರಿವೆ. ನಿತ್ಯದ ಚಟುವಟಿಕೆಗಳಿಗೆ ಸದ್ಬಳಕೆ ಮಾಡಿಕೊಳ್ಳಲು ಬಯಸಿವೆ. ಕೆಲ ಗ್ರಾಮಗಳಲ್ಲಿ ಅಂಬೇಡ್ಕರ್ ಭವನದಂತಹ ಸಮುದಾಯ ಭವನಗಳ ಅವಶ್ಯ ಇದೆ. ಸಂಘಸಂಸ್ಥೆಗಳಿಗೆ ನೀಡುವುದರಿಂದ ನಿತ್ಯದ ನಿರ್ವಹಣೆಗೂ ಅನುಕೂಲವಾಗುತ್ತದೆ ಎಂದು ಹೇಳಿದರು. ಬಳಸದೆ ಉಳಿದ ಶಾಲಾ ಆಸ್ತಿಗಳನ್ನು ತಾತ್ಕಾಲಿಕವಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗುವುದು. ಆಸಕ್ತ ನೋಂದಾಯಿತ ಸಂಘಟನೆಗಳು ಜಿಲ್ಲಾ ಪಂಚಾಯಿತಿಗೆ ಅರ್ಜಿ ಸಲ್ಲಿಸಿ, ಬಳಕೆ ಅನುಮತಿಯನ್ನು ಪಡೆಯಬಹುದಾಗಿದೆ ಎಂದು ಸ್ಪಷ್ಟಪಡಿಸಿದರು.

ಶಾಲೆಗಳ ಆಸ್ತಿ ರಕ್ಷಣೆಗೆ ವಿಶೇಷ ಮಸೂದೆ

ಸರ್ಕಾರಿ ಶಾಲೆಗಳ ಆಸ್ತಿಗಳನ್ನು ರಕ್ಷಿಸಲು ವಿಶೇಷ ಮಸೂದೆ ಸಿದ್ಧಪಡಿಸಲಾಗುತ್ತಿದೆ. ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲೇ ಮಸೂದೆ ಮಂಡಿಸಲಾಗುವುದು. ಶಾಲಾ ಮೈದಾನ, ಜಮೀನು, ಕಟ್ಟಡಗಳ ಒತ್ತುವರಿಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲಾಗುವುದು ಎಂದರು.

ಶಾಲೆಗಳಿಗೆ ಹಿಂದೆ ನೀಡಿದ್ದ ಜಮೀನು, ಆಸ್ತಿ ಮರಳಿಸಲು ಕೆಲವರು ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದಾರೆ. 15 ಸಾವಿರಕ್ಕೂ ಹೆಚ್ಚು ಒತ್ತುವರಿ ಪ್ರಕರಣಗಳು ಇವೆ. ಈ ಎಲ್ಲ ಸಮಸ್ಯೆಗಳಿಗೂ ಹೊಸ ಕಾಯ್ದೆ ಪರಿಹಾರ ಒದಗಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಲೆಗಳ ಬಳಿ ಜಾಹೀರಾತಿಗೆ ಅವಕಾಶ

ಸರ್ಕಾರಿ ಶಾಲೆಗಳ ಆವರಣ ಹೋರ್ಡಿಂಗ್, ಗೋಡೆಗಳ ಮೇಲೆ ಸದಭಿರುಚಿಯ ಜಾಹೀರಾತು ಪ್ರಕಟಿಸಲು ಅವಕಾಶ ನೀಡುವ ಕುರಿತು ಚಿಂತನೆ ನಡೆದಿದೆ. ಜಾಹೀರಾತುಗಳಿಂದ ಬರುವ ಹಣವನ್ನು ಆಯಾ ಶಾಲೆಯ ಮೂಲಸೌಕರ್ಯಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗುವುದು ಎಂದು ಮಧು ಬಂಗಾರಪ್ಪ ಹೇಳಿದರು.

2026–27ನೇ ಸಾಲಿಗೆ ಪಠ್ಯಪುಸ್ತಕ ಪರಿಷ್ಕರಣೆ ಮಾಡುವ ಆಲೋಚನೆ ಇಲ್ಲ. ನೀತಿ ಶಿಕ್ಷಣವನ್ನು ಅಳವಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ವಾರದಲ್ಲಿ ಒಂದು ಅವಧಿ ಕಡ್ಡಾಯ ಬೋಧನೆ ಇರುತ್ತದೆ ಎಂದರು.

ರಾಜ್ಯದ ಹಲವೆಡೆ ಶೀತಗಾಳಿ, ಜೋರು ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಕುಸಿತ ಹಾಗೂ ಶೀತ ಗಾಳಿಯಿಂದಾಗಿ ಚಳಿ ಹೆಚ್ಚಳವಾಗುತ್ತಿದೆ. ಕಳೆದ ಒಂದು ವಾರದಿಂದ ತಾಪಮಾನದಲ್ಲಿ ಇಳಿಕೆಯಾಗುತ್ತಿದ್ದು, ಮುಂಜಾನೆ ಮತ್ತು ರಾತ್ರಿ ವೇಳೆ ಚಳಿ ತೀವ್ರಗೊಂಡಿದೆ.

ಕಳೆದ 24 ಗಂಟೆಯ ಅವಧಿಯಲ್ಲಿ ಬೀದರ್‌ನಲ್ಲಿ ಗರಿಷ್ಠ ತಾಪಮಾನ 27.6 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ಉಷ್ಣಾಂಶ 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ಸಾಮಾನ್ಯಕ್ಕಿಂತ 5.7 ಡಿಗ್ರಿ ಸೆಲ್ಸಿಯಸ್ ಕುಸಿತ ಕಂಡಿದೆ. ಈ ಭಾಗದಲ್ಲಿ ಚಳಿಯ ತೀವ್ರತೆ ಹೆಚ್ಚಾಗಿದೆ.

ರಾಯಚೂರಿನಲ್ಲಿ ಗರಿಷ್ಠ ತಾಪಮಾನ 30.2 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ಉಷ್ಣಾಂಶ 16 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದ್ದು, 3.1 ಡಿಗ್ರಿ ಸೆಲ್ಸಿಯಸ್ ಕುಸಿತವಾಗಿದೆ. ಅದೇ ರೀತಿ ವಿಜಯಪುರ, ಕೊಪ್ಪಳ, ದಾವಣಗೆರೆ, ಗದಗ, ಶಿವಮೊಗ್ಗದಲ್ಲಿ ತಾಪಮಾನದಲ್ಲಿ ಇಳಿಕೆಯಾದ ಪರಿಣಾಮ ಚಳಿಯ ವಾತಾವರಣ ಇದೆ.

ರಾಜ್ಯದ ಹಲವೆಡೆ ಭಾರಿ ಥಂಡಿಯಿಂದಾಗಿ ಎಲ್ಲಾ ವಯೋಮಾನದವರು ಸ್ವೆಟರ್, ಮಫ್ಲರ್, ಜಾಕೆಟ್ ಧರಿಸಿಕೊಂಡು ಓಡಾಡುವುದು ಸಾಮಾನ್ಯವಾಗಿದೆ. ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇದ್ದು, ಹಗುರ ಮಳೆಯಾಗುವ ಸಾಧ್ಯತೆ ಇದೆ. ಕೆಲವು ಪ್ರದೇಶಗಳಲ್ಲಿ ಬೆಳಗಿನ ಜಾವ ಮಂಜು ಬೀಳುವ ಸಾಧ್ಯತೆ ಹೆಚ್ಚು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಮಂಡ್ಯ, ಮೈಸೂರು, ಕೊಡಗು, ತುಮಕೂರು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

10 ಲಕ್ಷ ಟನ್ ಮೆಕ್ಕೆಜೋಳ ಖರೀದಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಂಕಷ್ಟದಲ್ಲಿರುವ ರೈತರಿಂದ 10 ಲಕ್ಷ ಟನ್ ಮೆಕ್ಕೆಜೋಳ ಖರೀದಿಗೆ ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ, ಖರೀದಿ ಕೇಂದ್ರ ಸ್ಥಾಪಿಸಲು ಸೂಚಿಸಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ಕೇಂದ್ರವು ₹2,400 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ ಈ ವರ್ಷ ಇನ್ನೂ ರಾಜ್ಯದಲ್ಲಿ ಖರೀದಿ ಕೇಂದ್ರ ತೆರೆದಿಲ್ಲ. ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗಿದ್ದರಿಂದಾಗಿ ರೈತರು ಪ್ರತಿಭಟನೆಗೆ ಇಳಿದಿದ್ದಾರೆ. ಈ ವರ್ಷ ಸುಮಾರು 55 ಲಕ್ಷ ಟನ್ ಜೋಳ ಉತ್ಪಾದನೆಯಾಗಿದ್ದು, ಬೇರೆ ರಾಜ್ಯಗಳಲ್ಲೂ ಉತ್ತಮ ಫಸಲಿದೆ. ಕೇಂದ್ರ ಸರ್ಕಾರ ಜೋಳ ಆಮದು ಮಾಡಿಕೊಂಡಿರುವುದೂ ಸಮಸ್ಯೆಗೆ ಕಾರಣವಾಗಿದೆ' ಎಂದರು. 'ಡಿಸ್ಟಿಲರಿ ಏಜೆನ್ಸಿಗಳು ಮುಕ್ತ ಮಾರುಕಟ್ಟೆ ಬದಲಿಗೆ ಖರೀದಿ ಕೇಂದ್ರಗಳಲ್ಲಿ ಬೆಂಬಲ ಬೆಲೆ ಮೂಲಕವೇ ಮೆಕ್ಕೆಜೋಳ ಖರೀದಿಸುವಂತೆ ಸೂಚಿಸಲಾಗಿದೆ' ಎಂದರು.

'ಕಬ್ಬಿನ ಎಂಎಸ್‌ಪಿ ದರ ನಿಗದಿ, ಎಥೆನಾಲ್ ಉತ್ಪಾದನೆ, ಅತಿವೃಷ್ಟಿ ಪರಿಹಾರ ಮೊದಲಾದ ವಿಷಯಗಳ ಕುರಿತು ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದು, ಪೂರಕವಾಗಿ ಸ್ಪಂದಿಸುವ ನಿರೀಕ್ಷೆ ಇದೆ' ಎಂದರು.

ಕಾನೂನು ಸಚಿವ ಎಚ್.ಕೆ. ಪಾಟೀಲ ಮಾತನಾಡಿ, 'ಹೆಸರುಕಾಳು ಖರೀದಿ ಸಂಬಂಧ ಎಫ್‌ಎಕ್ಯು ಬದಲಾವಣೆ ಮಾಡಲು ಕೇಂದ್ರವನ್ನು ಭೇಟಿ ಮಾಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದರು.

'ಕೇಂದ್ರದ ನೀತಿಯಿಂದ ಸಮಸ್ಯೆ'

ಬೆಂಗಳೂರು: 'ರಾಜ್ಯ ಮತ್ತು ದೇಶದಲ್ಲಿ ಮೆಕ್ಕೆಜೋಳ ಉತ್ಪಾದನೆ ಹೆಚ್ಚಾಗಿದ್ದರೂ ಕೇಂದ್ರ ಸರ್ಕಾರ 70 ಲಕ್ಷ ಟನ್ ಆಮದು ಮಾಡಿಕೊಂಡಿರುವುದರಿಂದ ಸಮಸ್ಯೆಯಾಗಿದೆ. ಆಮದು ಮೇಲೆ ನಿರ್ಬಂಧ ವಿಧಿಸಲು ಕೇಂದ್ರಕ್ಕೆ ಪತ್ರ ಬರೆಯಲಾಗುವುದು' ಎಂದು ಸಿದ್ದರಾಮಯ್ಯ ಹೇಳಿದರು.

ಮೆಕ್ಕೆಜೋಳದ ಬೆಲೆ ಕುಸಿತದಿಂದಾಗಿರುವ ಪರಿಣಾಮ ಮತ್ತು ಪರಿಹಾರದ ಕ್ರಮಗಳ ಕುರಿತು ಇಲ್ಲಿ ಸಭೆ ನಡೆಸಿದ ಅವರು, ಕೆಲವು ಸೂಚನೆಗಳನ್ನು ನೀಡಿದರು. 'ಆಮದು ಮೇಲೆ ಕೇಂದ್ರ ಸರ್ಕಾರ ತಕ್ಷಣ ನಿಯಂತ್ರಣ ಹೇರಿದರೆ, ಬೆಲೆಯಲ್ಲಿ ಸ್ಥಿರತೆ ಸಾಧ್ಯವಿದೆ' ಎಂದರು.

13.36 ಕೆ.ಜಿ ಗಾಂಜಾ ಜಪ್ತಿ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಗಾಂಜಾ ಕಳ್ಳ ಸಾಗಣೆ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬೇಧಿಸಿದ್ದಾರೆ. ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ₹4.68 ಕೋಟಿ ಮೌಲ್ಯದ 13.36 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಬ್ಯಾಂಕಾಕ್‌ನಿಂದ ಬಂದ ಇಬ್ಬರು ಪ್ರಯಾಣಿಕರ ಬಳಿ 8.02 ಕೆ.ಜಿ ಹೈಡ್ರೊ ಗಾಂಜಾ ವಶಕ್ಕೆ ಪಡೆದಿದ್ದು, ಇದರ ಮೌಲ್ಯ ₹2.81 ಕೋಟಿ. ಮತ್ತೊಂದು ಪ್ರಕರಣದಲ್ಲಿ ಪ್ರಯಾಣಿಕನ ಬಳಿ ₹1.87ಕೋಟಿ ಮೌಲ್ಯದ 5.34 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ.

ನ್ಯಾ. ಕುನ್ಹ ವರದಿ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗ ಸಲ್ಲಿಸಿರುವ ವರದಿಯನ್ನು ರದ್ದುಗೊಳಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ 'ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್' ನಿರ್ದೇಶಕ ಸುನಿಲ್ ಮ್ಯಾಥ್ಯೂ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ಮತ್ತು ತಾರಾ ವಿತಸ್ತಾ ಗಂಜು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿತು.

'ರಾಜ್ಯ ಸರ್ಕಾರದ ನಿಲುವನ್ನು ಪರಿಗಣಿಸಿ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಯಾವುದೇ ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂಬುದನ್ನು ಮನಗಂಡು ಅರ್ಜಿಯನ್ನು ವಜಾಗೊಳಿಸಲಾಗಿದೆ' ಎಂದು ನ್ಯಾಯಪೀಠ ಆದೇಶಿಸಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ. ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದ್ದರು.

ಉಗ್ರ ಚಟುವಟಿಕೆ ಸಂಚು: ಇಬ್ಬರಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು ಮತ್ತು ಸರ್ಕಾರಿ ಆಸ್ತಿಗಳನ್ನು ನಾಶಪಡಿಸಲು ಸಂಚು ರೂಪಿಸಿದ್ದರು' ಎಂಬುದೂ ಸೇರಿದಂತೆ ಹಲವು ಗುರುತರ ಆರೋಪಗಳ ಪ್ರಕರಣದಲ್ಲಿ ತಪ್ಪೊಪ್ಪಿಕೊಂಡು ನ್ಯಾಯಾಲಯಕ್ಕೆ ತಲೆಬಾಗಿದ್ದ ಇಬ್ಬರಿಗೆ ಇಲ್ಲಿನ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ವಿಶೇಷ ನ್ಯಾಯಾಲಯ 6 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ತಲಾ ₹61 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಪ್ರಕರಣದ 8ನೇ ಆರೋಪಿ ಮೊಹಮದ್ ಜಬೀವುಲ್ಲಾ ಅಲಿಯಾಸ್ ಜಬೀವುಲ್ಲಾ ಅಲಿಯಾಸ್ ಚರ್ಬಿ (32) ಹಾಗೂ 9ನೇ ಆರೋಪಿ ಎನ್.ನದೀಂ ಫೈಸಲ್ ಅಲಿಯಾಸ್ ನದೀಂ (27) ಶಿಕ್ಷೆಗೆ ಗುರಿಯಾದವರು. ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು 49ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೆಂಪರಾಜು ಶುಕ್ರವಾರ ಪ್ರಕಟಿಸಿದರು.

ಎನ್‌ಐಎ ತನಿಖೆ ನಡೆಸುತ್ತಿರುವ ಈ ಪ್ರಕರಣದಲ್ಲಿ ಒಟ್ಟು 10 ಜನ ಆರೋಪಿಗಳಿದ್ದು ಸದ್ಯ ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಎನ್‌ಐಎ ಪರ ಹೈಕೋರ್ಟ್ ವಕೀಲರುಗಳಾದ ಪಿ.ಪ್ರಸನ್ನಕುಮಾರ್ ಮತ್ತು ಸಿ.ಸಚಿನ್ ವಾದ ಮಂಡಿಸುತ್ತಿದ್ದಾರೆ.

ಪ್ರಕರಣ: ಶಿವಮೊಗ್ಗದ ದೊಡ್ಡಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ 2022ರ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆ ವೇಳೆ ಪ್ರೇಮ್ ಸಿಂಗ್ ಎಂಬ ಯುವಕನಿಗೆ ಚೂರಿಯಿಂದ ಇರಿಯಲಾಗಿತ್ತು. ಈ ಘಟನೆಯನ್ನು ರಾಜ್ಯದ ಪೊಲೀಸರು ತನಿಖೆ ನಡೆಸುತ್ತಿದ್ದರು. ತನಿಖೆಯ ಬೆನ್ನತ್ತಿದ ಪೊಲೀಸರಿಗೆ ತುಂಗಾ ನದಿ ದಂಡೆಯ ಮೇಲೆ ಟ್ರಯಲ್ ಬ್ಲಾಸ್ಟ್, ಭಾರತದ ತ್ರಿವರ್ಣ ಧ್ವಜ ಸುಟ್ಟ ಕೃತ್ಯ ಪತ್ತೆಯಾಗಿತ್ತು. ಈ ಸಂಬಂಧ ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿತ್ತು. ಇದರ ತನಿಖೆಯನ್ನು 2022ರ ನವೆಂಬರ್ 11ರಂದು ಎನ್‌ಐಎ ತೆಕ್ಕೆಗೆ ವರ್ಗಾಯಿಸಲಾಗಿತ್ತು.

ಗ್ಯಾರಂಟಿ ಸರ್ಕಾರದ 2.5 ವರ್ಷದ ಭರವಸೆಯ ಸಾಧನಾ ಪಥ



ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯುವನಿಧಿ ಯೋಜನೆಗೆ ಶಿವಮೊಗ್ಗದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗೆ ಚೆಕ್ ವಿತರಿಸುವ ಮುಲಕ ಚಾಲನೆ ನೀಡಲಾಗಿದ್ದ ಸಂಗ್ರಹ ಚಿತ್ರ.

ಬೆಂಗಳೂರು : ರಾಜ್ಯ ಸರ್ಕಾರ ಕಳೆದ ಎರಡೂವರೆ ವರ್ಷದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದೆ. ದೇಶದಲ್ಲೇ ಮೊದಲ ಬಾರಿಗೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಗ್ಯಾರಂಟಿಗಳನ್ನು ಕೊಟ್ಟ ಮಾತಿನಂತೆ ಜಾರಿಗೊಳಿಸಿದೆ. ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ ಯೋಜನೆಗಳಿಂದಾಗಿ ರಾಜ್ಯದಲ್ಲಿ ಹೊಸದೊಂದು ಕ್ರಾಂತಿಯಾಗಿದೆ. ಆರಂಭಿಕ 52ಸಾವಿರ ಕೋಟಿ ಅನುದಾನ ವೆಚ್ಚದ ಈ ಐದು ಗ್ಯಾರಂಟಿಗಳು ಸರ್ಕಾರದ ದೊಡ್ಡ ಬಲವಾಗಿ ಪರಿಣಮಿಸಿವೆ. ಜತೆಗೆ, ಸಮಾಜದ ತಳಮಟ್ಟದಲ್ಲಿ ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಿದ್ದವರಿಗೆ ಆಸರೆಯಾಗಿ ಹೊಸ ಇತಿಹಾಸ ಸೃಷ್ಟಿಗೆ ಕಾರಣವಾಗಿವೆ.

ಯೋಜನೆಗೆ ಕಳೆದ ಆಗಸ್ಟ್‌ವರೆಗೆ 91,813ಕೋಟಿ ರೂ. ವೆಚ್ಚವಾಗಿದ್ದು, ಯೋಜನೆಗಳನ್ನು ನಿರಂತರವಾಗಿ ಜನರಿಗೆ ತಲುಪಿಸಲು ಸರ್ಕಾರ ಶ್ರಮಿಸುತ್ತಿದೆ. ಪ್ರಸಕ್ತ ಸಾಲಿನಲ್ಲೂ ಸಹ ಯೋಜನೆಗೆಂದು ಪ್ರತ್ಯೇಕ ಬಜೆಟ್ ಮೀಸಲಿರಿಸಿದ್ದು, ಗ್ಯಾರಂಟಿಗಳ ಫಲಾನುಭವಿಗಳಿಗೆ ಯಾವುದೇ ರೀತಿಯಲ್ಲೂ ನಿರಾಸೆಯಾಗದಂತೆ ಸರ್ಕಾರ ಆಯಾ ಇಲಾಖೆಗಳಿಗೆ ಸೂಚನೆಗಳನ್ನು ನೀಡಿದೆ. ಆ ಮೂಲಕ ಜನಪರ ಆಡಳಿತಕ್ಕೆ ಮೊದಲ ಆದ್ಯತೆ ಎನ್ನುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮಾತು ನಿಜವಾಗುತ್ತಿದೆ.

ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಪಂಚ ಗ್ಯಾರಂಟಿಗಳ ಪೈಕಿ ಗೃಹಜ್ಯೋತಿ ಯೋಜನೆಯನ್ನು ಇಂಧನ ಇಲಾಖೆಯಡಿ ಜಾರಿಗೊಳಿಸಲಾಗಿದೆ. ಈ ಯೋಜನೆಯಿಂದ ಬರೋಬ್ಬರಿ 1.64 ಕೋಟಿ ಫಲಾನುಭವಿಗಳಿಗೆ ಲಾಭವಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ರಾಜ್ಯದ ಮಹತ್ವಾಕಾಂಕ್ಷೆಯ ಯೋಜನೆಯೆಂದೇ ಗುರುತಿಸಿಕೊಂಡಿರುವ 'ಗೃಹಲಕ್ಷ್ಮಿ' ಯೋಜನೆಯಡಿ 1.24ಕೋಟಿ ಫಲಾನುಭವಿಗಳು ಲಾಭ ಪಡೆಯುತ್ತಿದ್ದಾರೆ. ಆ ಮೂಲಕ ಮಹಿಳೆಯರು ಉನ್ನತ ಮತ್ತು ಸ್ವಾವಲಂಬನೆಯ ಬದುಕು ತಮ್ಮದಾಗಿಸಿಕೊಂಡಿದ್ದಾರೆ. ಸರ್ಕಾರದ ಯುವನಿಧಿ ಯೋಜನೆಯಲ್ಲೂ ಬರೋಬ್ಬರಿ 2.55 ಕೋಟಿ ಯುವಕರು ಪ್ರೋತ್ಸಾಹ ಧನ ಪಡೆದು ಕೊಂಡಿದ್ದು, ಈ ಯೋಜನೆಗಳು ಮುಂದುವರೆಯುತ್ತಿವೆ. ಇದಲ್ಲದೇ, ಸಾರಿಗೆ ಇಲಾಖೆಯಡಿ ಶಕ್ತಿ ಯೋಜನೆಗೆ ಭರಪೂರ ಪ್ರತಿಕ್ರಿಯೆ ಲಭಿಸಿದ್ದು, ಮಹಿಳೆಯರ ಸಂಚಾರಕ್ಕೊಂದು ಹೊಸ ವೇಗ ಸಿಕ್ಕಂತಾಗಿದೆ. ಸಾರಿಗೆ ವೆಚ್ಚ ನೀಡಲಾಗದೇ ಮನೆಗಳಿಗೆ ಸೀಮಿತವಿದ್ದ ಅನೇಕ ಮಹಿಳೆಯರು ಮನೆಯ ಹೊಸ್ತಿಲು ದಾಟಿ, ಔದ್ಯೋಗಿಕ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಕ್ತಿ ಯೋಜನೆಯಿಂದ ಅನೇಕರು ಲಾಭ ಪಡೆದುಕೊಳ್ಳುತ್ತಿದ್ದಾರೆ. ನಿತ್ಯ ಆರ್ಥಿಕವಾಗಿ ಅನೇಕ ಉದ್ಯೋಗಗಳಿಗೆ ಶಕ್ತಿ ನಿಜಕ್ಕೂ ಜೀವ ನೀಡಿದೆ. ಜತೆಗೆ, ಅನ್ನಭಾಗ್ಯ ಯೋಜನೆ ಸಹ ಅನೇಕ ಅಶಕ್ತ ಕುಟುಂಬಗಳಿಗೆ ವರವಾಗಿದೆ.

ಮಹಿಳೆಯರ ಹಿತ ರಕ್ಷಣೆ!

ರಾಜ್ಯ ಸರ್ಕಾರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ, ಶಕ್ತಿ ಯೋಜನೆ ಮೂಲಕ ಸ್ವಾವಲಂಬನೆಯನ್ನು ನೀಡುವುದು ಮಾತ್ರವಲ್ಲದೇ, ಔದ್ಯೋಗಿಕವಾಗಿ ಕ್ರಾಂತಿಕಾರಕ ನಿರ್ಧಾರವೊಂದನ್ನು ಜಾರಿಗೊಳಿಸಿದೆ. ಮಹಿಳಾ ನೌಕರರಿಗೆ ಪ್ರತಿ ತಿಂಗಳು ಒಂದು ದಿನ ವೇತನ ಸಹಿತ ಋತುಚಕ್ರ ರಜೆ ನೀಡಬೇಕೆನ್ನುವ ಘೋಷಣೆ ಮಹಿಳಾ ಕ್ಷೇತ್ರದಲ್ಲಿ ಸಾಕಷ್ಟು ಮೆಚ್ಚುಗೆ ಪಡೆದುಕೊಂಡಿದೆ.

₹13,000 ಕೋಟಿ
ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ

₹3,300
ಪ್ರತಿ ಟನ್ ಕಬ್ಬಿಗೆ ದರ ನಿಗದಿ, ರೈತರ ಹಿತರಕ್ಷಣೆ

ನೀತಿ ಕಾಯ್ದೆಗಳ ಜಾರಿ
ಕಾರ್ಮಿಕ ಇಲಾಖೆ : ಗಿಗ್ ಕಾರ್ಮಿಕರ ಕಾಯ್ದೆ - 2025
ಪ್ರವಾಸೋದ್ಯಮ : ಕರ್ನಾಟಕ ಹೊಸ ಪ್ರವಾಸೋದ್ಯಮ ನೀತಿ 2024-29 ಜಾರಿ

ಬ್ರ್ಯಾಂಡ್ ಬೆಂಗಳೂರಿಗೆ ಹೊಸ ರೂಪ!

ರಾಜ್ಯ ರಾಜಧಾನಿ ಬೆಂಗಳೂರಿಗೆ ಅಭಿವೃದ್ಧಿ ಹೊಸ ಸ್ವರೂಪ ನೀಡುವ ನಿಟ್ಟಿನಲ್ಲಿ ಸರ್ಕಾರ ಪ್ರಮುಖ ಹೆಜ್ಜೆಯನ್ನಿಟ್ಟಿದೆ. ಐತಿಹಾಸಿಕ ಹಿನ್ನೆಲೆಯುಳ್ಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಮೇಲ್ದರ್ಜೆಗೇರಿಸುವ ಮೂಲಕ ಕ್ರಾಂತಿಕಾರಣ ಹೆಜ್ಜೆಯನ್ನಿರಿಸಿದೆ. ಆ ಮೂಲಕ ಬೆಂಗಳೂರಿನ ದಾಖಲೆಯ ಜನಸಂಖ್ಯೆಯ ನಿರ್ವಹಣೆಗೆ ವಿಸ್ತರಣೆಯನ್ನು ನೀಡಿದಂತಾಗಿದೆ. ಆಡಳಿತಾತ್ಮಕ, ಕಾನೂನು ಸುವ್ಯವಸ್ಥೆಗೆ ಪೂರಕವಾಗಿ ಈ ನಿರ್ಧಾರ ಸಾಕಷ್ಟು ಮೆಚ್ಚುಗೆಗೆ ಪಾತ್ರವಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ಇತಿಹಾಸದ ಪುಟಗಳಿಗೆ ಸೇರ್ಪಡೆಯಾಗುವುದರೊಂದಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನಾಡಿನ ರಾಜಧಾನಿಗೊಂದು ಹೊಸ ಸ್ವರೂಪ ತಂದಿದೆ. ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ಪ್ರತ್ಯೇಕ ಆಡಳಿತ ಯಂತ್ರಾಂಗ, ಪೊಲೀಸ್ ವಿಭಾಗಗಳ ಹಂಚಿಕೆಯೊಂದಿಗೆ ಜನರಿಗೆ ಸ್ಥಳೀಯವಾಗಿ ಅಧಿಕಾರಿಗಳ ನೆರವು ಸಿಗುವ ವ್ಯವಸ್ಥೆ ಸಿಕ್ಕಿದೆ. ಮಾತ್ರವಲ್ಲದೇ, ವಾರ್ಡ್‌ಗಳ ಮರುರಚನೆಯಿಂದಾಗಿ ಹೆಚ್ಚಿನ ಜನಪ್ರತಿನಿಧಿಗಳ ಆಯ್ಕೆಗೂ ಅವಕಾಶ ಸಿಗಲಿದೆ. ಭವಿಷ್ಯದ ಬೆಂಗಳೂರಿಗೆ ಅನುಗುಣವಾಗಿ ಸರ್ಕಾರದ ಈ ನಿರ್ಧಾರದಿಂದ ಅನೇಕರಿಗೆ ಸಾಕಷ್ಟು ನೆರವಾಗಿದೆ.

ಬಯಲು ಸೀಮೆಗೆ ವರದಾನ!

ರಾಜ್ಯದಲ್ಲಿ ಕಳೆದೊಂದು ದಶಕದ ನಿರೀಕ್ಷೆಯಾಗಿರುವ ಎತ್ತಿನಹೊಳೆ ಯೋಜನೆಗೆ ಗ್ಯಾರಂಟಿ ಸರ್ಕಾರ ವೇಗ ನೀಡಿದೆ. ಬಯಲು ಸೀಮೆಯ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಒಟ್ಟು 7 ಜಿಲ್ಲೆಗಳ ಲಕ್ಷಾಂತರ ಜನರ ಬದುಕು ಬದಲಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲ ಹಂತಕ್ಕೆ ಚಾಲನೆಯನ್ನೂ ಸಹ ನೀಡಲಾಗಿದೆ.

ಸೌಲಭ್ಯಗಳು ಮತ್ತು ಸುಧಾರಣೆಗಳು

- **ವಸತಿ ಹಕ್ಕು:** ವಿವಿಧ ವಸತಿ ನಿಗಮಗಳ ವತಿಯಿಂದ 3.69 ಲಕ್ಷ ಮನೆಗಳ ವಿತರಣೆ
- **ಭೂ ದಾಖಲೆಗಳ ಸುಧಾರಣೆ:** ಭೂ ಗ್ಯಾರಂಟಿ ಯೋಜನೆ ಅಡಿ ನನ್ನ ಭೂಮಿ-ನನ್ನ ಹಕ್ಕು, ಭೂ ಸುರಕ್ಷಾ, ಇ–ಪೌತಿ, ಪೋಡಿ ಮುಕ್ತ ಗ್ರಾಮ, ಪಹಣಿ–ಆಧಾರ್ ಜೋಡಣೆ ಕಾರ್ಯಕ್ರಮಗಳು. ಇ- ಖಾತಾದ ಮೂಲಕ ಆಸ್ತಿಗಳ ಡಿಜಿಟಲೀಕರಣ
- **ಭದ್ರತಾ ಕ್ರಮಗಳು:** ಎಲ್ಲ ನಕ್ಸಲರನ್ನು ಶರಣಾಗತರನ್ನಾಗಿಸಿ, ನಕ್ಸಲ್ ಮುಕ್ತ ಕರ್ನಾಟಕ ಘೋಷಣೆ
- **ಶಾಲೆಗಳ ಸುಧಾರಣೆ:** ಸರ್ಕಾರಿ ಶಾಲೆಗಳ ಸುಧಾರಣೆಗೆ ಸಿಎಸ್‌ಆರ್ ನಿಧಿ ಬಳಕೆ ಹಾಗೂ ಕೆಪಿಎಸ್ ಶಾಲೆಗಳ ನಿರ್ಮಾಣ
- **ಕನ್ನಡ ಕಡ್ಡಾಯ:** 'ಕರ್ನಾಟಕ ರಾಜ್ಯ ಭಾಷಾ ಕಾಯ್ದೆ– 1963'ರಂತೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ.

ಸರ್ಕಾರ ಎರಡೂವರೆ ವರ್ಷದ ಹೆಜ್ಜೆ ಗುರುತುಗಳು

ಗೃಹಲಕ್ಷ್ಮಿ ಯೋಜನೆ

- **ಆಗಸ್ಟ್ 2023 :** ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಐಸಿಸಿ ಅಧ್ಯಕ್ಷರ ಸಮ್ಮುಖದಲ್ಲಿ ಯೋಜನೆಗೆ ವಿದ್ಯುಕ್ತ ಚಾಲನೆ.
- **ಸೆಪ್ಟೆಂಬರ್ 2023:** ಸುಮಾರು 1.10 ಕೋಟಿಗೂ ಹೆಚ್ಚು ಮಹಿಳೆಯರಿಗೆ ₹2,000 ಮಾಸಿಕ ನೇರ ನಗದು ವರ್ಗಾವಣೆ (ಡಿಬಿಟಿ) ಆರಂಭ.
- **ಮಾರ್ಚ್ 2024:** ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ವಿಶೇಷ ಟಾಸ್ಕ್ ಫೋರ್ಸ್ ರಚನೆ.
- **ಅಕ್ಟೋಬರ್ 2025:** 2.5 ವರ್ಷಗಳ ಅವಧಿಯಲ್ಲಿ ಈ ಯೋಜನೆಗೆ ಒಟ್ಟು ₹45,000ಕೋಟಿಗೂ ಹೆಚ್ಚು ಹಣ ಬಿಡುಗಡೆ.

ಶಕ್ತಿ ಯೋಜನೆ

- **ಜೂನ್ 2023:** ರಾಜ್ಯಾದ್ಯಂತ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಚಾಲನೆ.
- **ಫೆಬ್ರವರಿ 2024:** ಯೋಜನೆಯಿಂದಾಗಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಆದಾಯದಲ್ಲಿ ಗಮನಾರ್ಹ ಏರಿಕೆ ವರದಿ.
- **ಆಗಸ್ಟ್ 2025:** ಯೋಜನೆ ಜಾರಿಯಾದ 26 ತಿಂಗಳ ಅವಧಿಯಲ್ಲಿ ಮಹಿಳೆಯರು ಒಟ್ಟು 500 ಕೋಟಿಗೂ ಹೆಚ್ಚು ಬಾರಿ ಪ್ರಯಾಣ ದಾಖಲಿಸಿದ ವರದಿ.
- **ನವೆಂಬರ್ 2025:** ಹಳೆಯ ಬಸ್‌ಗಳನ್ನು ಹಂತ ಹಂತವಾಗಿ ಬದಲಾಯಿಸಲು ಮತ್ತು ಹೊಸ ಬಸ್‌ಗಳ ಖರೀದಿಗೆ ಸಾರಿಗೆ ಇಲಾಖೆಗೆ ₹2,500 ಕೋಟಿ ವಿಶೇಷ ಅನುದಾನ ಘೋಷಣೆ.

ಗೃಹ ಜ್ಯೋತಿ ಯೋಜನೆ

- **ಆಗಸ್ಟ್ 2023:** 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಯೋಜನೆಗೆ ಚಾಲನೆ, 1.50 ಕೋಟಿಗೂ ಹೆಚ್ಚು ಮನೆಗಳು ಫಲಾನುಭವಿಗಳಾಗಿ ನೋಂದಣಿ.
- **ಜನವರಿ 2024:** ಅರ್ಹತೆ ಮತ್ತು ಬಾಕಿ ಬಿಲ್‌ಗಳ ಗೊಂದಲ ಪರಿಹರಿಸಲು ಇಂಧನ ಇಲಾಖೆಯಿಂದ ಮಾರ್ಗಸೂಚಿಗಳಲ್ಲಿ ಸರಳೀಕರಣ.
- **ಸೆಪ್ಟೆಂಬರ್ 2025:** ರಾಜ್ಯದ ಸುಮಾರು 87 % ಮನೆಗಳಿಗೆ ಯೋಜನೆಯ ಸಂಪೂರ್ಣ ಲಾಭ.

ಅನ್ನ ಭಾಗ್ಯ ಯೋಜನೆ

- **ಜುಲೈ 2023:** ಕೇಂದ್ರದಿಂದ ಅಕ್ಕಿ ಲಭ್ಯತೆ ಕೊರತೆಯಿಂದಾಗಿ, 5 ಕೆ.ಜಿ. ಅಕ್ಕಿ ಮತ್ತು ಉಳಿದ 5 ಕೆ.ಜಿ.ಗೆ ನಗದು (ಡಿಬಿಟಿ) ವರ್ಗಾವಣೆ ಆರಂಭ.
- **ಏಪ್ರಿಲ್ 2024:** ನಗದು ಬದಲಿಗೆ ಪೂರ್ಣ 10 ಕೆ.ಜಿ. ಅಕ್ಕಿ ವಿತರಣೆಗೆ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳಿಂದ ಘೋಷಣೆ.
- **ಅಕ್ಟೋಬರ್ 2025:** 4.3 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ನಿಯಮಿತವಾಗಿ ಆಹಾರಧಾನ್ಯ ಮತ್ತು ನಗದು ತಲುಪಿದ ವರದಿ.

ಯುವ ನಿಧಿ ಯೋಜನೆ

- **ಜನವರಿ 2024:** ನಿರುದ್ಯೋಗಿ ಪದವೀಧರರಿಗೆ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಮಾಸಿಕ ಭತ್ಯೆ ನೀಡಲು ಯೋಜನೆಗೆ ಚಾಲನೆ.
- **ಮಾರ್ಚ್ 2024:** ಅರ್ಹತಾ ಮಾನದಂಡ ಮತ್ತು ಆನ್‌ಲೈನ್ ಅರ್ಜಿಗಳ ಪರಿಶೀಲನೆಯಲ್ಲಿ ತೀವ್ರತೆ.
- **ಸೆಪ್ಟೆಂಬರ್ 2025:** ಈ ಯೋಜನೆಯಡಿ ಸುಮಾರು 3 ಲಕ್ಷಕ್ಕೂ ಹೆಚ್ಚು ಯುವ ಫಲಾನುಭವಿಗಳಿಗೆ ನೆರವು ನೀಡಲಾಗಿದೆ ಎಂದು ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಮಾಹಿತಿ.



ಆಡಳಿತಾತ್ಮಕ ಮತ್ತು ಆರ್ಥಿಕ ಕ್ಷೇತ್ರ

- **ಡಿಸೆಂಬರ್ 2023:** ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗಾಗಿ 'ಬ್ರ್ಯಾಂಡ್ ಬೆಂಗಳೂರು' ಘೋಷಣೆ, ₹30,000 ಕೋಟಿಗೂ ಹೆಚ್ಚು ಯೋಜನೆಗಳಿಗೆ ಅನುಮೋದನೆ.
- **ಏಪ್ರಿಲ್ 2024:** ರಾಜ್ಯದಲ್ಲಿ ಬಂಡವಾಳ ಹೂಡಿಕೆ ಉತ್ತೇಜಿಸಲು 'ಇನ್ವೆಸ್ಟ್ ಕರ್ನಾಟಕ 2024' ಜಾಗತಿಕ ಸಮಾವೇಶ ಆಯೋಜನೆ.
- **ಅಕ್ಟೋಬರ್ 2024:** ಕರ್ನಾಟಕ ಆರ್ಥಿಕ ಸಮೀಕ್ಷೆ 2024-25 ರ ಪ್ರಕಾರ, ರಾಜ್ಯದ ತೆರಿಗೆ ಸಂಗ್ರಹದಲ್ಲಿ (ಜಿಎಸ್‌ಟಿ ಮತ್ತು ಅಬಕಾರಿ) 14 % ಹೆಚ್ಚಳ ದಾಖಲು.
- **ಮೇ 2025:** ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸಲು ಸರ್ಕಾರಿ ಕಚೇರಿಗಳಲ್ಲಿ 'ಕಡತ ವಿಲೇವಾರಿ ಮಾಸಾಚರಣೆ'ಗೆ ಚಾಲನೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಆಯೋಗದ ಪ್ರತಿಕ್ರಿಯೆ ಕೋರಿದ 'ಸುಪ್ರೀಂ'

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಹೊಸ ಅರ್ಜಿಗಳ ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕೇರಳ, ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಕೊಂಡಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಎಸ್.ವಿ.ಎನ್. ಭಟ್ಟಿ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಕೆಲವು ರಾಜ್ಯಗಳಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆ ಪ್ರಶ್ನಿಸಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಸಲ್ಲಿಸಿರುವ ಹೊಸ ಅರ್ಜಿಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗಕ್ಕೆ (ಇ.ಸಿ) ನೋಟಿಸ್ ಜಾರಿ ಮಾಡಿದೆ.

ಕೇರಳದಲ್ಲಿ ಕೈಗೊಂಡಿರುವ ಎಸ್‌ಐಆರ್ ಪ್ರಕ್ರಿಯೆ ಪ್ರಶ್ನಿಸಿರುವ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಿರ್ಧರಿಸಲಾಗಿದ್ದು, ಈ ವಿಷಯವನ್ನು ತುರ್ತಾಗಿ ವಿಚಾರಣೆ ನಡೆಸುವ ಅಗತ್ಯವಿದೆ' ಎಂದು ಪೀಠಕ್ಕೆ ತಿಳಿಸಿದರು.

ಕೇರಳದ ಎಸ್‌ಐಆರ್ ಪ್ರಕ್ರಿಯೆ ಪ್ರಶ್ನಿಸಿರುವ ಅರ್ಜಿಗಳನ್ನು ನವೆಂಬರ್ 26ರಂದು ವಿಚಾರಣೆ ನಡೆಸಲು ಪಟ್ಟಿ ಮಾಡಲಾಗುವುದು ಮತ್ತು ಇತರ ರಾಜ್ಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಡಿಸೆಂಬರ್ ಮೊದಲ ಅಥವಾ ಎರಡನೇ ವಾರದಲ್ಲಿ ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ಪೀಠವು ಹೇಳಿತು.

ಖಾಸಗಿ ವ್ಯಕ್ತಿಗಳ ಬದಲು ರಾಜಕೀಯ ಪಕ್ಷಗಳು ಈಗ ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಹೇಳಿದರು.

ಎಸ್‌ಐಆರ್, ಅದರಲ್ಲೂ ಮುಖ್ಯವಾಗಿ ಅದನ್ನು ಕಾರ್ಯಗತಗೊಳಿಸುವ ವಿಧಾನವು ದೇಶದ ಪ್ರಜಾಸತ್ತಾತ್ಮಕ ರಾಜಕೀಯಕ್ಕೆ ಅನುಕೂಲಕರವಾಗಿಲ್ಲ ಎಂಬುದು ಇಡೀ ರಾಜ್ಯದ ಅಭಿಪ್ರಾಯವಾಗಿದೆ ಎಂದು ಕೇರಳ ಸರ್ಕಾರ ತನ್ನ ಅರ್ಜಿಯಲ್ಲಿ ಹೇಳಿದೆ.

ಎಸ್‌ಐಆರ್ ಪ್ರಕ್ರಿಯೆಯನ್ನು ದೇಶದಾದ್ಯಂತ ನಡೆಸುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಈಗಾಗಲೇ ನಡೆಸುತ್ತಿದೆ.

ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಸುತ್ತಿರುವುದನ್ನು ಪ್ರಶ್ನಿಸಿ ಡಿಎಂಕೆ, ಸಿಪಿಎಂ, ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನವೆಂಬರ್ 11ರಂದು ಚುನಾವಣಾ ಆಯೋಗದಿಂದ ಪ್ರತ್ಯೇಕ ಪ್ರತಿಕ್ರಿಯೆ ಕೇಳಿತ್ತು.

'ಇ.ಸಿ ದುರ್ಬಲಕ್ಕೆ ಮಮತಾ ಪ್ರಯತ್ನ'

ಕೋಲ್ಕತ್ತ: ಎಸ್‌ಐಆರ್‌ಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಚರ್ಚೆಯ ಕಾವು ಹೆಚ್ಚಿಸಿರುವ ಬಿಜೆಪಿ ನಾಯಕ ಸುವೇಂದು ಅಧಿಕಾರಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಮಮತಾ ಅವರು ಚುನಾವಣಾ ಆಯೋಗವನ್ನು (ಇ.ಸಿ) ದುರ್ಬಲಗೊಳಿಸಲು ಮತ್ತು ಅಕ್ರಮ ಮತಬ್ಯಾಂಕ್ ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಪತ್ರದಲ್ಲಿ ಆರೋಪಿಸಿದ್ದಾರೆ.

'ಅಧಿಕಾರ ಉಳಿಸಿಕೊಳ್ಳಲು ತಾನು ಮಾಡಿಕೊಂಡಿರುವ ವ್ಯವಸ್ಥೆಗೆ ಬೆದರಿಕೆಯಾಗಿ ಪರಿಣಮಿಸಿದೆ ಎಂಬ ಕಾರಣದಿಂದ ಮಮತಾ ಅವರು ಎಸ್‌ಐಆರ್‌ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಮತದಾರರ ಪಟ್ಟಿಯನ್ನು ಸ್ವಚ್ಛಗೊಳಿಸುವ ಅಭಿಯಾನದ ಹಳಿತಪ್ಪಿಸುವ ಹತಾಶ ಪ್ರಯತ್ನ ಇದು' ಎಂದು ದೂರಿದ್ದಾರೆ.

'ರಾಜ್ಯದಲ್ಲಿ ಸೂಕ್ತ ಕಾರ್ಯಯೋಜನೆ ಇಲ್ಲದೆಯೇ ಬಲವಂತವಾಗಿ ಎಸ್‌ಐಆರ್ ನಡೆಸಲಾಗುತ್ತಿದೆ. ಈ ಪ್ರಕ್ರಿಯೆಯು ಸಾರ್ವಜನಿಕರು ಮತ್ತು ಅಧಿಕಾರಿಗಳನ್ನು ಅಪಾಯಕ್ಕೆ ಒಡ್ಡುತ್ತಿದೆ' ಎಂದು ಮಮತಾ ಗುರುವಾರ ಆರೋಪಿಸಿದ್ದರು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

'ಎಸ್‌ಐಆರ್: ಮತದಾರರ ಪಟ್ಟಿ ಶುದ್ಧೀಕರಣ'


ಅಮಿತ್ ಶಾ

ಭುಜ್ (ಗುಜರಾತ್): ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಗೆಲುವು ದೇಶದಲ್ಲಿ ನುಸುಳುಕೋರರ ವಿರುದ್ಧದ ಜನಾದೇಶವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ.

'ಕೆಲವು ರಾಜಕೀಯ ಪಕ್ಷಗಳು ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ವಿರೋಧಿಸುತ್ತಿವೆ. ಏಕೆಂದರೆ, ನುಸುಳುಕೋರರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಉಳಿಯುವುದನ್ನು ಖಚಿತ ಪಡಿಸಿಕೊಳ್ಳಲು ಆ ಪಕ್ಷಗಳು ಬಯಸುತ್ತವೆ' ಎಂದಿದ್ದಾರೆ.

ಗುಜರಾತ್‌ನ ಕಚ್ ಜಿಲ್ಲೆಯ ಭುಜ್‌ನಲ್ಲಿ ಬಿಎಸ್‌ಎಫ್ ವಜ್ರ ಮಹೋತ್ಸವ (61ನೇ ರೈಸಿಂಗ್ ಡೇ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯನ್ನು ಮತದಾರರ ಪಟ್ಟಿಯ 'ಶುದ್ಧೀಕರಣ' ಎಂದು ಬಣ್ಣಿಸಿದರು.

'ಇಂದು, ಗಡಿ ಭದ್ರತಾ ಪಡೆಯವರು (ಬಿಎಸ್‌ಎಫ್) ದೇಶದ ಎಲ್ಲಾ ಗಡಿಗಳಲ್ಲಿ ಒಳನುಸುಳುವಿಕೆಯನ್ನು ತಡೆಗಟ್ಟುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ ಮಾತ್ರವಲ್ಲದೆ, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯು ಕಲುಷಿತಗೊಳ್ಳದಂತೆ ನೋಡಿಕೊಳ್ಳಲು ಒಳನುಸುಳುವಿಕೆಯನ್ನು ತಡೆಯುವುದು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಆದರೂ, ಕೆಲವು ರಾಜಕೀಯ ಪಕ್ಷಗಳು ಒಳನುಸುಳುವಿಕೆ ತಡೆಯಲು ಕೇಂದ್ರ ಸರ್ಕಾರ ನಡೆಸುತ್ತಿರುವ ಪ್ರಯತ್ನಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿವೆ' ಎಂದು ಆರೋಪಿಸಿದರು.

'ಈ ದೇಶದಿಂದ ಪ್ರತಿಯೊಬ್ಬ ನುಸುಳುಕೋರರನ್ನು ಗಡಿಪಾರು ಮಾಡುತ್ತೇವೆ ಎಂಬುದನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಇದು ನಮ್ಮ ದೃಢಸಂಕಲ್ಪ' ಎಂದು ಪುನರುಚ್ಚರಿಸಿದರು.

ಸುದ್ದಿ 2 ನಿಮಿಷ

ಸಂಸತ್ತಿನ ಅಧಿಕಾರದ ಉಲ್ಲಂಘನೆ: ಒಬ್ರಯಾನ್

ನವದೆಹಲಿ (ಪಿಟಿಐ): 'ಚುನಾವಣಾ ಆಯೋಗದ ಕುರಿತು ಸಂಸದರು ಚರ್ಚಿಸುವಂತಿಲ್ಲ' ಎಂಬ ಸರ್ಕಾರದ ಹೇಳಿಕೆಯು ಸಂಸತ್ತಿನ ಅಧಿಕಾರದ ಉಲ್ಲಂಘನೆಯಾಗಿದೆ ಎಂದು ತೃಣಮೂಲ ಕಾಂಗ್ರೆಸ್ ನಾಯಕ, ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಯಾನ್ ಆರೋಪಿಸಿದ್ದಾರೆ.

ಮುಂಬರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದಾರೆ.

'ಸಂಸತ್ತಿನ ಕಳೆದ ಎರಡು ಅಧಿವೇಶನಗಳಲ್ಲಿ ಟಿಎಂಸಿ, ಕಾಂಗ್ರೆಸ್, ಎಸ್‌ಪಿ, ಡಿಎಂಕೆ, ಎಎಪಿ, ಆರ್‌ಜೆಡಿ, ಶಿವಸೇನಾ (ಯುಬಿಟಿ), ಜೆಎಂಎಂ, ಇತರ ಪಕ್ಷಗಳು ಚುನಾವಣಾ ಪ್ರಕ್ರಿಯೆಯು ಹೆಚ್ಚು ಪಾರದರ್ಶಕವಾಗಬೇಕಿರುವುದರ ಕುರಿತು ಚರ್ಚೆಗೆ ಆಗ್ರಹಿಸಿ 100ಕ್ಕೂ ಹೆಚ್ಚು ನೋಟಿಸ್‌ಗಳನ್ನು ಸಲ್ಲಿಸಿದ್ದವು. ಆದರೆ ಚರ್ಚೆಗೆ ಅವಕಾಶ ನೀಡಿಲ್ಲ' ಎಂದಿದ್ದಾರೆ.

'ಚುನಾವಣಾ ಆಯೋಗದ ಬಜೆಟ್‌ಅನ್ನು ಕೇಂದ್ರ ಸರ್ಕಾರವು ಕಾನೂನು ಸಚಿವಾಲಯದ ಮೂಲಕ ಮಂಡಿಸುತ್ತದೆ ಹಾಗೂ ಅದು ಸಂಸತ್ತಿನ ಅನುಮೋದನೆಗೆ ಒಳಪಟ್ಟಿರುತ್ತದೆ. ಚುನಾವಣಾ ಆಯೋಗದ ಖರ್ಚು ವೆಚ್ಚದ ಅಧಿಕಾರವನ್ನು ತನ್ನಲ್ಲಿ ಹಿಡಿದಿಟ್ಟುಕೊಂಡಿರುವುದರಿಂದ ಅದರ ಕಾರ್ಯವೈಖರಿಯನ್ನು ಪರಿಶೀಲಿಸುವ ಮತ್ತ ಚರ್ಚಿಸುವ ಅಧಿಕಾರ ಸಂಸತ್ತಿಗೆ ಇದೆ' ಎಂದಿದ್ದಾರೆ.

'ಆದ್ದರಿಂದ, ಚುನಾವಣಾ ಆಯೋಗದ ಬಜೆಟ್‌ಅನ್ನು ಅನುಮೋದಿಸುವ ಸಂಸದರು ಆ ಸಂಸ್ಥೆಯ ಬಗ್ಗೆ ಚರ್ಚಿಸುವ ಹಕ್ಕನ್ನು ಹೊಂದಿಲ್ಲ ಎಂದು ಸರ್ಕಾರ ಹೇಳಿದರೆ ಅದು ಸಂಸತ್ತಿನ ಅಧಿಕಾರದ ಉಲ್ಲಂಘನೆಯಾಗಿದೆ' ಎಂದು ಹೇಳಿದ್ದಾರೆ.

ಜಿ20: ದಕ್ಷಿಣ ಆಫ್ರಿಕಾಕ್ಕೆ ಬಂದಿಳಿದ ಪ್ರಧಾನಿ ಮೋದಿ

ಜೊಹಾನಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ-20 ನಾಯಕರ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಜೊಹಾನಸ್‌ಬರ್ಗ್‌ಗೆ ಆಗಮಿಸಿದ್ದಾರೆ.

ಗೌಟೆಂಗ್‌ನ ವಾಟರ್‌ಕ್ಲೂಫ್‌ನಲ್ಲಿರುವ ವಾಯು ಸೇನಾ ನೆಲೆಗೆ ಆಗಮಿಸಿದ ಪ್ರಧಾನಿ ಮೋದಿ ಅವರನ್ನು, ಸಾಂಸ್ಕೃತಿಕ ಹಾಡು ಮತ್ತು ನೃತ್ಯದ ಮೂಲಕ ಕಲಾವಿದರು ಸಾಂಪ್ರದಾಯಿಕವಾಗಿ ಸ್ವಾಗತಿಸಿದರು. ಆಫ್ರಿಕಾದಲ್ಲಿ ನಡೆಯುತ್ತಿರುವ ಮೊದಲ ಜಿ–20 ಶೃಂಗಸಭೆ ಇದಾಗಿದೆ.

'ಜಿ–20 ಸಂಬಂಧಿಸಿದ ಕಾರ್ಯಕ್ರಮಗಳಿಗಾಗಿ ಜೊಹಾನಸ್‌ಬರ್ಗ್‌ಗೆ ಬಂದಿಳಿದಿದ್ದೇನೆ. ವಿಶ್ವದ ನಾಯಕರೊಂದಿಗೆ ಜಗತ್ತಿನ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸಲು ಉತ್ಸುಕನಾಗಿದ್ದೇನೆ. ಸಹಕಾರವನ್ನು ಬಲಪಡಿಸುವುದು, ಅಭಿವೃದ್ಧಿಯ ಆದ್ಯತೆಗಳನ್ನು ಮುಂದುವರಿಸುವುದು ಮತ್ತು ಎಲ್ಲರಿಗೂ ಉತ್ತಮ ಭವಿಷ್ಯವನ್ನು ಖಚಿತಪಡಿಸುವುದರ ಕುರಿತು ನಮ್ಮ ಗಮನವಿದೆ' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಪೂರ್ಣ ಸಂತೃಪ್ತಿ'ಯೊಂದಿಗೆ ನಿರ್ಗಮಿಸುತ್ತಿದ್ದೇನೆ: ಗವಾಯಿ

ಬಿ.ಆರ್. ಗವಾಯಿ

ನವದೆಹಲಿ(ಪಿಟಿಐ): 'ನಾಲ್ಕು ದಶಕದ ಕಾನೂನು ವೃತ್ತಿಯ ಪಯಣದ ಕೊನೆಯಲ್ಲಿ 'ಸಂಪೂರ್ಣ ತೃಪ್ತಿ ಮತ್ತು ಸಂತೃಪ್ತಿ' ಯೊಂದಿಗೆ 'ಕಾನೂನು ವಿದ್ಯಾರ್ಥಿ'ಯಾಗಿ ನಿರ್ಗಮಿಸುತ್ತಿದ್ದೇನೆ' ಎಂದು ಸುಪ್ರೀಂ ಕೋರ್ಟ್‌ನ ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ನುಡಿದರು.

ಸುಪ್ರೀಂ ಕೋರ್ಟ್‌ನ ನಿಯೋಜಿತ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಅವರನ್ನೊಳಗೊಂಡ ವಿಧ್ಯುಕ್ತವಾದ ಸಮಾರಂಭಿಕ ಪೀಠದಲ್ಲಿ ಅವರು ಭಾವುಕರಾಗಿ ಮಾತನಾಡಿದರು.

ಬಿ.ಆರ್. ಗವಾಯಿ ಅವರು, ಇದೇ ವರ್ಷದ ಮೇ 14ರಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆರು ತಿಂಗಳಿಗೂ ಹೆಚ್ಚು ಕಾಲ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸಿರುವ ಗವಾಯಿ ಅವರು ನವೆಂಬರ್ 23ರಂದು ನಿವೃತ್ತಿಯಾಗಲಿದ್ದಾರೆ. ಶುಕ್ರವಾರ (ನ.20) ಅವರ ಕೊನೆಯ ಕೊನೆಯ ಕಲಾಪ.

ನಾಲ್ಕು ದಶಕಗಳ ವೃತ್ತಿ ಬದುಕಿನ ದಿನಗಳನ್ನು ನೆನಪಿಸಿಕೊಂಡ ಗವಾಯಿ ಅವರು, 'ಈ ದೇಶಕ್ಕಾಗಿ ನಾನು ಏನು ಮಾಡಬಹುದಿತ್ತೋ, ಅದನ್ನು ಮಾಡಿರುವ ಸಂಪೂರ್ಣ ತೃಪ್ತಿಯ ಭಾವನೆಯೊಂದಿಗೆ ನಿರ್ಗಮಿಸುತ್ತಿದ್ದೇನೆ. ಎಲ್ಲರಿಗೂ ಧನ್ಯವಾದಗಳು, ತುಂಬಾ ಧನ್ಯವಾದಗಳು' ಎಂದು ಅವರು ಹೇಳಿದರು.

'ನಾನು 1985ರಲ್ಲಿ ವಕೀಲ ವೃತ್ತಿಯ ಮೂಲಕ ಕಾನೂನು ಶಾಲೆಯನ್ನು ಪ್ರವೇಶಿಸಿದೆ. ಈಗಲೂ ನಾನು ಕಾನೂನು ವಿದ್ಯಾರ್ಥಿಯಾಗಿ ನಿರ್ಗಮಿಸುತ್ತಿದ್ದೇನೆ' ಎಂದರು.

ಪೈಲಟ್ ಸಾವು; ವಿಮಾನ ಪತನಕ್ಕೆ ಕಾರಣ ತಿಳಿಯಲು ತನಿಖಾ ತಂಡ ರಚನೆ

ದುಬೈ ಏರ್‌ಶೋ: ತೇಜಸ್ ಪತನ

ನವದೆಹಲಿ/ದುಬೈ (ಪಿಟಿಐ): ದುಬೈ ಏರ್‌ಶೋ ವೇಳೆ ಭಾರತೀಯ ವಾಯುಪಡೆಯ ಲಘು ಯುದ್ಧ ವಿಮಾನ (ಎಲ್‌ಸಿಎ) 'ತೇಜಸ್' ಶುಕ್ರವಾರ ಪತನಗೊಂಡಿದ್ದು, ಪೈಲಟ್ ಮೃತಪಟ್ಟಿದ್ದಾರೆ.

ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಅಭಿವೃದ್ಧಿಪಡಿಸಿರುವ, ಏಕ ಎಂಜಿನ್‌ನ ಈ ಯುದ್ಧ ವಿಮಾನವು ಏರ್‌ಶೋನಲ್ಲಿ ಪ್ರದರ್ಶನ ನೀಡುತ್ತಿದ್ದ ವೇಳೆ, ಶುಕ್ರವಾರ ಮಧ್ಯಾಹ್ನ 2.10ರ ಸುಮಾರಿಗೆ ನೋಡು ನೋಡುತ್ತಿದ್ದಂತೆ ಆಗಸದಿಂದ ನೆಲಕ್ಕೆ ಅಪ್ಪಳಿಸಿ ಹೊತ್ತಿ ಉರಿಯಿತು. ವಿಮಾನ ಪತನಗೊಂಡ ಆಲ್ ಮಕ್ತೌಮ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಟ್ಟ ಹೊಗೆ ಆವರಿಸಿಕೊಂಡಿದ್ದರಿಂದ ಪೈಲಟ್ ಪ್ರಾಣಾಪಾಯದಿಂದ ಪಾರಾಗಿದ್ದಾರೆಯೇ ಎನ್ನುವ ಅನುಮಾನ ವ್ಯಕ್ತವಾಗಿತ್ತು. ದುರ್ಘಟನೆಯಲ್ಲಿ ಪೈಲಟ್ ಮೃತಪಟ್ಟಿರುವುದನ್ನು ವಾಯುಪಡೆ ಸಂಜೆಯ ವೇಳೆಗೆ ದೃಢಪಡಿಸಿತು.

> ಇಂತಹ ದುಃಖದ ಸಮಯದಲ್ಲಿ ಮೃತ ಪೈಲಟ್‌ನ ಕುಟುಂಬದ ಜತೆಗೆ ಭಾರತೀಯ ಸೇನಾಪಡೆಗಳು ದೃಢವಾಗಿ ನಿಲ್ಲಲಿವೆ
>
> **ಜನರಲ್ ಅನಿಲ್ ಚೌಹಾಣ್,** ಭಾರತೀಯ ಸೇನಾ ಪಡೆಗಳ ಮುಖ್ಯಸ್ಥ

'ದುಬೈ ಏರ್‌ಶೋನ ವೈಮಾನಿಕ ಪ್ರದರ್ಶನದ ವೇಳೆ ತೇಜಸ್ ಪತನಗೊಂಡಿದೆ. ಮೃತಪಟ್ಟ ಪೈಲಟ್ ಕುಟುಂಬದ ಜತೆಗೆ ಐಎಎಫ್ ನಿಲ್ಲಲಿದೆ. ತಾಂತ್ರಿಕ ಲೋಪವೂ ಸೇರಿದಂತೆ ವಿಮಾನ ಪತನಕ್ಕೆ ನಿಖರ ಕಾರಣ ತಿಳಿಯಲು ತನಿಖೆ ನಡೆಯಲಿದೆ' ಎಂದು ಐಎಎಫ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ವಿಮಾನದ ಪತನಗೊಂಡ ಬೆನ್ನಲ್ಲೇ ಅಗ್ನಿಶಾಮಕ ಮತ್ತು ತುರ್ತು ಕಾರ್ಯಪಡೆ ತಂಡಗಳು ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯದಲ್ಲಿ ಭಾಗಿಯಾದವು' ಎಂದು ದುಬೈ ಮಾಧ್ಯಮ ಕಚೇರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

2025ರ ದುಬೈ ಏರ್‌ಶೋಗೆ ನ.17ರಂದು ಚಾಲನೆ ಲಭಿಸಿತ್ತು. ಈ ಬಾರಿ 1,500ಕ್ಕೂ ಹೆಚ್ಚು ಪ್ರದರ್ಶನಕಾರರು, 150 ದೇಶಗಳಿಂದ ವೈಮಾನಿಕ ಕ್ಷೇತ್ರದ 1.48 ಲಕ್ಷ ವೃತ್ತಿಪರರು ಭಾಗವಹಿಸಿದ್ದರು. 'ತೇಜಸ್' ಯುದ್ಧವಿಮಾನದ ಜತೆಗೆ ಭಾರತೀಯ ವಾಯುಪಡೆಯ 'ಸೂರ್ಯ ಕಿರಣ್' ತಂಡವೂ ಪ್ರದರ್ಶನದಲ್ಲಿ ಭಾಗವಹಿಸಿದೆ.

ಎರಡನೇ ದುರಂತ

ತೇಜಸ್ ಯುದ್ಧ ವಿಮಾನ ಅಪಘಾತಕ್ಕೀಡಾಗುತ್ತಿರುವುದು 20 ತಿಂಗಳಲ್ಲಿ ಇದು ಎರಡನೆಯ ಬಾರಿ. 2024ರ ಮಾರ್ಚ್‌ನಲ್ಲಿ ಪೋಖ್ರಾನ್ ಮರುಭೂಮಿಯಲ್ಲಿ ಮಿಲಿಟರಿ ತರಬೇತಿ ಮುಗಿಸಿಕೊಂಡು ಮರಳುತ್ತಿದ್ದ ವೇಳೆ ರಾಜಸ್ಥಾನದ ಜೈಸಲ್ಮೇ-ರ್‌ನಲ್ಲಿರುವ ಜನವಸತಿ ಪ್ರದೇಶದಲ್ಲಿ ತೇಜಸ್ ಪತನಗೊಂಡಿತ್ತು. ವಿಮಾನದಿಂದ ಸುರಕ್ಷಿತವಾಗಿ ಜಿಗಿಯುವ ಮೂಲಕ ಪೈಲಟ್ ಪ್ರಾಣಾಪಾಯದಿಂದ ಪಾರಾಗಿದ್ದರು. 2001ರಲ್ಲಿ ಭಾರತೀಯ ವಾಯುಪಡೆಗೆ ತೇಜಸ್ ಸೇರ್ಪಡೆಗೊಂಡ ನಂತರ ನಡೆದಿದ್ದ ಮೊದಲ ಅಪಘಾತ ಇದಾಗಿತ್ತು.

ತೇಜಸ್ ಯುದ್ಧ ವಿಮಾನದ ನಿರ್ಮಾಣ ಕಾರ್ಯ ಆರಂಭಗೊಂಡಿದ್ದು 1984ರಲ್ಲಿ. ಆದರೆ, ಇದು ಹಾರಾಟಕ್ಕೆ ಯೋಗ್ಯವಾಗಿದೆ ಎಂದು ಅಧಿಕೃತವಾಗಿ ಘೋಷಣೆಯಾಗಿದ್ದು 2011ರಲ್ಲಿ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅಭಿಮತ

'ನೆಹರೂ ಬರಹ: ಭಾರತದ ಆತ್ಮಸಾಕ್ಷಿಯ ದಾಖಲೆ'

ನವದೆಹಲಿ (ಪಿಟಿಐ): 'ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಬರಹಗಳು ಕೇವಲ ಇತಿಹಾಸ ಮಾತ್ರವಲ್ಲ, ಅವು ವಿಕಸನಗೊಳ್ಳುತ್ತಿರುವ ಭಾರತದ ಆತ್ಮಸಾಕ್ಷಿಯ ದಾಖಲೆಗಳಾಗಿವೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಜವಹರಲಾಲ್ ನೆಹರೂ ಅವರ ಆಯ್ದ ಬರಹಗಳ ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡ ಬೆನ್ನಲ್ಲೇ ರಾಹುಲ್ ಅವರ ಹೇಳಿಕೆ ಹೊರಬಿದ್ದಿದೆ.

'ಭಾರತದ ಪ್ರಜಾಪ್ರಭುತ್ವದ ಪ್ರಯಾಣ, ಅದರ ಶಕ್ತಿ ಮತ್ತು ಕನಸುಗಳನ್ನು ಅರ್ಥ ಮಾಡಿಕೊಳ್ಳಲು ಬಯಸುವವರಿಗೆ ನೆಹರೂ ಅವರ ಬರಹಗಳು ಪ್ರಬಲ ದಿಕ್ಸೂಚಿಯಾಗಿವೆ' ಎಂದು ಅವರು ಅಭಿಪ್ರಾಯಪಟ್ಟರು.

35 ಸಾವಿರ ದಾಖಲೆಗಳನ್ನು ಒಳಗೊಂಡಿರುವ ನೆಹರೂ ಅವರ ಆಯ್ದ ಬರಹಗಳ 100 ಸಂಪುಟಗಳು, 3 ಸಾವಿರ ಚಿತ್ರಗಳು ಆನ್‌ಲೈನ್‌ನಲ್ಲಿ ಲಭ್ಯವಿದ್ದು, ಆಸಕ್ತರು nehruarchive.inನಿಂದ ಇದನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

'ಭಾರತಕ್ಕೆ ನೆಹರೂ ಅವರ ಅಪಾರ ಕೊಡುಗೆಗಳ ಬಗ್ಗೆ ತಪ್ಪು ಮಾಹಿತಿ ಹರಡುತ್ತಿರುವ ಇಂದಿನ ಕಾಲಘಟ್ಟದಲ್ಲಿ, ಮುಂದಿನ ತಲೆಮಾರಿಗೆ ಸತ್ಯವನ್ನು ವರ್ಗಾಯಿಸುವ ಉದ್ದೇಶದಿಂದ ಅವರ ಬರಹಗಳ ಡಿಜಿಟಲೀಕರಣ ಕಾರ್ಯ ಅತ್ಯಂತ ಮಹತ್ವದ್ದು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಸತ್ಯಗಳು ಸತ್ಯಗಳೇ, ಅವು ನಿಮ್ಮ ಇಷ್ಟಗಳ ಕಾರಣದಿಂದಾಗಿ ಕಣ್ಮರೆಯಾಗುವುದಿಲ್ಲ' ಎಂಬ ಜವಾಹರಲಾಲ್ ನೆಹರೂ ಅವರ ಪ್ರಸಿದ್ಧ ಹೇಳಿಕೆಯನ್ನು ಉಲ್ಲೇಖಿಸಿ ಖರ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಜೆಎನ್‌ಎಂಎಫ್' ಯೋಜನೆ

ನೆಹರೂ

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟ್ರಸ್ಟಿ-ಯಾಗಿರುವ 'ಜವಾಹರಲಾಲ್ ನೆಹರೂ ಮೆಮೋರಿಯಲ್ ಫಂಡ್' (ಜೆಎನ್‌ಎಂಎಫ್) ಡಿಜಿಟಲೀಕರಣ ಕಾರ್ಯ ಕೈಗೊಂಡಿದೆ. 'ಎರಡನೆಯ ಹಂತದಲ್ಲಿ ನೆಹರೂ ಅವರಿಗೆ ಗಾಂಧೀಜಿ, ಸುಭಾಷ್‌ಚಂದ್ರ ಬೋಸ್ ಸೇರಿ ಪ್ರಮುಖರು ಬರೆದಿರುವ ಪತ್ರಗಳ ಡಿಜಿಟಲೀಕರಣ ಕಾರ್ಯ ನಡೆಯಲಿದೆ' ಎಂದು ಜೈರಾಂ ರಮೇಶ್ ಹೇಳಿದರು.

> ದೇಶದ ಪ್ರಜಾಪ್ರಭುತ್ವದ ಕನಸುಗಳೊಂದಿಗೆ ಬೆಸೆದುಕೊಂಡಿರುವ ನೆಹರೂ ಪರಂಪರೆ ಈಗ ಆನ್‌ಲೈನ್ ಗ್ರಂಥಾಲಯದ ರೂಪದಲ್ಲಿ ಸರ್ವರಿಗೂ ಮುಕ್ತವಾಗಿದೆ
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

'ಸಂವಿಧಾನ ತಿದ್ದುಪಡಿ ತನಕ ವಿರಮಿಸುವುದಿಲ್ಲ'

ಚೆನ್ನೈ (ಪಿಟಿಐ): 'ವಿಧಾನ ಸಭೆಗಳು ಅಂಗೀಕರಿಸುವ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ಸಂಬಂಧಿಸಿ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಮಾಡಬೇಕು. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ಅಗತ್ಯ. ಇದು ಈಡೇರುವವರೆಗೆ ವಿರಮಿಸುವುದಿಲ್ಲ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶುಕ್ರವಾರ ಹೇಳಿದ್ದಾರೆ.

'ಮಸೂದೆಗಳಿಗೆ ಅಂಕಿತ ಹಾಕುವುದಕ್ಕಾಗಿ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಸಾಧ್ಯ ಇಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರವಷ್ಟೆ ತೀರ್ಪು ನೀಡಿತ್ತು. ಈ ಕುರಿತು ಅವರು ನೀಡಿರುವ ಮೊದಲ ಪ್ರತಿಕ್ರಿಯೆ ಇದಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 'ರಾಜ್ಯಗಳ ಹಕ್ಕುಗಳು ಹಾಗೂ ಒಕ್ಕೂಟ ವ್ಯವಸ್ಥೆಗಾಗಿ ನಮ್ಮ ಹೋರಾಟ ಮುಂದುವರಿಯಲಿದೆ' ಎಂದಿದ್ದಾರೆ.

'ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಪೀಠವೊಂದು, ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರಿಗೆ ಮೂರು ತಿಂಗಳ ಗಡುವು ನೀಡಿ ಏಪ್ರಿಲ್ 8ರಂದು ತೀರ್ಪು ನೀಡಿತ್ತು. ಈ ವಿಷಯಕ್ಕೆ ಸಂಬಂಧಿಸಿ ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ನ ಸಲಹೆ ಕೇಳಿದ್ದರು. ಅಂಕಿತ ಹಾಕುವುದಕ್ಕೆ ಕಾಲಮಿತಿ ನಿಗದಿ ಮಾಡಲು ಸಾಧ್ಯವಿಲ್ಲ ಎಂಬುದಾಗಿ ಸುಪ್ರೀಂ ಕೋರ್ಟ್ ಈಗ ತೀರ್ಪು ನೀಡಿದ್ದರೂ, ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್‌ನ ಪೀಠವೊಂದು ನೀಡಿರುವ ತೀರ್ಪಿನ ಮೇಲೆ ಇದು ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ' ಎಂದು ಸ್ಟಾಲಿನ್ ಪ್ರತಿಪಾದಿಸಿದ್ದಾರೆ.

ಪಾಕ್‌ಗೆ ಮಾಹಿತಿ ಸೋರಿಕೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಉಡುಪಿ: ನೌಕಾಪಡೆಯ ಹಡಗುಗಳಿಗೆ ಸಂಬಂಧಿಸಿದ ಗೋಪ್ಯ ಮಾಹಿತಿಯನ್ನು ಪಾಕಿಸ್ತಾನಕ್ಕೆ ಸೋರಿಕೆ ಮಾಡಿದ ಆರೋಪದಲ್ಲಿ ಇಬ್ಬರನ್ನು ಪೊಲೀಸರು ಮಲ್ಪೆಯಲ್ಲಿ ಬಂಧಿಸಿದ್ದಾರೆ. ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ರೋಹಿತ್ (29), ಸಂತ್ರಿ (37) ಬಂಧಿತರು.

'ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವಾಲಯದ ಸುಪರ್ದಿಯಲ್ಲಿ ಇರುವ, ಮಲ್ಪೆಯ ಉಡುಪಿ ಕೊಚ್ಚಿನ್ ಶಿಪ್‌ಯಾರ್ಡ್ ಸಂಸ್ಥೆಗೆ, ಸುಷ್ಮಾ ಮರೈನ್ ಪ್ರೈವೇಟ್ ಲಿಮಿಟೆಡ್ ಮೂಲಕ ಗುತ್ತಿಗೆ ಆಧಾರದಲ್ಲಿ ಆರೋಪಿಗಳು ಕೆಲಸಕ್ಕೆ ಸೇರಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ರೋಹಿತ್ ಈ ಹಿಂದೆ ಇನ್ಸುಲೇಟರ್ ಆಗಿ ಕೊಚ್ಚಿಯಲ್ಲಿರುವ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಕೆಲಸ ಮಾಡಿಕೊಂಡಿದ್ದ. ಅಲ್ಲಿ, ನೌಕಾಪಡೆಗೆ ಸಂಬಂಧಪಟ್ಟ ಹಡಗುಗಳನ್ನು ನಿರ್ಮಾಣ ಮಾಡಲಾಗುತ್ತಿದೆ' ಎಂದರು.

'ರೋಹಿತ್ ಕೇರಳದಲ್ಲಿ ಕೆಲಸ ಮಾಡುವಾಗ ಹಡಗುಗಳ ಸಂಖ್ಯೆಗಳ ಪಟ್ಟಿ ಹಾಗೂ ಇತರ ಗೋಪ್ಯ ಮಾಹಿತಿಗಳನ್ನು ಕಳೆದ ಒಂದೂವರೆ ವರ್ಷದಿಂದ ವಾಟ್ಸ್‌ಆ್ಯಪ್ ಮೂಲಕ ಹಂಚಿಕೊಂಡಿದ್ದು, ಲಾಭ ಪಡೆದುಕೊಂಡಿದ್ದಾನೆ' ಎಂದು ಹೇಳಿದರು.

'ಮಲ್ಪೆಯ ಶಿಪ್‌ಯಾರ್ಡ್ ಲಿಮಿಟೆಡ್‌ಗೆ ಬಂದ ನಂತರವು ಕೊಚ್ಚಿಯಲ್ಲಿ ಸ್ನೇಹಿತನಿಂದ ಮಾಹಿತಿ ಪಡೆದು, ಬೇರೆ ವ್ಯಕ್ತಿಗೆ ಕಳುಹಿಸುತ್ತಿದ್ದು, ದೇಶದ ಭದ್ರತೆಗೆ ಧಕ್ಕೆ ತರುವ ಕೆಲಸ ಮಾಡಿದ್ದಾನೆ. ಆರೋಪಿ ಈ ಮಾಹಿತಿಗಳನ್ನು ಪಾಕಿಸ್ತಾನಕ್ಕೆ ಸೋರಿಕೆ ಮಾಡಿರುವುದು ಪ್ರಾಥಮಿಕ ಹಂತದ ವಿಚಾರಣೆಯಲ್ಲಿ ತಿಳಿದುಬಂದಿದೆ' ಎಂದೂ ವಿವರಿಸಿದರು.

'ಬಂಧಿತರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಅವರನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗುವುದು' ಎಂದರು.

ಉಡುಪಿ ಕೊಚ್ಚಿನ್ ಶಿಪ್‌ಯಾರ್ಡ್‌ನ ಸಿಇಒ ಅವರು ಮಲ್ಪೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಕಾರ್ಕಳ ಉಪವಿಭಾಗದ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ಹರ್ಷ ಪ್ರಿಯಂವದಾ ನೇತೃತ್ವದ ತಂಡವು ಆರೋಪಿಗಳನ್ನು ಬಂಧಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ನಕಲಿ ಎನ್‌ಕೌಂಟರ್‌ನಲ್ಲಿ ಹಿಡ್ಮಾ ಹತ್ಯೆ: ಆರೋಪ

ಮಾಡವಿ ಹಿಡ್ಮಾ

ಹೈದರಾಬಾದ್: 'ಛತ್ತೀಸಗಢದ ಬಸ್ತಾರ್ ವಲಯದ ಮುಖಂಡ ಮಾಡವಿ ಹಿಡ್ಮಾ ಅವರನ್ನು ಆಂಧ್ರ ಪ್ರದೇಶ ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ' ಎಂದು ಮಾವೋವಾದಿಗಳ ಕೇಂದ್ರ ಸಮಿತಿ ಆರೋಪಿಸಿದೆ.

ಹಿಡ್ಮಾ ಮತ್ತು ಜೊತೆಗಿದ್ದವರನ್ನು ನವೆಂಬರ್ 15ರಂದು ವಿಜಯವಾಡದಲ್ಲಿ ಬಂಧಿಸಲಾಗಿತ್ತು. ನಾಲ್ಕೈದು ದಿನ ಅವರಿಗೆ ಚಿತ್ರಹಿಂಸೆ ನೀಡಿದ ಬಳಿಕ ನಕಲಿ ಎನ್‌ಕೌಂಟರ್ ಮೂಲಕ ಅವರನ್ನು ಕೊಲ್ಲಲಾಯಿತು ಎಂದು ಕೇಂದ್ರ ಸಮಿತಿ ಆರೋಪಿಸಿದೆ.

ಹಿಡ್ಮಾ, ಆತನ ಪತ್ನಿ ಮದಕಂ ರಾಜೆ ಸೇರಿ ಒಟ್ಟು 6 ನಕ್ಸಲರು ಅಲ್ಲೂರಿ ಸೀತಾ ರಾಮರಾಜು ಜಿಲ್ಲೆಯ ಮಾರೇಡುಮಿಲ್ಲಿ ಅರಣ್ಯ ಪ್ರದೇಶದ ಮೂಲಕ ಆಂಧ್ರಪ್ರದೇಶ ಪ್ರವೇಶಿಸುವಾಗ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೃತಪಟಿದ್ದಾರೆ ಎಂದು ಪೊಲೀಸರು ಹೇಳಿದ್ದರು.

ಆದರೆ, ಮಾವೋವಾದಿಗಳ ಕೇಂದ್ರ ಸಮಿತಿಯ ವಕ್ತಾರ ಅಭಯ್ ಇದನ್ನು ಅಲ್ಲಗಳೆದಿದ್ದು, 'ಕೇಂದ್ರ ಗೃಹ ಸಚಿವಾಲಯದ ಸೂಚನೆಯಂತೆ ಆಂಧ್ರಪ್ರದೇಶದ ವಿಶೇಷ ತನಿಖಾ ದಳವು ಅಕ್ರಮವಾಗಿ ಹಿಡ್ಮಾ ಮತ್ತು ಸಹಚರರನ್ನು ವಶಕ್ಕೆ ಪಡೆದು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದೆ. ಮಾರೇಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಎನ್‌ಕೌಂಟರ್ ನಡೆದಿದೆ ಎನ್ನುವುದು ಸುಳ್ಳು' ಎಂದು ಅವರು ಹೇಳಿದ್ದಾರೆ.

ದೆಹಲಿ ಸ್ಫೋಟ: ಆರೋಪಿ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಎನ್‌ಐಎ ಕಚೇರಿಯಲ್ಲಿ ತನ್ನ ವಕೀಲರೊಂದಿಗೆ ಮಾತನಾಡಲು ಅನುಮತಿ ನೀಡುವಂತೆ ಕೋರಿ ದೆಹಲಿ ಕಾರು ಸ್ಫೋಟ ಪ್ರಕರಣದ ಆರೋಪಿ ಜಸೀರ್ ಬಿಲಾಲ್ ವಾನಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಲು ದೆಹಲಿ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

'ತನ್ನ ಮನವಿಯನ್ನು ವಿಚಾರಣಾ ನ್ಯಾಯಾಲಯವು ತಿರಸ್ಕರಿಸಿರುವ ಬಗ್ಗೆ ದಾಖಲೆಗಳನ್ನು ತೋರಿಸುವಲ್ಲಿ ಅರ್ಜಿದಾರರು ವಿಫಲಾಗಿದ್ದಾರೆ. ಅವರೇನೂ ವಿಶೇಷ ವ್ಯಕ್ತಿಯಲ್ಲ. ನ್ಯಾಯಾಂಗದ ನಿರ್ದಿಷ್ಟ ಪ್ರಕ್ರಿಯೆಯನ್ನು ಎಲ್ಲರೂ ಪಾಲಿಸಬೇಕು' ಎಂದು ನ್ಯಾಯಮೂರ್ತಿ ಸ್ವರಣಕಾಂತ ಶರ್ಮಾ ಅವರು ತಿಳಿಸಿದ್ದಾರೆ.

ವಾನಿ ಅವರ ಅರ್ಜಿಯನ್ನು ವಿಚಾರಣಾ ನ್ಯಾಯಾಲಯವು ಮೌಖಿಕವಾಗಿ ನಿರಾಕರಿಸಿತ್ತು ಎಂದು ವಾನಿ ಪರ ವಕೀಲರು ನ್ಯಾಯಾಲಯಕ್ಕೆ ಅರುಹಿದ್ದರು.

ನವೆಂಬರ್ 10ರಂದು ದೆಹಲಿಯ ಕೆಂಪುಕೋಟೆ ಬಳಿ ನಡೆದಿದ್ದ ಕಾರು ಸ್ಫೋಟದ ಸಹ ಸಂಚುಕೋರ ಎನ್ನಲಾದ ವನಿಯನ್ನು ನವೆಂಬರ್ 17ರಂದು ಎನ್‌ಐಎ ಬಂಧಿಸಿತ್ತು. ಬಳಿಕ ಆತನನ್ನು 10 ದಿನ ಎನ್‌ಐಎ ಕಸ್ಟಡಿಗೆ ನೀಡಲಾಗಿತ್ತು.

ಜಾಗ ಗುರುತಿಸಿದ್ದು ಚಳ್ಳಕೆರೆಯಲ್ಲಿ–ಕಾಡು ಬೆಳೆಸಿದ್ದು ಅರಸೀಕೆರೆಯಲ್ಲಿ: ಆರ್‌ಇಸಿ ಆಕ್ಷೇಪ

ಎತ್ತಿನಹೊಳೆ ಯೋಜನೆಗೆ ಮತ್ತಷ್ಟು ಸಂಕಷ್ಟ

• ಮಂಜುನಾಥ ಹೆಬ್ಬಾರ್

ನವದೆಹಲಿ: ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ. ಕೇಂದ್ರ ಅರಣ್ಯ ಸಚಿವಾಲಯದ ಅನುಮೋದನೆ ಪಡೆಯದೆಯೇ ಪರಿಹಾರಾತ್ಮಕ ಅರಣ್ಯೀಕರಣದ (34 ಎಕರೆ) ಜಾಗವನ್ನು ಬದಲಿಸಿದ್ದಕ್ಕೆ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ (ಆರ್‌ಇಸಿ) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರ ಸಲ್ಲಿಸಿರುವ ಹೊಸ ಪ್ರಸ್ತಾವ ಅಸ್ಪಷ್ಟವಾಗಿದ್ದು, ಹೊಸ ಪ್ರಸ್ತಾವ ಸಲ್ಲಿಸುವಂತೆ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷ ಎಸ್.ಸೆಂಥಿಲ್ ಕುಮಾರ್ ಅಧ್ಯಕ್ಷತೆಯಲ್ಲಿ ನವೆಂಬರ್ 7ರಂದು ನಡೆದ ಸಭೆಯು ನಿರ್ದೇಶನ ನೀಡಿದೆ.

ಈ ಯೋಜನೆಗೆ ನಿಯಮಬಾಹಿರವಾಗಿ ಹೆಚ್ಚುವರಿ ಅರಣ್ಯ ಬಳಸಲಾಗಿದೆ. ಎಷ್ಟು ಅರಣ್ಯ ಬಳಸಲಾಗಿದೆ ಎಂಬ ವಿವರ ಸಹಿತ ರಾಜ್ಯ ಸರ್ಕಾರವು ಅರಣ್ಯ ಸಚಿವಾಲಯಕ್ಕೆ ಹೊಸ ಪ್ರಸ್ತಾವ ಸಲ್ಲಿಸಬೇಕು. ಈ ಅಕ್ರಮಕ್ಕೆ ಕಾರಣರಾದ ಅಧಿಕಾರಿಗಳ ಹೆಸರು ಹಾಗೂ ಅವರ ವಿರುದ್ಧ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸಬಕು ಎಂದು ತಾಕೀತು ಮಾಡಿದೆ.

ಆಕ್ಷೇಪವೇಕೆ?: 'ಅರಣ್ಯ ಬಳಕೆಗೆ ಎರಡನೇ ಹಂತದ ಅನುಮೋದನೆ ನೀಡುವ ಸಂದರ್ಭದಲ್ಲಿ ಹಲವು ಷರತ್ತುಗಳನ್ನು ವಿಧಿಸಲಾಗಿತ್ತು. ಆದರೆ, ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯದೆಯೇ ಪರಿಹಾರಾತ್ಮಕ ಅರಣ್ಯೀಕರಣದ ಸ್ಥಳ ಬದಲಿಸಲಾಗಿದೆ. ಜತೆಗೆ, ಹೆಚ್ಚುವರಿ ಅರಣ್ಯ ಬಳಸಲಾಗಿದೆ' ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ ಪ್ರಣಿತಾ ಪೌಲ್ ಅವರು ಉನ್ನತಾಧಿಕಾರ ಸಮಿತಿಯ ಸಭೆಯ ಗಮನಕ್ಕೆ ತಂದರು.

ಕಾಡು ಬೆಳೆಸಲು ಈಗ ಗುರುತಿಸಿರುವ ಜಾಗವು 2017ರಲ್ಲೇ ಅರಣ್ಯ ಇಲಾಖೆಯ ಹೆಸರಿನಲ್ಲಿ ಖಾತೆ ಆಗಿದೆ. ಈ ಜಾಗವನ್ನು 2022ರಲ್ಲಿ ಡೀಮ್ಡ್ (ಪರಿಭಾವಿತ) ಅರಣ್ಯವೆಂದು ಗುರುತಿಸಲಾಗಿದೆ. ಇದರೊಂದಿಗೆ, ರಾಜ್ಯ ಅರಣ್ಯ ಇಲಾಖೆ ಒದಗಿಸಿರುವ ದಾಖಲೆಗಳಲ್ಲಿ ವ್ಯತ್ಯಾಸ ಇದೆ. ಯೋಜನೆಗೆ 34 ಎಕರೆ ಅರಣ್ಯ ಬಳಸಿದ್ದರೆ, ಪರಿಹಾರಾತ್ಮಕ ಅರಣ್ಯೀಕರಣಕ್ಕೆ 85 ಎಕರೆ ಅರಣ್ಯ ಗುರುತಿಸಲಾಗಿದೆ. ಇದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಉನ್ನತಾಧಿಕಾರ ಸಮಿತಿ ಅಭಿಪ್ರಾಯಪಟ್ಟಿದೆ.

ಏನಿದು ವಿವಾದ?

ಬರಪೀಡಿತ ಜಿಲ್ಲೆಗಳಿಗೆ ನೀರು ಹರಿಸಲು ಗುರುತ್ವಾಕರ್ಷಣೆ ಕಾಲುವೆ ನಿರ್ಮಾಣಕ್ಕೆ ಸಕಲೇಶಪುರ ತಾಲ್ಲೂಕಿನಲ್ಲಿ 34 ಎಕರೆ ಅರಣ್ಯವನ್ನು ವಿಶ್ವೇಶ್ವರಯ್ಯ ಜಲನಿಗಮ 2016ರಲ್ಲಿ ಬಳಸಿಕೊಂಡಿತ್ತು. ಪರ್ಯಾಯವಾಗಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಚಳ್ಳಕೆರೆ ತಾಲ್ಲೂಕಿನ ವರವು ಕಾವಲ್‌ನ 34 ಎಕರೆ ಜಾಗ ಗುರುತಿಸಿತ್ತು. ಆ ಬಳಿಕ, ಅರಸೀಕೆರೆ ತಾಲ್ಲೂಕಿನ ಬಾಗೇಶಪುರದಲ್ಲಿ ಪರಿಹಾರಾತ್ಮಕ ಅರಣ್ಯೀಕರಣ ನಡೆಸುವುದಾಗಿ ತಿಳಿಸಿತ್ತು. ಇನ್ನೊಂದೆಡೆ, ಯೋಜನೆಗೆ ಹೆಚ್ಚುವರಿಯಾಗಿ 273 ಎಕರೆ ಅರಣ್ಯ ಬಳಕೆಗೆ ಈ ವರ್ಷದ ಆರಂಭದಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವವನ್ನು ಅರಣ್ಯ ಸಲಹಾ ಸಮಿತಿಯ ಆರನೇ ಸಮಿತಿ ಸಭೆಯಲ್ಲಿ ಪರಾಮರ್ಶೆ ನಡೆಸಲಾಗಿತ್ತು. '34 ಎಕರೆ ಅರಣ್ಯ ಬಳಸಿದ್ದಕ್ಕೆ ಪರ್ಯಾಯವಾಗಿ ಪರಿಹಾರಾತ್ಮಕ ಅರಣ್ಯೀಕರಣ ನಡೆಸುವಂತೆ ಷರತ್ತು ವಿಧಿಸಲಾಗಿತ್ತು. ಈ ಷರತ್ತುಗಳನ್ನು ನಿಗಮ ಉಲ್ಲಂಘಿಸಿದೆ. ಹೀಗಾಗಿ, ಹೆಚ್ಚುವರಿ ಅರಣ್ಯ ಬಳಕೆಗೆ ಸದ್ಯ ಅನುಮೋದನೆ ನೀಡುವುದಿಲ್ಲ' ಎಂದು ಅರಣ್ಯ ಸಲಹಾ ಸಮಿತಿ ಸ್ಪಷ್ಟಪಡಿಸಿತ್ತು. ಈ ಷರತ್ತುಗಳನ್ನು ಪಾಲನೆ ಮಾಡುವಂತೆ ನಿಗಮಕ್ಕೆ ನಿರ್ದೇಶನ ನೀಡಿತ್ತು.

ಬಾಗೇಶಪುರ ಗ್ರಾಮದಲ್ಲಿ ಈಗಾಗಲೇ ಪರಿಹಾರಾತ್ಮಕ ಅರಣ್ಯೀಕರಣ ನಡೆಸಲಾಗಿದ್ದು, ಇದಕ್ಕೆ ಘಟನೋತ್ತರ ಅನುಮೋದನೆ ನೀಡಬೇಕು ಎಂದು ರಾಜ್ಯ ಅರಣ್ಯ ಇಲಾಖೆ ಈ ವರ್ಷದ ಆಗಸ್ಟ್‌ನಲ್ಲಿ ಅರಣ್ಯ ಸಚಿವಾಲಯಕ್ಕೆ ಕೋರಿತ್ತು. ಈ ಪ್ರದೇಶದಲ್ಲಿ 2019–20ನೇ ಸಾಲಿನಲ್ಲೇ ಕಾಡು ಬೆಳೆಸಲಾಗಿದೆ ಎಂದು ಸ್ಪಷ್ಟಪಡಿಸಿತ್ತು.

4 ಕಾರ್ಮಿಕ ಸಂಹಿತೆಗಳು ಜಾರಿ

ಒಂದನೇ ಪುಟದಿಂದ...

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, 'ಅಧಿಸೂಚಿತ ನಾಲ್ಕು ಕಾರ್ಮಿಕ ಸಂಹಿತೆಗಳು ಅತ್ಯಂತ ಸಮಗ್ರ ಹಾಗೂ ಪ್ರಗತಿಪರವಾಗಿವೆ. ಸ್ವಾತಂತ್ರ್ಯ ನಂತರ ರೂಪಿಸಿರುವ ಕಾರ್ಮಿಕ ಕೇಂದ್ರಿತ ಸುಧಾರಣೆಗಳನ್ನು ಒಳಗೊಂಡಿರುವ ಈ ಸಂಹಿತೆಗಳಿಂದ ಕಾರ್ಮಿಕರ ಸಬಲೀಕರಣ ಸಾಧ್ಯವಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಈ ಸಂಹಿತೆಗಳು ವಿಶೇಷವಾಗಿ ನಾರಿಶಕ್ತಿ ಮತ್ತು ಯುವಶಕ್ತಿಗೆ ಸಾರ್ವತ್ರಿಕವಾದ ಸಾಮಾಜಿಕ ಭದ್ರತೆ, ಕನಿಷ್ಠ ಮತ್ತು ಸಕಾಲಿಕ ವೇತನ ಪಾವತಿ, ಉದ್ಯೋಗ ಸ್ಥಳಗಳಲ್ಲಿ ಸುರಕ್ಷತೆ ಹಾಗೂ ಆರ್ಥಿಕವಾಗಿ ಲಾಭದಾಯಕವಾದ ಅವಕಾಶಗಳನ್ನು ಒದಗಿಸುವುದಕ್ಕೆ ಭದ್ರ ಬುನಾದಿಯಾಗಲಿವೆ' ಎಂದು ಹೇಳಿದ್ದಾರೆ.

ಬಿಎಂಎಸ್‌ನಿಂದ ಶ್ಲಾಘನೆ: ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಅನುಷ್ಠಾನಗೊಳಿಸಿರುವ ಮೋದಿ ನೇತೃತ್ವದ ಸರ್ಕಾರದ ಕ್ರಮವನ್ನು ಆರ್‌ಎಸ್‌ಎಸ್ ಸಂಯೋಜಿತ ಬಿಎಂಎಸ್ ಸ್ವಾಗತಿಸಿದೆ.

'ಭಾರತದ ದುಡಿಯುವ ವರ್ಗದ ಘನತೆಯನ್ನು ಕಾಪಾಡುವ ಹಾಗೂ ಕಲ್ಯಾಣವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಈ ಸಂಹಿತೆಗಳ ಅನುಷ್ಠಾನ ಉತ್ತಮ ಹೆಜ್ಜೆ' ಎಂದು ಸಂಘಟನೆ ಶ್ಲಾಘಿಸಿದೆ.

ನೂತನ ಸಂಹಿತೆಗಳ ವೈಶಿಷ್ಟ್ಯಗಳು

- ಮಹಿಳೆಯರ ಹಕ್ಕುಗಳು ಹಾಗೂ ಸುರಕ್ಷತೆಗೆ ಹೆಚ್ಚು ಪ್ರಾಮುಖ್ಯ. ಅದರಲ್ಲೂ ರಾತ್ರಿ ಪಾಳಿಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರ ಕೇಂದ್ರಿತ ಸುಧಾರಣೆಗಳನ್ನು ಒಳಗೊಂಡಿವೆ
- 40 ವರ್ಷ ಮೇಲ್ಪಟ್ಟ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣೆ ಸೌಲಭ್ಯ
- ಅಪಾಯಕಾರಿ ಸಂಸ್ಕರಣಾ ಘಟಕಗಳಲ್ಲಿ ಕಾರ್ಯನಿರ್ವಹಿಸುವವರೂ ಸೇರಿದಂತೆ ದೇಶದಾದ್ಯಂತ ಎಲ್ಲ ಕಾರ್ಮಿಕರಿಗೆ ಇಎಸ್‌ಐ ಸೌಲಭ್ಯ
- ಉದ್ಯೋಗದಾತ ಸಂಸ್ಥೆಗಳು ಎಲ್ಲ ನೌಕರರಿಗೆ ನೇಮಕಾತಿ ಪತ್ರಗಳನ್ನು ಕೊಡುವುದು ಕಡ್ಡಾಯ
- ಎಲ್ಲ ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕಾನೂನಿನ ಪ್ರಕಾರ ಕನಿಷ್ಠ ವೇತನ ನೀಡಬೇಕು. ಸಕಾಲಿಕ ಪಾವತಿ ಕಡ್ಡಾಯ

> ಕಾರ್ಮಿಕ ಕಾನೂನುಗಳಲ್ಲಿ ತಂದಿರುವ ಈ ಸುಧಾರಣೆಗಳು ಉದ್ಯೋಗ ಸೃಷ್ಟಿಗೆ ಬಲ ತುಂಬಲಿವೆ. ಉತ್ಪಾದಕತೆ ಹೆಚ್ಚಿಸುವ ಮೂಲಕ ವಿಕಸಿತ ಭಾರತದತ್ತ ನಮ್ಮ ಪಯಣಕ್ಕೆ ವೇಗ ನೀಡಲಿವೆ
>
> **ನರೇಂದ್ರ ಮೋದಿ,** ಪ್ರಧಾನಿ

> ಈ ಸಂಹಿತೆಗಳು ಕಾರ್ಮಿಕರ ಬದುಕಿನ ಮೇಲೆ ಮಾಡಿರುವ ದಾಳಿಗಳಿದ್ದಂತೆ. ಇವುಗಳ ಜಾರಿ ಮೂಲಕ ಕಾರ್ಮಿಕರ ಎಲ್ಲ ಹಕ್ಕುಗಳನ್ನು ಕಸಿಯಲಾಗುತ್ತದೆ. ಮುಂದಿನ ಪೀಳಿಗೆಗಳ ಆಸೆ–ಆಕಾಂಕ್ಷೆಗಳು ಕಮರಿಹೋಗುತ್ತವೆ
>
> **ಸೆಂಟ್ರಲ್ ಟ್ರೇಡ್ ಯೂನಿಯನ್‌ಗಳು**

ಚಿಟಿಕೆ ಸುದ್ದಿ

'ಮಹದಾಯಿಗಾಗಿ ಡಿ.1ರಂದು ದೆಹಲಿ ಚಲೋ'

ನರಗುಂದ (ಗದಗ ಜಿಲ್ಲೆ): 'ಮಹದಾಯಿ, ಕಳಸಾ ಬಂಡೂರಿ ನಾಲಾ ಯೋಜನೆಗೆ ಕೇಂದ್ರ ಅನುಮತಿ ನೀಡದಿರುವುದನ್ನು ಖಂಡಿಸಿ ಡಿ.1ರಂದು ದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ' ಎಂದು ರೈತ ಸೇನಾ ರಾಜ್ಯ ಘಟಕದ ಅಧ್ಯಕ್ಷ ವೀರೇಶ ಸೊಬರದಮಠ ಹೇಳಿದರು.

ಮಹದಾಯಿ ಹಾಗೂ ಕಳಸಾ ಬಂಡೂರಿ ನಾಲಾ ಯೋಜನೆ ಜಾರಿಗೆ ಆಗ್ರಹಿಸಿ ಪಟ್ಟಣದಲ್ಲಿ ನಡೆದಿರುವ ಹೋರಾಟದ ವೇದಿಕೆಯಲ್ಲಿ ಅವರು ಶುಕ್ರವಾರ ಮಾತನಾಡಿದರು.

'ಹುಬ್ಬಳ್ಳಿಯಿಂದ ಒಂದೂವರೆ ಸಾವಿರ ಮಂದಿ ರೈಲಿನ ಮೂಲಕ ದೆಹಲಿಗೆ ತೆರಳಿ, ಅಲ್ಲಿನ ವನ್ಯಜೀವಿ ಮಂಡಳಿ ಕಚೇರಿ ಮುಂದೆ ಹೋರಾಟ ನಡೆಸಲಿದ್ದಾರೆ' ಎಂದು ಹೇಳಿದರು.

ರಾಶಿ ಯಂತ್ರಕ್ಕೆ ಸಿಲುಕಿ ರೈತ ಮಹಿಳೆ ಸಾವು

ಕಮಲಾಪುರ (ಕಲಬುರಗಿ ಜಿಲ್ಲೆ): ಹೊಲದಲ್ಲಿ ರಾಶಿ ಮಾಡುವಾಗ ಯಂತ್ರಕ್ಕೆ ಸಿಲುಕಿ ತಾಲ್ಲೂಕಿನ ಮುದ್ದಡಗಾ ಗ್ರಾಮದ ರೈತ ಮಹಿಳೆ ಗಂಗಮ್ಮ ಸುಧಾಕರ ಹಾಗರಗಿ (35) ಶುಕ್ರವಾರ ಮೃತಪಟ್ಟಿದ್ದಾರೆ.

ಗಂಗಮ್ಮ

ಹೊಲದಲ್ಲಿ ಸೋಯಾಬಿನ್ ರಾಶಿ ಮಾಡುತ್ತಿದ್ದರು. ಫಸಲಿನ ಕಟ್ಟು ಹಾಕುವಾಗ ಸೀರೆ ಯಂತ್ರಕ್ಕೆ ಸಿಲುಕಿದೆ. ಯಂತ್ರದ ವೇಗಕ್ಕೆ ತಲೆ, ದೇಹ ಯಂತ್ರಕ್ಕೆ ಸಿಲುಕಿ ದೇಹ ಭಾಗಶಃ ಯಂತ್ರಕ್ಕೆ ಸಿಲುಕಿ ತುಂಡಾಗಿದೆ. ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿಜಯೇಂದ್ರ ಬದಲಿಸದಿದ್ದರೆ ಹೊಸ ಪಕ್ಷ'

ದಾವಣಗೆರೆ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಬದಲಿಸದಿದ್ದರೆ ನಾವು ಹೊಸ ಪಕ್ಷ ಕಟ್ಟುತ್ತೇವೆ. ಬಿಜೆಪಿಯ ನಿಷ್ಠಾವಂತರು ಹೊಸ ಪಕ್ಷಕ್ಕೆ ಬರುತ್ತಾರೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಶುಕ್ರವಾರ ತಿಳಿಸಿದರು.

'ವಿಜಯೇಂದ್ರ ಅಧ್ಯಕ್ಷರಾದ ಬಳಿಕ ಪಕ್ಷ ದುರ್ಬಲವಾಗಿದೆ. ಉಪಚುನಾವಣೆಯಲ್ಲಿ ಸೋತಿದೆ. ಅವರ ಬದಲಾವಣೆಗೆ ನಾಯಕರು ಪಟ್ಟು ಹಿಡಿದಿದ್ದಾರೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ವಿಜಯೇಂದ್ರ ಹಿಂಬಾಲಕರನ್ನು ಮಾತ್ರ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಇಂತಹ ಕಾರ್ಯಗಳು ಪಕ್ಷ ನಿಷ್ಠರಲ್ಲಿ ಬೇಸರ ಮೂಡಿಸಿವೆ' ಎಂದು ಹೇಳಿದರು.

ಜೆಡಿಎಸ್‌ಗೆ ಕುಮಾರಸ್ವಾಮಿಯೇ ಅಧ್ಯಕ್ಷ

ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಅವಿರೋಧವಾಗಿ ಪುನರಾಯ್ಕೆ

ಮುಖ್ಯಾಂಶಗಳು

- ಜೆಡಿಎಸ್ ಬೆಳ್ಳಿಹಬ್ಬ ರಾಷ್ಟ್ರೀಯ ಸಮಾವೇಶ
- ಪಕ್ಷದ ಸಾಧನೆ ಬಿಂಬಿಸುವ ವಸ್ತು ಪ್ರದರ್ಶನಕ್ಕೆ ಚಾಲನೆ
- 2028ರಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಪಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ಎಚ್.ಡಿ.ಕುಮಾರಸ್ವಾಮಿಯೇ ಮುಂದುವರೆಯಬೇಕು ಎಂಬ ಅಭಿಪ್ರಾಯ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ವ್ಯಕ್ತವಾಗಿದ್ದು, ರಾಜ್ಯದ ಮುಂದಿನ ವಿಧಾನಸಭಾ ಚುನಾವಣೆಯನ್ನು ಅವರ ನೇತೃತ್ವದಲ್ಲಿಯೇ ಎದುರಿಸಲಿದೆ.

ಜೆಡಿಎಸ್ ಬೆಳ್ಳಿಹಬ್ಬದ ಅಂಗವಾಗಿ ಶುಕ್ರವಾರ ಇಲ್ಲಿ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆ ನಡೆಯಿತು. ಸಭೆಯ ನಂತರ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, 'ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಅವಿರೋಧವಾಗಿ ಪುನರಾಯ್ಕೆ ಮಾಡಲಾಗಿದೆ' ಎಂದರು.

'ರಾಜ್ಯದಲ್ಲಿ ರೈತರ ಪರವಾಗಿ ಹೋರಾಟ ನಡೆಸಬೇಕು ಎಂಬ ನಿರ್ಣಯವನ್ನೂ ಸಭೆಯಲ್ಲಿ ಕೈಗೊಳ್ಳಲಾಗಿದೆ. ಈ ನಿರ್ಣಯಗಳಿಗೆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಒಪ್ಪಿಗೆ ಪಡೆಯಲಾಗುವುದು' ಎಂದು ತಿಳಿಸಿದರು.

> ಬಹುಮತ ಸಿಗದೇ ಇದ್ದರೂ ದೇವೇಗೌಡ ಮತ್ತು ಕುಮಾರಸ್ವಾಮಿ ಅವರು ಜನರಿಗಾಗಿ ದುಡಿದರು. 2028ರಲ್ಲಿ ಬಹುಮತದೊಂದಿಗೆ ಜೆಡಿಎಸ್ ಸರ್ಕಾರ ರಚಿಸಲಿದೆ
> **ನಿಖಿಲ್ ಕುಮಾರಸ್ವಾಮಿ**
> ಜೆಡಿಎಸ್ ಯುವ ಘಟಕದ ಅಧ್ಯಕ್ಷ

'ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬದಲಾಗುತ್ತಾರೆ ಎಂಬ ಮಾಧ್ಯಮ ವರದಿಗಳ ಬಗ್ಗೆ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಪ್ರಸ್ತಾಪವಾಯಿತು. ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ, ಕುಮಾರಸ್ವಾಮಿ ಅವರೇ ಪಕ್ಷವನ್ನು ಮುನ್ನಡೆಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು' ಎಂದು ಮೂಲಗಳು ತಿಳಿಸಿವೆ.

'ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವ ಕಾರಣಕ್ಕೆ, ಪಕ್ಷ ಸಂಘಟನೆಗೆ ಗಮನ ನೀಡಲು ಆಗುತ್ತಿಲ್ಲ ಎಂದು ಕೆಲವರು ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಕಾರ್ಯಕಾರಿಣಿ ಸಭೆಯಲ್ಲಿ ಈ ಬಗ್ಗೆ ಯಾರೊಬ್ಬರೂ ಮಾತನಾಡಲಿಲ್ಲ. ಬದಲಿಗೆ ಕುಮಾರಸ್ವಾಮಿ ಅವರ ನಾಯಕತ್ವದಲ್ಲಿಯೇ ಪಕ್ಷವು ಬಲವಾಗಲಿದೆ ಎಂದು ಎಲ್ಲರೂ ಹೇಳಿದರು' ಎಂದು ಹೇಳಿವೆ.

'ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ಅದಕ್ಕಾಗಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಅಗತ್ಯವಿದೆ. ಈ ಹೊಣೆಯನ್ನು ನಿಖಿಲ್ ಕುಮಾರಸ್ವಾಮಿ ಅವರು ಹೊರಬೇಕು ಎಂದು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿವೆ.

'ಮತ್ತೆ ಅಧಿಕಾರಕ್ಕೆ ಬರುತ್ತೇವೆ': 'ಕುಮಾರಸ್ವಾಮಿ ನೇತೃತ್ವದಲ್ಲಿ, ರಾಜ್ಯದಲ್ಲಿ ಜೆಡಿಎಸ್ ಮತ್ತೆ ಅಧಿಕಾರಕ್ಕೆ ಬರುತ್ತದೆ' ಎಂದು ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಜೆಡಿಎಸ್ ಬೆಳ್ಳಿಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರು ಕೇಂದ್ರದಲ್ಲಿ ಸಚಿವರಾಗಿದ್ದಾರೆ ಎಂದ ಮಾತ್ರಕ್ಕೆ ರಾಜ್ಯದಲ್ಲಿ ಪಕ್ಷ ದುರ್ಬಲವಾಗಿದೆ ಎಂದಲ್ಲ. ಈಗ ನಮ್ಮ 19 ಶಾಸಕರಷ್ಟೇ ಇರಬಹುದು. ಆದರೆ ಶೇ 20ರಷ್ಟು ಮತಗಳನ್ನು ಪಡೆದಿದ್ದೆವು ಎಂಬುದನ್ನು ಯಾರೂ ಮರೆಯಬಾರದು. ಮುಂದೆ ಹೆಚ್ಚಿನ ಕ್ಷೇತ್ರಗಳಲ್ಲಿ ಗೆದ್ದು ಬರುತ್ತೇವೆ' ಎಂದರು.

'ನಮ್ಮ ಶಾಸಕರನ್ನು ಬೇರೆಡೆಗೆ ಕರೆದೊಯ್ದು ಸರ್ಕಾರ ಬೀಳಿಸಿದವರು ಈಗ ಸರ್ಕಾರದ ಮುಖ್ಯಸ್ಥನ ಸ್ಥಾನದಲ್ಲಿ ಕೂತಿದ್ದಾರೆ. ಸರ್ಕಾರ ಬೀಳಿಸಿದ ಕರ್ಮ ಅವರನ್ನು ಬಿಡುವುದಿಲ್ಲ. ತಾವು ಮಾಡಿದ್ದನ್ನು ಅವರೂ ಅನುಭವಿಸುತ್ತಾರೆ' ಎಂದು ಹೇಳಿದರು.

ಜೆಡಿಎಸ್ ಬೆಳ್ಳಿಹಬ್ಬದ ಅಂಗವಾಗಿ ಪಕ್ಷದ ಕಚೇರಿಯಲ್ಲಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನವನ್ನು ಎಚ್‌ಡಿ.ದೇವೇಗೌಡ ವೀಕ್ಷಿಸಿದರು. ಎಸ್‌ಎಲ್‌ಬೋಜೇಗೌಡ, ಎಚ್‌ಡಿ.ಕುಮಾರಸ್ವಾಮಿ ಉಪಸ್ಥಿತರಿದ್ದರು

'ನೂರು ವರ್ಷ ಬಾಳುತ್ತೇನೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ನನಗೀಗ 78 ವರ್ಷ ತುಂಬಿ, 79ನೇ ವರ್ಷ ನಡೆದಿದೆ. ನಾನಂತೂ ಕನಿಷ್ಠ ನೂರು ವರ್ಷ ಬಾಳುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.

ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಶುಕ್ರವಾರ ವಕೀಲ ರವಿವರ್ಮಕುಮಾರ್ ಅವರಿಗೆ, 'ಡಿ.ದೇವರಾಜ ಅರಸು–ಎಲ್‌.ಜಿ. ಹಾವನೂರು' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ಜನರ ಆಶೀರ್ವಾದ ಇದ್ದಾಗಲಷ್ಟೇ ನಾವು ಅಧಿಕಾರದಲ್ಲಿರಲು ಸಾಧ್ಯ. ಒಟ್ಟು 16 ಚುನಾವಣೆ ಎದುರಿಸಿದ್ದು, ನಾಲ್ಕು ಬಾರಿ ಸೋತಿದ್ದೇನೆ' ಎಂದರು.

'ಹಿಂದೆ ಕಾರಿನ ಮೇಲೆ ಕಾಗೆ ಕುಳಿತಿದ್ದಕ್ಕೆ, ಕೆಲ ಜ್ಯೋತಿಷಿಗಳು ಸಿ.ಎಂ ಸ್ಥಾನ ಹೋಗುತ್ತದೆ ಎಂದಿದ್ದರು. ರವಿವರ್ಮಕುಮಾರ್–ಶಾರದಾ ಅಮಾವಾಸ್ಯೆ ದಿನವೇ ಮದುವೆ ಆದವರು. ನಮ್ಮಲ್ಲಿನ ಮೂಢನಂಬಿಕೆಗಳನ್ನು ಬಿಡಬೇಕು' ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ವಕೀಲ ರವಿವರ್ಮ ಕುಮಾರ್–ಶಾರದಾ ದಂಪತಿಗೆ 'ಡಿ. ದೇವರಾಜ ಅರಸು ಎಲ್‌ಜಿ. ಹಾವನೂರು ಪ್ರಶಸ್ತಿ' ಪ್ರದಾನ ಮಾಡಿದರು. ಸಂಘದ ಅಧ್ಯಕ್ಷ ಶಿವಸ್ವಾಮಿ, ಶಾಸಕರಾದ ಡಾ.ಡಿ.ತಿಮ್ಮಯ್ಯ, ಕೆ.ಹರೀಶ್ ಗೌಡ, ಸಚಿವ ಡಾ. ಎಚ್‌ಸಿ. ಮಹದೇವಪ್ಪ, ಸೋಮ ಇಳಂಗೋವನ್, ಶಾಸಕ ಡಿ.ರವಿಶಂಕರ್, ರವಿ ಬೋಸರಾಜು ಹಾಗೂ ಶಾಸಕ ಕೆ.ಶಿವಕುಮಾರ್ ಜೊತೆಗಿದ್ದರು –ಪ್ರಜಾವಾಣಿ ಚಿತ್ರ

ಅಲ್ಪಸಂಖ್ಯಾತರ ಬಹೂಪಯೋಗಿ ಭವನ ನಿರ್ಮಾಣಕ್ಕೆ ಬಿಜೆಪಿ ವಿರೋಧ

'ತುಷ್ಟೀಕರಣಕ್ಕೆ ಇತಿಮಿತಿ ಬೇಡವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದ ಮುಸ್ಲಿಂ ತುಷ್ಟೀಕರಣಕ್ಕೆ ಇತಿಮಿತಿಯೇ ಇಲ್ಲ. ಈ ಸರ್ಕಾರವು ಹಿಂದೂಗಳನ್ನು ಎರಡನೇ ದರ್ಜೆಯ ಪ್ರಜೆಗಳಂತೆ ನಡೆಸಿಕೊಳ್ಳುತ್ತಿದೆ' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದವರು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆ ನಡೆಸಲು ಬಹೂಪಯೋಗಿ ಭವನ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ₹67 ಕೋಟಿ ಮಂಜೂರು ಮಾಡಿದೆ ಎಂದು 'ಪ್ರಜಾವಾಣಿ'ಯು ಶುಕ್ರವಾರದ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

ಪ್ರಲ್ಹಾದ್ ಜೋಷಿ 'ಎಕ್ಸ್' ಪೋಸ್ಟ್

ಈ ವರದಿಯನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅಶೋಕ, 'ಮುಸ್ಲಿಮರಿಗೆ ತುಷ್ಟೀಕರಣದ ಭಾಗ್ಯ, ಓಲೈಕೆ ಗ್ಯಾರಂಟಿ. ಹಿಂದೂಗಳಿಗೆ ತೆರಿಗೆ, ತೊಂದರೆ ಮತ್ತು ಚೊಂಬು ಗ್ಯಾರಂಟಿ' ಎಂದಿದ್ದಾರೆ.

'ರೈತರಿಗೆ ನೆರೆ ಮತ್ತು ಬರ ಪರಿಹಾರ ನೀಡಲು, ಸರ್ಕಾರಿ ನೌಕರರಿಗೆ ವೇತನ ನೀಡಲು, ಸರ್ಕಾರಿ ಆಸ್ಪತ್ರೆಗಳಿಗೆ ಔಷಧ ಪೂರೈಸಲು, ರಸ್ತೆ ಗುಂಡಿ ಮುಚ್ಚಲು, ಮಕ್ಕಳ ಬಿಸಿಯೂಟಕ್ಕೆ ಸರ್ಕಾರದ ಬಳಿ ಹಣವಿಲ್ಲ. ಆದರೆ ಮುಸ್ಲಿಂ ಭವನಗಳ ನಿರ್ಮಾಣಕ್ಕೆ ₹67 ಕೋಟಿ ನೀಡಿದೆ. ಮುಸ್ಲಿಮರು ಮಾತ್ರವೇ ಇವರಿಗೆ ಮತ ಹಾಕಿದ್ದಾರಾ? ಹಿಂದೂಗಳು ಮತ ಹಾಕಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೂ ವರದಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದು, 'ಜನಕಲ್ಯಾಣ ಮತ್ತು ಬಿಸಿಯೂಟ ಕಾರ್ಯಕ್ರಮಗಳಿಗೆ ಹಣವಿಲ್ಲ ಎನ್ನುವ ಸಿದ್ದರಾಮಯ್ಯ ಅವರು, ಮತಬ್ಯಾಂಕ್ ಗುರಿಯಾಗಿಸಿಕೊಂಡು ಒಂದು ಸಮುದಾಯಕ್ಕೆ ಮಾತ್ರ ಅನುದಾನ ಬಿಡುಗಡೆ ಮಾಡುತ್ತಿರುವುದು ಸಂವಿಧಾನಬಾಹಿರ' ಎಂದಿದ್ದಾರೆ.

'ರಾಜ್ಯದ ಸಮಗ್ರ ಅಭಿವೃದ್ಧಿಗೆ ಮೀಸಲಾಗಿರಬೇಕಾದ ಜನರ ಹಣವನ್ನು, ಒಂದು ಸಮುದಾಯದ ಸಂತೃಪ್ತಿಗೆ ಬಳಸುವುದು ಆಡಳಿತದ ಮೂಲ ತತ್ವಕ್ಕೆ ವಿರುದ್ಧವಾದುದು. ಎಲ್ಲರಿಗೂ ಸಮಾನ ಅವಕಾಶ ಒದಗಿಸುವ ಸಂವಿಧಾನಬದ್ಧ ಹೊಣೆಗಾರಿಕೆಗೆ ವಿರುದ್ಧವಾಗಿ ಕಾಂಗ್ರೆಸ್ ಸರ್ಕಾರ ನಡೆದುಕೊಂಡಿದೆ' ಎಂದು ಆರೋಪಿಸಿದ್ದಾರೆ.

'ಶಾಸಕಾಂಗ ಸಭೆ ನಿರ್ಧರಿಸಬೇಕು'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಕಾಂಗ್ರೆಸ್ ಶಾಸಕರ ದೆಹಲಿ ಭೇಟಿಯನ್ನು ಬಣ ರಾಜಕೀಯ ಎನ್ನಲಾಗದು. ಯಾವುದೇ ನಿರ್ಧಾರ ಶಾಸಕಾಂಗ ಸಭೆ ಹಾಗೂ ಹೈಕಮಾಂಡ್‌ನಲ್ಲಿ ಆಗುತ್ತದೆಯೇ ಹೊರತು ದೆಹಲಿಯಲ್ಲಿ ಅಲ್ಲ' ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ಪ್ರತಿಪಾದಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಾಸಕರು ದೆಹಲಿಗೆ ಏಕೆ ಹೋದರೆಂದು ಅವರು ಎಲ್ಲೂ ಹೇಳಿಲ್ಲ. ನಾನೂ ಹೈಕಮಾಂಡ್ ಭೇಟಿ ಮಾಡಲು ಪ್ರಯತ್ನಿಸಿದ್ದು, ಇದುವರೆಗೂ ಅನುಮತಿ ಸಿಕ್ಕಿಲ್ಲ. ಪಂಚಾಯಿತಿ ಚುನಾವಣೆ ಸೇರಿ ಅನೇಕ ವಿಚಾರ ಚರ್ಚಿಸಬೇಕಿದೆ' ಎಂದರು.

'ಸಿದ್ದರಾಮಯ್ಯ ಅವರು ಮಾತಿಗೆ ತಪ್ಪುವುದಿಲ್ಲ ಎಂಬ ಡಿ.ಕೆ.ಸುರೇಶ್ ಅವರು ಹೇಳಿರುವುದರಲ್ಲಿ ತಪ್ಪಿಲ್ಲ. ಅವರು ಸಿದ್ದರಾಮಯ್ಯನವರ ಆಡಳಿತದ ಬಗ್ಗೆ ಹೇಳಿದ್ದಾರೆ' ಎಂದು ಪ್ರತಿಪಾದಿಸಿದರು.

> ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ಆಪ್ತರೇ ಆಗಿದ್ದಾರೆ. ನಮ್ಮಲ್ಲಿ ಬಣ ರಾಜಕಾರಣವಿಲ್ಲ
> **ರಾಘವೇಂದ್ರ ಹಿಟ್ನಾಳ,** ಕೊಪ್ಪಳ ಕ್ಷೇತ್ರದ ಶಾಸಕ

> **ಮುಂದಿನ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಿಂದ ಪಕ್ಷಕ್ಕೆ ಆಗುವ ಪ್ರಯೋಜನ ಕುರಿತು ಹೈಕಮಾಂಡ್ ಆಲೋಚಿಸಬೇಕು. ಸಿಎಂ ಸ್ಥಾನಕ್ಕೆ ಪರಿಗಣಿಸಬೇಕು.**
> **ಕೆ.ಎಂ.ಉದಯ,** ಮದ್ದೂರು ಶಾಸಕ

> **ಕಾಂಗ್ರೆಸ್ ಪಕ್ಷ ಬೆಳೆಸಿರುವ ಡಿ.ಕೆ.ಶಿವಕುಮಾರ್ ಅವರು ಸಿಎಂ ಸ್ಥಾನ ಬಯಸುವುದು ತಪ್ಪಲ್ಲ. ಪಕ್ಷವನ್ನು ಅಧಿಕಾರಕ್ಕೆ ತರಲು ಸಿದ್ದರಾಮಯ್ಯ ಅವರೊಂದಿಗೆ ಶ್ರಮಿಸಿದ್ದಾರೆ.**
> **ರಮೇಶ ಬಂಡಿಸಿದ್ದೇಗೌಡ,** ಶ್ರೀರಂಗಪಟ್ಟಣ ಶಾಸಕ

> **ಕಾಂಗ್ರೆಸ್ ಪಕ್ಷದಲ್ಲಿ ಯಾವ ಸಂಚಲನವೂ ಆಗುತ್ತಿಲ್ಲ. ಅವೆಲ್ಲವೂ ಮಾಧ್ಯಮಗಳ ಸೃಷ್ಟಿ**
> **ಎನ್.ಎಸ್.ಬೋಸರಾಜು,** ಸಣ್ಣ ನೀರಾವರಿ ಸಚಿವ

ಗುಜ್ಜಾರಪ್ಪ ಸೇರಿ ನಾಲ್ವರಿಗೆ ಪ್ರಶಸ್ತಿ ಘೋಷಣೆ

ಧಾರವಾಡ: ಡಿ.ವಿ.ಹಾಲಭಾವಿ ರಾಷ್ಟ್ರೀಯ ಟ್ರಸ್ಟ್ ನೀಡುವ ಕಲಾತಪಸ್ವಿ ಪ್ರಶಸ್ತಿಗೆ ಚಿತ್ರಕಲಾವಿದ ಬಿ.ಜಿ. ಗುಜ್ಜಾರಪ್ಪ, 'ಕುಂಚ ಕಲಾಶ್ರೀ' ಪ್ರಶಸ್ತಿಗೆ ಕಲಬುರಗಿಯ ಕಲಾವಿದ ಚಂದ್ರಹಾಸ ವೈ.ಜಾಲಿಹಾಳ, ಯುವಕುಂಚ ಕಲಾಶ್ರೀ ಪ್ರಶಸ್ತಿಗೆ ಮುಂಬೈನ ದೀಪಾಲಿ ಸಂದೇಶಖುಲೆ ಎಸ್., ಉತ್ತರಕನ್ನಡ ಜಿಲ್ಲೆಯ ನಾಮದೇವ ಪಟ್ಟೇಕರ ಆಯ್ಕೆಯಾಗಿದ್ದಾರೆ.

ಕಲಾತಪಸ್ವಿ ಪ್ರಶಸ್ತಿ ₹1 ಲಕ್ಷ ನಗದು, ಕುಂಚ ಕಲಾಶ್ರೀ ಪ್ರಶಸ್ತಿ ₹50 ಸಾವಿರ ನಗದು ಹಾಗೂ ಯುವಕುಂಚ ಕಲಾಶ್ರೀ ಪ್ರಶಸ್ತಿ ತಲಾ ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ.

ನಗರದಲ್ಲಿ ನ.29ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬಿ.ಜಿ. ಗುಜ್ಜಾರಪ್ಪ

ನಾಮದೇವ ಪಟ್ಟೇಕರ

ಚಂದ್ರಹಾಸ ವೈ.ಜಾಲಿಹಾಳ

ದೀಪಾಲಿ ಸಂದೇಶಖುಲೆ

ಜೈಲಿನಲ್ಲಿರುವ ಶಾಸಕರ ಭೇಟಿಯಾದ ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಶಾಸಕರಾದ ವಿನಯ್ ಕುಲಕರ್ಣಿ, ವೀರೇಂದ್ರ ಪಪ್ಪಿ ಅವರನ್ನು ಡಿ.ಕೆ.ಶಿವಕುಮಾರ್ ಶುಕ್ರವಾರ ಭೇಟಿ ಮಾಡಿದರು. ವಿಚಾರಣಾಧೀನ ಕೈದಿಗಳಾಗಿ ಪರಪ್ಪನ ಅಗ್ರಹಾರದಲ್ಲಿ ರುವ ಇಬ್ಬರನ್ನೂ ಭೇಟಿ ಮಾಡಿ ಧೈರ್ಯ ತುಂಬಿದರು. ಇಬ್ಬರು ಶಾಸಕರ ಜೊತೆಗೆ ಸ್ವಲ್ಪ ಸಮಯ ಮಾತುಕತೆ ನಡೆಸಿದರು.

ನಾವಲ್ಲ, ಹೈಕಮಾಂಡ್ ತೀರ್ಮಾನಿಸಬೇಕು: ಬೈರತಿ ಸುರೇಶ್

ಕೋಲಾರ: 'ಕೆಲ ಶಾಸಕರು ದೆಹಲಿಗೆ ಹೋಗಿರಬಹುದು. ಪಕ್ಷದ ಯಾವುದೇ ತೀರ್ಮಾನ ಕೈಗೊಳ್ಳುವುದು ಹೈಕಮಾಂಡ್' ಎಂದು ಸಚಿವ ಬೈರತಿ ಸುರೇಶ್ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ, 'ಸಿ.ಎಂ ಆಗಿ ಯಾಗಿ ಯಾರಿರಬೇಕು, ಯಾರನ್ನು ಇಳಿಸಬೇಕು ಎಂದು ನಾನು, ಕೊತ್ತೂರು ಮಂಜುನಾಥ್, ರೂಪಕಲಾ ಹೇಳಲಾಗುತ್ತದೆಯೇ?' ಎಂದರು.

ಸಿದ್ದರಾಮಯ್ಯ ಕಡೆಯವರು ಹೋಟೆಲೊಂದರಲ್ಲಿ 100 ಕೊಠಡಿ ಕಾಯ್ದಿರಿಸಿರುವ ಮಾಹಿತಿ ಇದೆ ಎಂಬ ಪ್ರಶ್ನೆಗೆ, 'ಸಾಕ್ಷಿ ಏನಿದೆ? ನೂರು ಕೊಠಡಿಗಳು ಆ ಹೋಟೆಲ್‌ನಲ್ಲಿ ಇವೆಯೇ? ಎಂದರು.

ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ನಡೆದ ಸಭೆ ಕುರಿತು 'ಪರಮೇಶ್ವರ, ಜಾರಕಿಹೊಳಿ ಹಿರಿಯ ಸಚಿವರು. ದೊಡ್ಡವರು ಆಗಾಗ್ಗೆ ಊಟಕ್ಕೆ ಸೇರುತ್ತಿರುತ್ತಾರೆ' ಎಂದರು.

ಮಗಳನ್ನೇ ಸಾಯಿಸಿ, ಆತ್ಮಹತ್ಯೆ ಎಂದು ಬಿಂಬಿಸಲು ಯತ್ನ, ತಂದೆ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಮೀನಿನ ವಿವಾದಕ್ಕೆ ತಾರ್ಕಿಕ ಅಂತ್ಯ ಹಾಡಲು ತಂದೆಯೇ ಮಗಳನ್ನು ಸಾಯಿಸಿ 'ಎದುರಾಳಿಗಳು ಆತ್ಮಹತ್ಯೆಗೆ ಪ್ರಚೋದಿಸಿದ್ದಾರೆ' ಎಂದು ಬಿಂಬಿಸಲು ಯತ್ನಿಸಿದ ಸಂಗತಿ ಪೊಲೀಸರ ತನಿಖೆಯಲ್ಲಿ ಬಹಿರಂಗಗೊಂಡಿದೆ.

'ಎದುರಾಳಿ ಎದುರಿಸಲು ಹಿಂದೆಯೂ ಯತ್ನ'

'ಘಟನಾ ಸ್ಥಳದಲ್ಲಿ ತನಿಖೆಯ ವೇಳೆ ಬಾಲಕಿಯ ಡೆತ್ ನೋಟ್ (ಮರಣ ಪತ್ರ) ಅಲ್ಲದೆ 2025ರ ಜನವರಿಯಲ್ಲೇ ಮೃತಪಟ್ಟಿದ್ದ ಗುಂಡೇರಾವ್ ತಾಯಿಯ ಡೆತ್ ನೋಟ್ ಕೂಡಾ ಸಿಕ್ಕಿದೆ. ಆಗಲೂ ಎದುರಾಳಿಗಳನ್ನು ಕಾನೂನು ಕ್ರಮಕ್ಕೆ ಗುರಿಪಡಿಸುವ ದುರುದ್ದೇಶದಿಂದ ಗುಂಡೇರಾವ್ ಹೀಗೆ ಮಾಡಿದ್ದ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಹೇಳಿದರು.

ತಾಲ್ಲೂಕಿನ ಕಲ್ಲಹಂಗರಗಾ ಗ್ರಾಮದ ಭಾಗಶಃ ಅಂಗವಿಕಲೆ ಮಂಜುಳಾ ನೀಲೂರ (17) ಶವ ನೇಣುಹಾಕಿದ ಸ್ಥಿತಿಯಲ್ಲಿ ಮನೆಯಲ್ಲೇ ಪತ್ತೆಯಾಗಿತ್ತು. ಶಂಕಾಸ್ಪದ ಸಾವಿನ ತನಿಖೆ ಕೈಗೊಂಡ ಪೊಲೀಸರು, 'ಬಾಲಕಿ ಸಾವಿಗೆ ತಂದೆಯೇ ಕಾರಣ' ಎಂಬುದನ್ನು ಪತ್ತೆ ಮಾಡಿದ್ದಾರೆ.

'ಕೃತ್ಯ ನಡೆದ 24 ಗಂಟೆಗಳಲ್ಲೇ ಪೊಲೀಸರು ಬಂಧಿಸಿದ್ದಾರೆ. ಆರೋಪಿ, ಬಾಲಕಿಯ ತಂದೆ ಗುಂಡೇರಾವ ನೀಲೂರ (42) ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜಮೀನಿಗೆ ದಾರಿಗೆ ಸಂಬಂಧಿಸಿ ಪಕ್ಕದ ಜಮೀನಿನವರ ಜೊತೆ ಗಲಾಟೆ ನಡೆಯುತ್ತಿತ್ತು. ಪಕ್ಕದ ಜಮೀನಿನವರನ್ನು ಜೈಲಿಗೆ ಕಳುಹಿಸಲು ಗುಂಡೇರಾವ ಸಂಚು ರೂಪಿಸಿದ್ದ. 'ಬಾಲಕಿಗೆ ಪ್ರಚೋದಿಸಿ ಆತ್ಮಹತ್ಯೆ ಮಾಡಿಸಿದ ಬಳಿಕ ಸ್ಥಳದಿಂದ ಹೊರ ನಡೆದಿದ್ದ. ಕುಟುಂಬದವರು ಫೋನ್ ಮಾಡಿದಾಗ ಏನೂ ಗೊತ್ತಿಲ್ಲದಂತೆ ಮರಳಿದ್ದ' ಎಂದು ವಿವರಿಸಿದರು.

'ಕೈ' ಬಣ ರಾಜಕೀಯ ಬಿರುಸು

'ಸಿ.ಎಂ ಆಗಿ ನಾನೇ ಮುಂದುವರಿಯುವೆ'

ಒಂದನೇ ಪುಟದಿಂದ...

'ಕೆಲವರು ಹಿಂದೆಯೂ ದೆಹಲಿ ಭೇಟಿಗೆ ಹೋಗಿದ್ದರು. ಈಗಲೂ ಹೋಗಿದ್ದಾರೆ. ಆದರೆ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ತೀರ್ಮಾನ ಮಾಡುವುದು ಹೈಕಮಾಂಡ್. ಅವರು ಎಂದಾದರೂ ಈ ಬಗ್ಗೆ ಮಾತನಾಡಿದ್ದಾರಾ' ಎಂದು ಪ್ರಶ್ನಿಸಿದ ಅವರು 'ಅಂತಿಮವಾಗಿ ಹೈಕಮಾಂಡ್ ಹೇಳಿದ್ದನ್ನು ನಾನು, ಶಿವಕುಮಾರ್ ಎಲ್ಲರೂ ಕೇಳಬೇಕು' ಎಂದರು. 'ರಾಮನಗರ ಶಾಸಕರು ಸಿ.ಎಂ ಬದಲಾವಣೆ ವಿಚಾರದಲ್ಲಿ ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಮಾತನಾಡದಂತೆ ಕಾಂಗ್ರೆಸ್ ಶಾಸಕರಿಗೆ ಹೇಳಬಹುದಿಲ್ಲವೇ' ಎಂಬ ಪ್ರಶ್ನೆಗೆ 'ಅದನ್ನು ಹೈಕಮಾಂಡ್ ಹೇಳುತ್ತದೆ' ಎಂದರು.

'ಐ ವಿಶ್ ಹಿಮ್ ಆಲ್ ದ ಬೆಸ್ಟ್'

ಒಂದನೇ ಪುಟದಿಂದ...

'ಪಕ್ಷದ ಶಾಸಕರು ಸಚಿವರು, ಮುಖ್ಯಮಂತ್ರಿಯಾಗಲು ಅರ್ಹರಿರುತ್ತಾರೆ. ಸಿದ್ದರಾಮಯ್ಯ ತಮ್ಮ ವಿಚಾರಧಾರೆ ಹೇಳಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ಹೈಕಮಾಂಡ್ ನಂಬುತ್ತೇನೆ. ಅಷ್ಟು ಬಿಟ್ಟರೆ ಬೇರೇನೂ ಇಲ್ಲ'. ಯಾವ ಗುಂಪನ್ನೂ ದೆಹಲಿಗೆ ಕರೆದುಕೊಂಡು ಹೋಗುವುದಿಲ್ಲ. ಗುಂಪುಗಾರಿಕೆ ಮಾಡುವುದಿಲ್ಲ. ನನ್ನದು ಎನ್ನುವ ಯಾವ ಬಣವೂ ಇಲ್ಲ. ಅಂತಹ ಬಣ, ಗುಂಪುಗಾರಿಕೆ ರಾಜಕೀಯ ನನ್ನ ರಕ್ತದಲ್ಲೇ ಇಲ್ಲ. ಕಾಂಗ್ರೆಸ್‌ನ ಎಲ್ಲ 140 ಶಾಸಕರೂ ನನ್ನ ಶಾಸಕರೇ. ಎಲ್ಲರೂ ನನಗೆ ಪ್ರಮುಖರು' ಎಂದು ಹೇಳಿದರು.

'ಸಚಿವ ಸಂಪುಟ ಪುನರ್‌ರಚನೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಪುನರ್‌ರಚನೆಯ ಅಧಿಕಾರ ಮುಖ್ಯಮಂತ್ರಿಗೆ ಇರುತ್ತದೆ. ಸಚಿವ ಸ್ಥಾನದ ಆಕಾಂಕ್ಷೆ ಇರುವವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ದಿಲ್ಲಿಗೆ ಹೋಗಿದ್ದಾರೆ. ಭೇಟಿ ಮಾಡುವ ಹಕ್ಕು ಎಲ್ಲರಿಗೂ ಇದೆ. ನಾನು ಯಾರನ್ನೂ ಕರೆದುಕೊಂಡು ಹೋಗಿಲ್ಲ. ಕೆಲವರು ಮುಖ್ಯಮಂತ್ರಿ ಜತೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದರೆ, ಮತ್ತೆ ಕೆಲವರು ತಾವಾಗಿಯೇ ಹೋಗಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಸತೀಶ ಜಾರಕಿಹೊಳಿ ಅವರು ಔತಣಕೂಟ ಆಯೋಜನೆ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ನನಗೆ ಔತಣಕೂಟಗಳ ಬಗ್ಗೆ ಗೊತ್ತಿಲ್ಲ. ನಾಲ್ವರು, ಐವರು ಉಪಮುಖ್ಯಮಂತ್ರಿ ಮಾಡಬೇಕು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕು ಎಂದು ಎರಡೂವರೆ ವರ್ಷಗಳಿಂದ ಸಭೆಗಳನ್ನು ಮಾಡುತ್ತಲೇ ಇದ್ದಾರೆ. ಇನ್ನೂ ಹೆಚ್ಚಿನ ಸಭೆಗಳನ್ನು ಮಾಡಲಿ' ಎಂದರು.

ಡಿಕೆಶಿ ಬಣ; ದೆಹಲಿ 'ರಾಜಕಾರಣ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರಕ್ಕೆ ಎರಡೂವರೆ ವರ್ಷ ತುಂಬುತ್ತಿದ್ದಂತೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತರ ಬಣ ತನ್ನ ಚಟುವಟಿಕೆಯನ್ನು ಚುರುಕುಗೊಳಿಸಿದೆ.

ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರು ಹಾಗೂ ಹಲವು ಶಾಸಕರು ರಾಷ್ಟ್ರ ರಾಜಧಾನಿಯಲ್ಲಿ ಕಳೆದೆರಡು ದಿನಗಳಿಂದ ಮೊಕ್ಕಾಂ ಹೂಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರ ನಾಯಕರನ್ನು ಭೇಟಿ ಮಾಡಿದ್ದಾರೆ.

ಶಿವಕುಮಾರ್ ನಿಷ್ಠರಾಗಿರುವ ಆರು ಶಾಸಕರ ಗುಂಪು ಕಾಂಗ್ರೆಸ್ ಎಐಸಿಸಿ ಅಧ್ಯಕ್ಷರನ್ನು ಗುರುವಾರ ರಾತ್ರಿ ಭೇಟಿ ಮಾಡಿತು. ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಧ್ಯಾಹ್ನ ಭೇಟಿ ಮಾಡಿ ಸಮಾಲೋಚಿಸಿದರು. ಶಿವಕುಮಾರ್ ಅವರನ್ನು ಸಿ.ಎಂ ಮಾಡಬೇಕು ಎಂದು ಕೆಲ ಶಾಸಕರು ಒತ್ತಾಯಿಸಿದರೆ, ಸಂಪುಟ ಪುನರ್ರಚನೆ ಸಂದರ್ಭದಲ್ಲಿ ತಮ್ಮನ್ನು ಪರಿಗಣಿಸುವಂತೆ ಇನ್ನೂ ಕೆಲವು ಶಾಸಕರು ಮನವಿ ಮಾಡಿದರು.

'ಈ ನಡುವೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹಾಗೂ ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಕರೆ ಮಾಡಿ ಶಾಸಕರ ದೆಹಲಿ ಪ್ರವಾಸಕ್ಕೆ ಕಡಿವಾಣ ಹಾಕಲು ಮನವಿ ಮಾಡಿದರು. ಇದರಿಂದ ಸರ್ಕಾರದ ವರ್ಚಸ್ಸಿಗೆ ಹಾನಿ ಆಗುತ್ತದೆ ಎಂಬುದಾಗಿ ಎಚ್ಚರಿಸಿದರು' ಎಂದು ಮೂಲಗಳು ತಿಳಿಸಿವೆ.

'ಪಕ್ಷದ ನಾಯಕರನ್ನು ಭೇಟಿಯಾಗಿ ಚಿಕ್ಕಮಗಳೂರು ಜಿಲ್ಲೆಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲು ವಿನಂತಿಸಿದೆ. ನಾಯಕತ್ವ ಬದಲಾವಣೆ ಮನವಿ ಮಾಡಿಲ್ಲ. ಅದು ಹೈಕಮಾಂಡ್‌ಗೆ ಬಿಟ್ಟದ್ದು' ಎಂದು ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಸುದ್ದಿಗಾರರಿಗೆ ತಿಳಿಸಿದರು.

ಇನ್ಫೋಸಿಸ್ ಫೌಂಡೇಷನ್ ಆರೋಹಣ ಪ್ರಶಸ್ತಿ ಪ್ರದಾನ ಸಮಾರಂಭ: ಸುಧಾಮೂರ್ತಿ ಅಭಿಮತ

'ಸಮಾಜಪರ ಕೆಲಸಗಾರರಿಗೆ ಬೆಂಬಲ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿನ ಸಾಮಾಜಿಕ ಸಮಸ್ಯೆಗಳಿಗೆ ನಾವೀನ್ಯತೆ ಮೂಲಕ ಸಾಮೂಹಿಕ ಪರಿಹಾರ ನೀಡುವುದು ಕಷ್ಟವಾದರೂ ಸರ್ಕಾರ ಹಾಗೂ ಸಮುದಾಯದ ಬೆಂಬಲ ದೊರೆತರೆ ಹೆಚ್ಚು ಜನರಿಗೆ ಅದರ ಫಲ ಸಿಗಲಿದೆ' ಎಂದು ಇನ್ಫೋಸಿಸ್ ಫೌಂಡೇಷನ್‌ನ ಸಂಸ್ಥಾಪಕಿ ಸುಧಾಮೂರ್ತಿ ಅವರು ಹೇಳಿದರು.

ನಗರದಲ್ಲಿ ನಡೆದ 2025ನೇ ಸಾಲಿನ ಇನ್ಫೋಸಿಸ್ ಆರೋಹಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಬದಲಾವಣೆ ಎನ್ನುವುದು ಸುಲಭವಲ್ಲ. ಆದರೆ, ಮನಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎನ್ನುವುದನ್ನು ನಾವಿನ್ಯತೆ ಮೂಲಕ ಹೊಸತನ ತೋರಿರುವ ಸಾಧಕರೇ ಸಾಕ್ಷಿ' ಎಂದು ತಿಳಿಸಿದರು.

'ಏಳು ವರ್ಷದ ಹಿಂದೆ ಇನ್ಫೋಸಿಸ್ ಫೌಂಡೇಷನ್ ಆರಂಭಿಸಿದ ಆರೋಹಣ ಪ್ರಶಸ್ತಿಯಿಂದ ಹಲವು ಪ್ರತಿಭೆಗಳ ಪರಿಚಯವಾಗಿದೆ. ಇದನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುವ ಯೋಚನೆಯಿದೆ. ಸಾಧಕರು ಇಂತಹ ಪ್ರಯತ್ನಕ್ಕೆ ಬೆಂಬಲವಾಗಿ ನಿಲ್ಲಬೇಕು' ಎಂದು ಹೇಳಿದರು.

ಅಂಧತ್ವವನ್ನು ಮೆಟ್ಟಿ ನಿಂತ 14 ವರ್ಷದ ಪ್ರಥಮೇಶ್ ಸಿನ್ಹಾ ಅವರು ಮಾತನಾಡಿ, ಅಂಧತ್ವ ಎನ್ನುವುದು ಸಮಸ್ಯೆಯಲ್ಲ. ಅದನ್ನು ಒಪ್ಪಿಕೊಂಡು ನಿರಂತರ ಕಲಿಕೆ ಮೂಲಕವೇ ಆತ್ಮವಿಶ್ವಾಸ ವೃದ್ದಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಇನ್ಫೋಸಿಸ್ ಆರೋಹಣ ಪ್ರಶಸ್ತಿಯನ್ನು ನಗರದಲ್ಲಿ ಶುಕ್ರವಾರ ಪ್ರದಾನ ಮಾಡಲಾಯಿತು.

ವಿಭಿನ್ನ ನಾವೀನ್ಯತೆಗೆ ಎಂಟು ಪ್ರಶಸ್ತಿ

ಸರ್ಕಾರಿ ಶಾಲೆಗಳಲ್ಲಿ ಕನೆಕ್ಟಿಂಗ್ ದಿ ಡಾಟ್ಸ್ ಮೂಲಕ ಶಿಕ್ಷಣ ನೀಡುತ್ತಿರುವ ಬೆಂಗಳೂರಿನ ರಾಜೇಶ್ ಎ. ರಾವ್, ರವೀಂದ್ರ ಎಸ್. ರಾವ್ ಮತ್ತು ದೀಪಾ ಎಲ್.ಬಿ. ರಾಜೀವ್(ಶಿಕ್ಷಣ), 'ಕ್ಲುಯಿಕ್ಸ್ ಸಿ012' ಎಂಬ ಎಐ ಆಧಾರಿತ ನೀರಿನ ಗುಣಮಟ್ಟ ಪರಿಶೀಲನಾ ಸಾಧನ ರೂಪಿಸಿದ ನವದೆಹಲಿಯ ಚಿತ್ತರಂಜನ್ ಸಿಂಗ್ ಮತ್ತು ರಾಬಿನ್ ಸಿಂಗ್(ಆರೋಗ್ಯ ಸೇವೆ) ಹಾಗೂ ರೋಬೋಟಿಕ್ ತಂತ್ರಜ್ಞಾನದ ಆಧಾರದಲ್ಲಿ ಕೊಳವೆಬಾವಿ ಮರುಪೂರಣ ಮಾಡುವ 'ಬೋರ್‌ಚಾರ್ಜರ್' ರೂಪಿಸಿರುವ ಪುಣೆಯ ರಾಹುಲ್ ಸುರೇಶ್ ಬಾಕರೆ ಮತ್ತು ವಿನೀತ್ ಮೋರೇಶ್ವರ ಫಡ್ನಿಸ್(ಪರಿಸರ ಸುಸ್ಥಿರತೆ) ಅವರು ₹50 ಲಕ್ಷ ಮೊತ್ತದ ಪ್ರಶಸ್ತಿ ಪಡೆದರು.

ಬೆಂಗಳೂರಿನ ನಾಗರಾಜನ್ ರಾಜಗೋಪಾಲ್, ವಿದ್ಯಾ ವೈ ಮತ್ತು ಸುಪ್ರಿಯಾ ಡೇ (ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಸಮಗ್ರವಾದ ಕಲಿಕಾ ವ್ಯವಸ್ಥೆ), ಅಂಧರಾದ ಪುಣೆಯ ಸೌಮ್ಯಾ ಎಸ್. ಮತ್ತು ಪಲ್ಲವಿ ಕುಲಕರ್ಣಿ (ತಂತ್ರಜ್ಞಾನ ಆಧರಿತ ಪ್ರಾಜೆಕ್ಟ್ ಬಿಂದು–ಶಿಕ್ಷಣ), ಪುಣೆಯ ಫಲ್ಗುಣ ಮುಕೇಶ್ ವ್ಯಾಸ್ (ಸುಕೂನ್ ಎನ್ನುವ ಡಿಜಿಟಲ್ ಹೈಬ್ರಿಡ್-ಐಡಿಇಸಿ ವ್ಯವಸ್ಥೆ), ವಡೋದರಾದ ಅನಿರ್ಬಾನ್ ಪಲಿತ್ ಮತ್ತು ಡಾ. ಸಾಯಂತಾನಿ ಪ್ರಮಾಣಿಕ್ ಮತ್ತು ಪಲ್ಲಾ ಪಟೇಲ್ (ಔಷಧ ಗುಣಮಟ್ಟ ನಿಯಂತ್ರಣ ಉಪಕರಣ–ಆರೋಗ್ಯ), ಪುಣೆಯ ನೇಹಾ ಪಂಚಮಿಯಾ ಮತ್ತು ನಚಿಕೇತ್ ಉತ್ಪತ್ (ವನ್ಯಜೀವಿಗಳ ಒನ್ ಹೆಲ್ತ್' ಹೆಸರಿನ ಆ್ಯಪ್–ಪರಿಸರ ಸುಸ್ಥಿರತೆ) ಅವರಿಗೆ ತಲಾ ₹10 ಲಕ್ಷ ಮೊತ್ತದ ಪ್ರಶಸ್ತಿ ನೀಡಲಾಯಿತು.

11ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಮರಿಲಿಂಗಯ್ಯ
ಜನನ: 08-02-1942 ಮರಣ: 22-11-2014
ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 26,192
ಇಂದಿನ ಅಂತ್ಯ: 26,068
ದಿನದ ಕನಿಷ್ಠ: 26,052
124

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹675
12 ಕ್ಕೆ ₹96
ಮೈಸೂರು: 100 ಕ್ಕೆ ₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹182
ಆರ್‌ಎಸ್‌ಎಸ್-5 ₹177
ಗುಡ್ ಲಾಟ್ ₹164

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹558-755
ದ್ವಿತಳಿ (ಬಿ.ವಿ) ₹708-905

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹29000
ಎಸಿ ₹15540
ಆರ್‌ಪಿ ₹19100
ಆರ್‌ಸಿ ₹10825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1515 (1515)
ಸೋಯಾ (ರಿಫೈನ್ಡ್) ₹1280 (1275)
ಸೂರ್ಯಕಾಂತಿ (ರಿಫೈನ್ಡ್) ₹1480 (1480)
ಪಾಮೋಲಿನ್ ₹1255 (1255)

ಅಡಿಕೆ ಧಾರಣೆ

ಚಿತ್ರದುರ್ಗ		ಗೊರಬಲು	19000-41699		
ಆಪಿ	40600-41000	ಹೊಸತು	50009-59289	ಬಿಳಿಗೋಟು	25555-46099
ಕೆಂಪುಗೋಟು	34100-34500	ರಾಶಿ	43669-59299	ಚಾಲಿ	44608-49650
ಕುಮಟಾ		ಸರಕು	58469-94630	ಕೆಂಪುಗೋಟು	23300-36123
ಚಾಲಿ	44019-48599	**ಸಿದ್ದಾಪುರ**		ರಾಶಿ	54759-60599
ಚಿಪ್ಪು	27029-36999	ಬಿಳಿಗೋಟು	26109-36589	**ಯಲ್ಲಾಪುರ**	
ಕೋಕ	12090-30189	ಚಾಲಿ	41699-48299	ಆಪಿ	72421-78999
ಫ್ಯಾಕ್ಟರಿ	5979-23629	ಕೋಕ	21899-32899	ಬಿಳಿಗೋಟು	16891-37899
ಹೊಸಚಾಲಿ	33089-36999	ಕೆಂಪುಗೋಟು	24219-31399	ಚಾಲಿ	39689-49133
ಪುತ್ತೂರು		ರಾಶಿ	45699-58399	ಕೋಕ	12610-31201
ಕೋಕ	20000-34500	ತಟ್ಟಿಬೆಟ್ಟೆ	33099-56699	ಕೆಂಪುಗೋಟು	16899-36099
ಹೊಸತು	26000-40000	**ಶಿರಸಿ**		ರಾಶಿ	50469-66009
ಶಿವಮೊಗ್ಗ		ಬೆಟ್ಟೆ	40899-57899	ತಟ್ಟಿಬೆಟ್ಟೆ	36619-50269
ಬೆಟ್ಟೆ	53399-70619				

ಮುಂಬೈ ಧಾರಣೆ (ಶೇಂಗಾ)

21-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಪಾಮ್ ವಾರದ ಡೆಲಿವರಿ	1253 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,400 (1,22,700)
ಬೆಳ್ಳಿ ಕೆ.ಜಿಗೆ	1,53,000 (1,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹27000-27000
ಪುತ್ತೂರು ₹6000-24500

ಚಿನ್ನದ ದರ ₹600, ಬೆಳ್ಳಿ ₹2 ಸಾವಿರ ಇಳಿಕೆ

ನವದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿದಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ಬೆಲೆಯು ₹600 ಇಳಿಕೆಯಾಗಿ, ₹1,26,100ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹1,25,500 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹2 ಸಾವಿರ ಕುಸಿದು, ₹1.56 ಲಕ್ಷವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ. ಇದರಿಂದ ದೇಶದ ಮಾರುಕಟ್ಟೆಯಲ್ಲೂ ಬೆಲೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ರೂಪಾಯಿ: 98 ಪೈಸೆ ಕುಸಿತ

ಭಾರತ–ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದದ ಅನಿಶ್ಚಿತತೆಯೇ ಇಳಿಕೆಗೆ ಕಾರಣ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ವಿನಿಮಯ ಮೌಲ್ಯವು 98 ಪೈಸೆ ಕುಸಿದಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ.

ವಹಿವಾಟಿನ ಅಂತ್ಯದ ವೇಳೆಗೆ ಡಾಲರ್ ಎದುರು ರೂಪಾಯಿ ಮೌಲ್ಯವು ₹89.66ಕ್ಕೆ ಇಳಿದಿದೆ.

ಭಾರತ ಮತ್ತು ಅಮೆರಿಕದ ನಡುವಿನ ಪ್ರಸ್ತಾವಿತ ವ್ಯಾಪಾರ ಒಪ್ಪಂದದ ಬಗ್ಗೆ ಸ್ಪಷ್ಟತೆಯಿಲ್ಲ. ಇದರಿಂದ ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಇದು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಶುಕ್ರವಾರ ಬೆಳಿಗ್ಗೆ ರೂಪಾಯಿ ವಿನಿಮಯ ಮೌಲ್ಯ ಡಾಲರ್ ಎದುರು ₹88.67 ಇತ್ತು. ವಹಿವಾಟಿನ ಮುಕ್ತಾಯದ ವೇಳೆಗೆ ₹89.66 ಆಗಿತ್ತು.

ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 20 ಪೈಸೆ ಇಳಿಕೆ ಕಂಡು, ₹88.68 ಆಗಿತ್ತು.

ಮೂರು ವರ್ಷದ ಕನಿಷ್ಠ: 2022ರ ಫೆಬ್ರುವರಿ 24ರಂದು ರೂಪಾಯಿ ಮೌಲ್ಯ 99 ಪೈಸೆ ಕುಸಿದಿತ್ತು. ಇದು ಇದುವರೆಗಿನ ಒಂದೇ ದಿನ ಕಂಡಿದ್ದ ಹೆಚ್ಚು ಇಳಿಕೆ ಆಗಿತ್ತು.

'ಕ್ರಿಪ್ಟೊ ಕರೆನ್ಸಿಗಳು ಮತ್ತು ಕೃತಕ ಬುದ್ಧಿಮತ್ತೆ ಸಂಬಂಧಿತ ತಂತ್ರಜ್ಞಾನ ಕಂಪನಿಗಳ ಷೇರುಗಳ ಮಾರಾಟವು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಪ್ರಸ್ತಾವಿತ ಭಾರತ ಮತ್ತು ಅಮೆರಿಕದ ವ್ಯಾಪಾರ ಒಪ್ಪಂದದ ಸುತ್ತಲಿನ ದೀರ್ಘಕಾಲದ ಅನಿಶ್ಚಿತತೆಯು ಒತ್ತಡವನ್ನು ಹೆಚ್ಚಿಸಿದೆ. ಈ ವಿದ್ಯಮಾನಗಳು ಕರೆನ್ಸಿ ವಿನಿಮಯ ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ. ಹೀಗಾಗಿ ರೂಪಾಯಿ ಮೌಲ್ಯ ಕುಸಿದಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಂಶೋಧನಾ ವಿಭಾಗದ (ಕರೆನ್ಸಿ, ಸರಕು ಮತ್ತು ಬಡ್ಡಿದರ) ಮುಖ್ಯಸ್ಥ ಅನಿಂದ್ಯಾ ಬ್ಯಾನರ್ಜಿ ಹೇಳಿದ್ದಾರೆ.

ಆರ್‌ಬಿಐ ಗವರ್ನರ್ ಹೇಳಿದ್ದೇನು?: 'ರೂಪಾಯಿ ಮೌಲ್ಯವನ್ನು ಇಂತಿಷ್ಟೇ ಮಟ್ಟದಲ್ಲಿ ಇರಿಸಬೇಕು ಎಂಬ ಗುರಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೊಂದಿಲ್ಲ. ವ್ಯಾಪಾರ ನಿಯಮಗಳು ಮತ್ತು ಅಮೆರಿಕದ ಹೆಚ್ಚುವರಿ ಸುಂಕವು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ' ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುರುವಾರ ಹೇಳಿದ್ದರು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್‌ಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ರೂಪಾಯಿ ಮೌಲ್ಯ ಡಾಲರ್ ಎದುರು ಇಳಿದಿದೆ. ರೂಪಾಯಿಗೆ ಬೇಡಿಕೆ ಹೆಚ್ಚಳವಾದರೆ, ಡಾಲರ್ ಮೌಲ್ಯ ಇಳಿದು ರೂಪಾಯಿ ಮೌಲ್ಯ ಏರಿಕೆಯಾಗಲಿದೆ ಎಂದು ಹೇಳಿದ್ದರು.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ನವೆಂಬರ್ 14ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣವು ₹49,228 ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ಶುಕ್ರವಾರ ತಿಳಿಸಿದೆ. ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹61.50 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹1,349 ಕೋಟಿಯಷ್ಟು ಹೆಚ್ಚಳವಾಗಿದ್ದು, ₹49.93 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹47,309 ಕೋಟಿ ಏರಿಕೆಯಾಗಿದ್ದು, ₹9.49 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.65 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,442 ಕೋಟಿಯಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 400 ಅಂಶ ಇಳಿಕೆ

ಮುಂಬೈ (ಪಿಟಿಐ): ಲಾಭ ಗಳಿಕೆಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಅಮೆರಿಕದ ಫೆಡರಲ್ ರಿಸರ್ವ್, ಡಿಸೆಂಬರ್‌ನಲ್ಲಿ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಕಡಿಮೆ ಆಗಿದೆ. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಆಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 400 ಅಂಶ ಇಳಿಕೆಯಾಗಿ, 85,231ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 124 ಅಂಶ ಕಡಿಮೆಯಾಗಿ, 26,068ಕ್ಕೆ ಕೊನೆಗೊಂಡಿದೆ.

ಟಾಟಾ ಸ್ಟೀಲ್, ಎಚ್‌ಸಿಎಲ್ ಟೆಕ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಎಟರ್ನಲ್ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ. ಮಾರುತಿ ಸುಜುಕಿ ಇಂಡಿಯಾ, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಮತ್ತು ಐಟಿಸಿ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.



ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಶಾಂಘೈ, ಜಪಾನ್ ಮತ್ತು ಹಾಂಗ್‌ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.51ರಷ್ಟು ಇಳಿಕೆ ಆಗಿದೆ. ಪ್ರತೀ ಬ್ಯಾರಲ್ ದರವು 62.42 ಡಾಲರ್ ಆಗಿದೆ.

ಅರ್ಬನ್ ಕ್ರೂಸ್ ಹೈರೈಡರ್: ಕಾಂಬಿನೇಷನ್ ಮೀಟರ್ ಬದಲಾವಣೆ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಟೊಯೊಟ ಕಿರ್ಲೋಸ್ಕರ್ ಮೋಟರ್, ತನ್ನ ಮಧ್ಯಮ ಗಾತ್ರದ ಎಸ್‌ಯುವಿ ಅರ್ಬನ್ ಕ್ರೂಸ್ ಹೈರೈಡರ್ ಮಾದರಿಯ 11,529 ವಾಹನಗಳಲ್ಲಿ ದೋಷಪೂರಿತ ಕಾಂಬಿನೇಷನ್ ಮೀಟರ್ ಬದಲಾವಣೆಗೆ ಮುಂದಾಗಿದೆ.

2024ರ ಡಿಸೆಂಬರ್ 9ರಿಂದ 2025ರ ಏಪ್ರಿಲ್ 29ರವರೆಗೆ ತಯಾರಾದ ಇಷ್ಟು ಸಂಖ್ಯೆಯ ವಾಹನಗಳನ್ನು ಹಿಂದಕ್ಕೆ ಪಡೆದು, ಪರಿಶೀಲಿಸಲಾಗುತ್ತದೆ ಎಂದು ಕಂಪನಿಯು ಶುಕ್ರವಾರ ತಿಳಿಸಿದೆ.

ಈ ವಾಹನಗಳ ಪೈಕಿ ಕೆಲವು ವಾಹನಗಳಲ್ಲಿ ಸ್ಪೀಡೋ ಮೀಟರ್ ಒಳಗೊಂಡ ಕಾಂಬಿನೇಷನ್ ಮೀಟರ್ ಸರಿಯಾಗಿ ಕಾರ್ಯನಿರ್ವಹಿಸದಿರುವ ಕುರಿತು ಕಂಪನಿ ಸಂದೇಹ ವ್ಯಕ್ತಪಡಿಸಿದೆ. ಮೀಟರ್ ದೋಷಪೂರಿತ ಎಂದು ಕಂಡು ಬಂದಲ್ಲಿ ಬದಲಾಯಿಸಿ ಕೊಡಲಾಗುವುದು. ಸಂಬಂಧಪಟ್ಟ ವಾಹನ ಮಾಲೀಕರಿಗೆ ಟೊಯೊಟ ಡೀಲರ್‌ಗಳಿಂದ ಸಂದೇಶ ಬರಲಿದೆ ಎಂದು ತಿಳಿಸಿದೆ.

ಭಾರತದ ಕಂಪನಿಗಳು, ವ್ಯಕ್ತಿಗಳ ಮೇಲೆ ಅಮೆರಿಕ ನಿರ್ಬಂಧ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಇರಾನ್‌ನ ಪೆಟ್ರೋಲಿಯಂ ಹಾಗೂ ಅದರ ಉತ್ಪನ್ನಗಳ ಮಾರಾಟದಲ್ಲಿ ತೊಡಗಿರುವ ಭಾರತದ ಕಂಪನಿಗಳು ಹಾಗೂ ವ್ಯಕ್ತಿಗಳ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರ್ಕಾರವು ನಿರ್ಬಂಧ ಹೇರಿದೆ.

ಭಾರತೀಯ ಪ್ರಜೆಗಳಾದ ಝೈರ್ ಹುಸೇನ್ ಇಕ್ಬಾಲ್ ಹುಸೇನ್ ಸಯೇದ್, ಝುಲ್ಫಿಕರ್ ಹುಸೇನ್ ರಿಜ್ವಿ ಸಯೇದ್, ಕಂಪನಿಗಳಾದ ಮಹಾರಾಷ್ಟ್ರ ಮೂಲದ ಆರ್‌ಎನ್ ಶಿಪ್ ಮ್ಯಾನೇಜ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಹಾಗೂ ಪುಣೆ ಮೂಲದ ಟಿಆರ್6 ಪೆಟ್ರೊ ಇಂಡಿಯಾ ಎಲ್‌ಎಲ್‌ಪಿ ಮೇಲೆ ನಿರ್ಬಂಧ ಹೇರಲಾಗಿದೆ.

'ಈ ಮಾರಾಟ ಪ್ರಕ್ರಿಯೆಯಿಂದ ಗಳಿಸುವ ಹಣವು, ಇರಾನ್ ಪರ ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ಗುಂಪುಗಳಿಗೆ ಹಾಗೂ ಅವುಗಳು ಶಸ್ತ್ರಾಸ್ತ್ರಗಳನ್ನು ಖರೀದಿಸಲು ಬಳಕೆಯಾಗುತ್ತಿದೆ. ಇವು ಅಮೆರಿಕಕ್ಕೆ ಒಡ್ಡಲಾಗುತ್ತಿರುವ ನೇರ ಬೆದರಿಕೆಗಳಾಗಿವೆ' ಎಂದು ಅಮೆರಿಕ ಹೇಳಿದೆ.

'ಅಕ್ರಮವಾಗಿ ತೈಲ ಮಾರಾಟದಿಂದ ಸಿಗುವ ಹಣವನ್ನು ಕೆಲ ನೌಕಾಸಂಸ್ಥೆಗಳು ಇರಾನ್ ಸರ್ಕಾರ ನಡೆಸುತ್ತಿರುವ ಆಕ್ರಮಣಕಾರಿ ಚಟುವಟಿಕೆಗಳಿಗೆ ನೀಡುತ್ತಿವೆ. ಕೆಲ ವಿಮಾನಯಾನ ಸಂಸ್ಥೆಗಳು ಇರಾನ್ ಬೆಂಬಲಿತ ಭಯೋತ್ಪಾದಕ ಗುಂಪುಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಿವೆ. ಇಂತಹ ಸಂಸ್ಥೆಗಳ ಮೇಲೆ ನಿರ್ಬಂಧ ಹೇರಲಾಗಿದೆ' ಎಂದು ಅಮೆರಿಕದ ವಿದೇಶಾಂಗ ಮತ್ತು ಖಜಾನೆ ಇಲಾಖೆಗಳು ಹೇಳಿವೆ.

35 ಕೋಟಿ ಟನ್ ಧಾನ್ಯ ಉತ್ಪಾದನೆ

ಸರ್ಕಾರದ ವಿವಿಧ ಯೋಜನೆಗಳಿಂದ ಆಹಾರ ಧಾನ್ಯ ಉತ್ಪಾದನೆಯಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ಜೂನ್ ಅಂತ್ಯಕ್ಕೆ ಕೊನೆಗೊಂಡ 2024–25ನೇ ಸಾಲಿನ ಬೆಳೆ ವರ್ಷದಲ್ಲಿ ದೇಶದಲ್ಲಿ 35.77 ಕೋಟಿ ಟನ್‌ನಷ್ಟು ಆಹಾರ ಧಾನ್ಯಗಳ ಉತ್ಪಾದನೆ ಆಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2023–24ನೇ ಸಾಲಿನ ಬೆಳೆ ವರ್ಷದಲ್ಲಿ (ಜುಲೈನಿಂದ ಜೂನ್) 33.22 ಕೋಟಿ ಟನ್‌ನಷ್ಟು ಧಾನ್ಯ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 8ರಷ್ಟು ಏರಿಕೆ ಆಗಿದೆ ಎಂದು ತಿಳಿಸಿದೆ.

'ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ), ಸರ್ಕಾರದಿಂದಲೇ ಖರೀದಿ ಸೇರಿದಂತೆ ರೈತರ ಪರಿಶ್ರಮ ಹಾಗೂ ಸರ್ಕಾರದ ಯೋಜನೆಗಳಿಂದ ಈ ಬಾರಿ ದಾಖಲೆಯ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಆಗಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

2023–24ನೇ ಬೆಳೆ ವರ್ಷದಲ್ಲಿ 11.32 ಕೋಟಿ ಟನ್‌ನಷ್ಟು ಗೋಧಿ ಉತ್ಪಾದನೆ ಆಗಿತ್ತು. ಈ ಬಾರಿ 11.79 ಕೋಟಿ ಟನ್‌ನಷ್ಟು ಉತ್ಪಾದನೆ ಆಗಿದ್ದು, ಉತ್ಪಾದನೆಯಲ್ಲಿ ಏರಿಕೆ ಕಂಡಿದೆ.

> **2015–16ರಿಂದ 2024–25ರ ಅವಧಿಯಲ್ಲಿ ದೇಶದ ಆಹಾರ ಧಾನ್ಯ ಉತ್ಪಾದನೆಯು 25.15 ಕೋಟಿ ಟನ್‌ನಿಂದ 35.77 ಕೋಟಿ ಟನ್‌ಗೆ ಹೆಚ್ಚಳವಾಗಿದೆ**
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಕೃಷಿ ಸಚಿವ

ಭತ್ತ ಉತ್ಪಾದನೆಯು 15 ಕೋಟಿ ಟನ್‌ನಷ್ಟಾಗಿದೆ. ಏಕದಳ ಧಾನ್ಯಗಳ ಉತ್ಪಾದನೆ 6.39 ಕೋಟಿ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ 2.56 ಕೋಟಿ ಟನ್‌ಗೆ ಹೆಚ್ಚಳವಾಗಿದೆ. 2023–24ರ ಬೆಳೆ ವರ್ಷದಲ್ಲಿ ಇದು ಕ್ರಮವಾಗಿ, 13.78 ಕೋಟಿ ಟನ್, 5.69 ಕೋಟಿ ಟನ್ ಮತ್ತು 2.42 ಕೋಟಿ ಟನ್‌ನಷ್ಟಾಗಿತ್ತು ಎಂದು ತಿಳಿಸಿದೆ.

ಎಣ್ಣೆ ಕಾಳುಗಳ ಉತ್ಪಾದನೆ 3.96 ಕೋಟಿ ಟನ್‌ನಿಂದ 4.29 ಕೋಟಿ ಟನ್‌ಗೆ ಹೆಚ್ಚಳವಾಗಿದೆ. ವಾಣಿಜ್ಯ ಬೆಳೆಗಳಲ್ಲಿ ಕಬ್ಬು 45.46 ಕೋಟಿ ಟನ್‌ನಷ್ಟು ಉತ್ಪಾದನೆ ಆಗಿದೆ.

ಆದರೆ, ಹತ್ತಿ ಉತ್ಪಾದನೆ 3.25 ಕೋಟಿ ಬೇಲ್‌ನಿಂದ 2.97 ಕೋಟಿ ಬೇಲ್‌ಗೆ (1 ಬೇಲ್ ಎಂದರೆ 170 ಕೆ.ಜಿ) ಇಳಿದಿದೆ ಎಂದು ತಿಳಿಸಿದೆ.

ಜಪಾನ್ ಬೆಂಬಲಿಸಿದ ಅಮೆರಿಕ

ಜಾರ್ಜ್ ಗ್ಲಾಸ್

ಬೀಜಿಂಗ್/ಟೋಕಿಯೊ (ಪಿಟಿಐ): ತೈವಾನ್ ವಿಚಾರದಲ್ಲಿ ಜಪಾನ್ ಪ್ರಧಾನಿ ಸನೇ ತಕೈಚಿ ಅವರು ಚೀನಾದ ಬಗ್ಗೆ ನೀಡಿದ ಹೇಳಿಕೆ ಕುರಿತು ಅಮೆರಿಕವು ಬಲವಾದ ಬೆಂಬಲವನ್ನು ವ್ಯಕ್ತಪಡಿಸಿದೆ.

'ಎರಡು ರಾಷ್ಟ್ರಗಳ ನಡುವಿನ ಮೈತ್ರಿಕೂಟಕ್ಕೆ ತನ್ನ ಅಚಲ ಬೆಂಬಲವಿದೆ' ಎಂದು ತಿಳಿಸಿದೆ.

'ತೈವಾನ್ ತನ್ನ ಭೂಪ್ರದೇಶ ಎಂದು ಹೇಳಿಕೊಂಡು ಚೀನಾ ಅದರ ಮೇಲೆ ದಾಳಿ ನಡೆಸಿದರೆ, ಆಗ ಜಪಾನ್ ಮಿಲಿಟರಿ ಹಸ್ತಕ್ಷೇಪಕ್ಕೆ ಮುಂದಾಗಬಹುದು' ಎಂದು ತಕೈಚಿ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಈ ಹೇಳಿಕೆಯು ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿತ್ತು. ನ.18ರಂದು ಬೀಜಿಂಗ್‌ನಲ್ಲಿರುವ ಜಪಾನ್‌ನ ರಾಯಭಾರಿ ಎದುರು ಆಕ್ಷೇಪ ದಾಖಲಿಸಿದ್ದ ಚೀನಾ, 'ತಕೈಚಿ ತಕ್ಷಣವೇ ತಮ್ಮ ಹೇಳಿಕೆಯನ್ನು ವಾಪಸ್ ಪಡೆಯಬೇಕು' ಎಂದು ಒತ್ತಾಯಿಸಿತ್ತು.

ಜಪಾನ್ ವಿದೇಶಾಂಗ ಸಚಿವ ತೊಶಿಮಿಟ್ಸು ಮೊಟೆಗಿ ಜೊತೆಗಿನ ಸಭೆಯ ಬಳಿಕ ಮಾತನಾಡಿದ ಜಪಾನ್‌ನ ಅಮೆರಿಕ ರಾಯಭಾರಿ ಜಾರ್ಜ್ ಗ್ಲಾಸ್, 'ತಕೈಚಿ ಹೇಳಿಕೆಗೆ ಚೀನಾವು ನೀಡಿದ ಪ್ರತಿಕ್ರಿಯೆಯು ಪ್ರಚೋದನಕಾರಿಯಾಗಿದೆ' ಎಂದು ತಿಳಿಸಿದ್ದಾರೆ.

'ಚೀನಾದ ನಡೆಯು ಅಸಹಾಯಕತೆ ಹಾಗೂ ಪ್ರಾದೇಶಿಕ ಸ್ಥಿರತೆಯನ್ನು ಹಾಳುಮಾಡುವ ಉದ್ದೇಶ ಹೊಂದಿದೆ' ಎಂದಿದ್ದಾರೆ.

ರೂಟ್ಸ್ ಎಫ್‌ಸಿ ತಂಡಕ್ಕೆ ರೋಚಕ ಗೆಲುವು

ಬೆಂಗಳೂರು: ಸಾಗರ್ ಶೇಖರ್ (90ನೇ ನಿ.) ಅವರು ಅಂತಿಮ ಕ್ಷಣದಲ್ಲಿ ಗಳಿಸಿದ ಗೋಲಿನ ನೆರವಿನಿಂದ ರೂಟ್ಸ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 2–1ರಿಂದ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ತಂಡದ ವಿರುದ್ಧ ರೋಚಕ ಜಯ ದಾಖಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ, ರೂಟ್ಸ್ ಎಫ್‌ಸಿ ತಂಡದ ಎನ್.ರಾಜೀವ್ (43ನೇ ನಿ.) ಮೊದಲಾರ್ಧದ ಮುಕ್ತಾಯದ ವೇಳೆ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಬಳಿಕ, ಯುನೈಟೆಡ್ ತಂಡದ ವಿನಯ್ ಆರ್.(65ನೇ ನಿ.) ಗೋಲು ಹೊಡೆದು ಸಮಬಲ ಸಾಧಿಸಿದರು. ಪಂದ್ಯ ಡ್ರಾದತ್ತ ಸಾಗುತ್ತಿದ್ದಾಗ, ಸಾಗರ್ ಅವರು ಅಮೋಘ ಆಟದೊಂದಿಗೆ ಗೆಲುವಿನ ರೂವಾರಿಯಾದರು.

ದಿನದ ಇನ್ನೊಂದು ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡವು 1–0ಯಿಂದ ಎಚ್‌ಎಎಲ್ ಎಫ್‌ಸಿ ತಂಡವನ್ನು ಮಣಿಸಿತು. ಪರಿಕ್ರಮ ತಂಡದ ಎಚ್.ಕಿಪ್‌ಜೆನ್ (15ನೇ ನಿ.) ಪಂದ್ಯದ ಏಕೈಕ ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಸಂಘಟಿತ ಆಟವಾಡಿದ ಸೌತ್ ಯುನೈಟೆಡ್ ಎಫ್‌ಸಿ 4–0 ಗೋಲುಗಳಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಸುಲಭವಾಗಿ ಸೋಲಿಸಿತು.

ಸೌತ್ ಯುನೈಟೆಡ್ ತಂಡದ ಮೊಹಮ್ಮದ್ ಕೈಫ್ (9ನೇ ನಿ.), ರಿನ್ಸಿದ್ ವಿ. (45 + 2ನೇ ನಿ.), ಪ್ರಜ್ವಲ್ ವಿ. ಗೌಡ (57ನೇ ನಿ.) ಹಾಗೂ ಎಂ. ದನಿ ಯಾಲ್ (79) ಅವರು ತಲಾ ಒಂದು ಗೋಲು ಗಳಿಸಿದರು.

ರೈಸಿಂಗ್ ಸ್ಟಾರ್: ಭಾರತ ಎ ಅಭಿಯಾನಕ್ಕೆ ತೆರೆ


ಜಿತೇಶ್ ಶರ್ಮಾ

ದೋಹಾ (ಪಿಟಿಐ): ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ತೋರಿದ ನಿರ್ಲಕ್ಷ್ಯಕ್ಕೆ ಭಾರತ ಎ ತಂಡವು ಭಾರಿ ದಂಡ ತೆತ್ತಿತು. ಶುಕ್ರವಾರ ನಡೆದ ಏಷ್ಯಾ ಕಪ್ ರೈಸಿಂಗ್ ಸ್ಟಾರ್ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ಎ ವಿರುದ್ಧ ಸೋತು ಅಭಿಯಾನವನ್ನು ಮುಗಿಸಿತು.

ರೋಚಕವಾಗಿದ್ದ ಪಂದ್ಯವನ್ನು ಸೂಪರ್ ಓವರ್‌ನಲ್ಲಿ ಗೆದ್ದ ಬಾಂಗ್ಲಾ ತಂಡವು ಫೈನಲ್‌ಗೆ ಮುನ್ನಡೆಯಿತು. ಭಾನುವಾರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪಾಕಿಸ್ತಾನ ಶಾಹೀನ್ಸ್ ತಂಡವನ್ನು ಎದುರಿಸಲಿದೆ. ಎರಡನೇ ಸೆಮಿಫೈನಲ್‌ನಲ್ಲಿ ಶಾಹೀನ್ಸ್ ತಂಡವು 5 ರನ್‌ಗಳಿಂದ ಶ್ರೀಲಂಕಾ ಎ ತಂಡವನ್ನು ಮಣಿಸಿತು.

ಭಾರತದ ಬೌಲರ್‌ಗಳು ಎಡವಿದ್ದರಿಂದ ಬಾಂಗ್ಲಾ ತಂಡವು 6 ವಿಕೆಟ್‌ಗೆ 194 ರನ್‌ಗಳ ಉತ್ತಮ ಮೊತ್ತ ಕಲೆಹಾಕಿತು. ಜಿತೇಶ್ ಶರ್ಮಾ ನೇತೃತ್ವದ ಭಾರತ ತಂಡ ಅಷ್ಟೇ ರನ್ (6ಕ್ಕೆ 194) ಗಳಿಸಿದ್ದರಿಂದ ಪಂದ್ಯವು ಸೂಪರ್ ಓವರ್‌ನತ್ತ ಸಾಗಿತು.

ಜಿತೇಶ್ ಮತ್ತು ರಮಣದೀಪ್ ಅವರು ಸೂಪರ್ ಓವರ್‌ನಲ್ಲಿ ಬ್ಯಾಟಿಂಗ್‌ಗೆ ಇಳಿದರು. ವೇಗಿ ರಿಪನ್ ಮಂಡಲ್ ಅವರ ಮೊದಲ ಎಸೆತದಲ್ಲೇ ಜಿತೇಶ್ ಕ್ಲೀನ್ ಬೌಲ್ಡ್ ಆದರು. ಮುಂದಿನ ಎಸೆತದಲ್ಲಿ ಅಶುತೋಷ್ ಶರ್ಮಾ ವಿಕೆಟ್ ಒಪ್ಪಿಸಿದರು. ಬಾಂಗ್ಲಾ ತಂಡವು ಮೊದಲ ಎಸೆತದಲ್ಲೇ ಯಾಸಿರ್ ಅಲಿಯನ್ನು ಕಳೆದುಕೊಂಡರೂ, ಲೆಗ್ ಸ್ಪಿನ್ನರ್ ಸುಯಾಶ್ ಶರ್ಮಾ ಹಾಕಿದ ವೈಡ್‌ನಿಂದ ಗೆಲುವಿಗೆ ಬೇಕಿದ್ದ ಒಂದು ರನ್ ಲಭಿಸಿತು.

ಇದಕ್ಕೂ ಮುನ್ನ ಟಾಸ್ ಗೆದ್ದ ಭಾರತ ಎ ಫೀಲ್ಡಿಂಗ್ ಆಯ್ದುಕೊಂಡಿತು. ಹಬೀಬುರ್ ರೆಹಮಾನ್ (65;46ಎ, 4x3, 6x6) ಮತ್ತು ಎಸ್.ಎಂ. ಮೆಹರೋಬ್ (ಔಟಾಗದೇ 48; 18ಎ, 4x1, 6x6) ಬಿರುಸಿನ ಬ್ಯಾಟಿಂಗ್ ನೆರವಿನಿಂದ ಬಾಂಗ್ಲಾ 'ದ್ವಿಶತಕ'ದ ಸನಿಹ ಸಾಗಿತು.

ಗುರಿ ಬೆನ್ನಟ್ಟಿದ ಭಾರತ ಎ ತಂಡಕ್ಕೆ ವೈಭವ್ ಸೂರ್ಯವಂಶಿ (38; 15ಎ, 4x2, 6x4) ಮತ್ತು ಪ್ರಿಯಾಂಶ್ ಆರ್ಯ (44; 23ಎ, 4x4, 6x3) ಉತ್ತಮ ಆರಂಭ ಒದಗಿಸಿದ್ದರು. ಈ ಜೋಡಿ 3.1 ಓವರ್‌ಗಳಲ್ಲೇ 50 ರನ್ ಗಳಿಸಿತ್ತು. ನಂತರದಲ್ಲಿ ಜಿತೇಶ್ (33;23ಎ) ಮತ್ತು ನೇಹಲ್ ವಧೇರಾ (ಔಟಾಗದೇ 32;29ಎ) ತಂಡದ ಹೋರಾಟಕ್ಕೆ ಬಲ ತುಂಬುವ ಪ್ರಯತ್ನ ಮಾಡಿದ್ದರು. ಒಂದು ಹಂತದಲ್ಲಿ ಭಾರತದ ಗೆಲುವಿಗೆ 30 ಎಸೆತಗಳಲ್ಲಿ 45 ರನ್ ಅಗತ್ಯವಿತ್ತು, ಏಳು ವಿಕೆಟ್‌ಗಳು ಕೈಯಲ್ಲಿದ್ದವು. ಆದರೆ, ಜಿತೇಶ್ ಔಟಾಗುವುದರೊಂದಿಗೆ ಪಂದ್ಯ ತಿರುವು ಪಡೆಯಿತು.

